

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 19   ಸಂಚಿಕೆ 1   ಡಿಸೆಂಬರ್ 30, 1996 -ಜನವರಿ 5, 1997   ಬೆಲೆ ರೂ. 2.00

ದೇವೇಗೌಡ ಸರಕಾರದ ಜನವಿರೋಧಿ ಆರ್ಥಿಕ ನೀತಿಗಳ ವಿರುದ್ಧ ಪ್ರತಿಭಟನೆಯ ಮೊದಲ ತುಫಾಕಿ

ಪಿಕೆಟಿಂಗ್, ರಸ್ತೆ-ರೈಲು ತಡೆ, ಪಾರ್ಲಿಮೆಂಟ್ ಚಲೋ

ಪುಟ 2

ಸ್ವಾತಂತ್ರ್ಯದ ಬೆಳ್ಳಿ ಹಬ್ಬವನ್ನು ಹೇಗೆ ಆಚರಿಸುವುದು?

ಹಿರಿಯ ಸ್ವಾತಂತ್ರ್ಯ ಹೋರಾಟಗಾರ ನಂತರ ಆ ಹೋರಾಟದ ಕನಸುಗಳನ್ನು ನನಸಾಗಿಸಲು ದುಡಿಯುತ್ತಿರುವ ಸುರ್ಜಿತ್‌ರವರ ಸಲಹೆ

ಪುಟ 4

ಸಂಸತ್ತಿನ ಚಳಿಗಾಲದ ಅಧಿವೇಶನ ಸಾಧಿಸಿದ್ದೇನು?

ಮಹಿಳೆಯರಿಗೆ, ಕಾರ್ಮಿಕರಿಗೆ ಇತರ ಜನವಿಭಾಗಗಳಿಗೆ ನೀಡುವ ವಚನವನ್ನು ಈಡೇರಿಸಲಾಗದ ಸರಕಾರದ ಜಡತೆಯನ್ನು ಪ್ರದರ್ಶಿಸಿದ್ದು

ಪುಟ 7

ಭಾರತ-ಬಾಂಗ್ಲಾ ದೇಶ ಚಾರಿತ್ರಿಕ ಸಂಧಿ

ಎರಡೂ ದೇಶಗಳ ಕೋಮುವಾದಿಗಳನ್ನು, ಮೂಲಭೂತವಾದಿಗಳನ್ನು ಹತಾಶಗೊಳಿಸಿದ ಜನಸಾಮಾನ್ಯರಿಗೆ ಸಂತ ತಂದ ಒಪ್ಪಂದ

ಪುಟ 5

"ಹೊಟ್ಟೆಗೆ ಹಿಟ್ಟು ಮೊದಲು ಜುಟ್ಟಿಗೆ ಮಲ್ಲಿಗೆ ಆಮೇಲೆ"

ವಾರದ ಆರ್ಥಿಕ ಟಿಪ್ಪಣಿಗಳು

ಪುಟ 5

'ಕನ್ನಡದ ಕೆಲಸಗಳನ್ನು ಆಡದೇ ಮಾಡಿ ರೂಢಿಯೊಳಗೆ ಉತ್ತಮ ಎನಿಸಿಕೊಳ್ಳುವಂಥ ಸರಕಾರ ಇನ್ನೂ ಕನಸಾಗಿಯೇ ಉಳಿದಿದೆ'

ಪುಟ 6

ನಮ್ಮನ್ನಾಳುವವರ ನೈತಿಕ ಪತನಕ್ಕೆ ಮಿತಿಯೇ ಇಲ್ಲವೇ?

1996ರ ಉದಯವಾಗುತ್ತಿದ್ದಂತೆ ಹವಾಲಾ ಹಗರಣದ ದುರ್ವಾಸನೆ ದೇಶವನ್ನೆಲ್ಲಾ ವ್ಯಾಪಿಸಿತು. ಆದರೆ ಅದು ಕೇವಲ ಆರಂಭವಾಗಿತ್ತು. ನಂತರ ಹಗರಣಗಳ ಸಾಲು ಸಾಲೇ ವರ್ಷವಿಡೀ ಬಯಲಿಗೆ ಬಂದಾಗ ಜನ ಅವಕ್ಕಾದರು. ಭ್ರಷ್ಟಾಚಾರ ಎಂಬುದು ನಮಗೆ ಹೊಸ ಪದವೇನಲ್ಲ. ಆದರೆ 1996 ಬಯಲಿಗೆ ತಂದ ಭ್ರಷ್ಟಾಚಾರದ ದೈತ್ಯರೂಪ ಎಲ್ಲರನ್ನೂ ಅವಕ್ಕಾಗಿಸಿತು. ರಾಜಕಾರಣಿಗಳ, ವ್ಯಾಪಾರಸ್ಥರ, ಅಧಿಕಾರಶಾಹಿಗಳ ಹಾಗೂ ಕ್ರಿಮಿನಲ್ ವ್ಯಕ್ತಿಗಳ ದುಷ್ಟಕೂಟ ದೇಶದ ಕೋಟಿಗಟ್ಟಲೇ ರೂಪಾಯಿ ಗಳನ್ನು ಲೂಟಿ ಹೊಡೆದ ರೀತಿ ಇಡೀ ದೇಶವನ್ನೆಲ್ಲಾ ನಡುಗಿಸಿತು.

ವರ್ಷದ ಮಧ್ಯಭಾಗದಲ್ಲಿ ಹವಾಲಾ ಸರಕಾರ, ಪ್ರಧಾನಿಗಳು ಅಧಿಕಾರ ಕಳೆದುಕೊಂಡರು. ಹವಾಲಾ ರಥಯಾತ್ರೆಯ ಮಂದಿಯೂ ಕೇಂದ್ರದಲ್ಲಿ ಅಧಿಕಾರ ನಡೆಸುವ ತಮ್ಮ ಬಹುದಿನದ ಕನಸನ್ನು ಕೈ ಬಿಡಬೇಕಾಗಿಯಿತು.1996ರ ಅಂತ್ಯದ ವೇಳೆಗೆ ಮಾಜಿ ಪ್ರಧಾನಿಗಳು ಕಟಕಟೆಯಲ್ಲಿ ಬಂದು ನಿಲ್ಲಬೇಕಾಯಿತು. ತಮಿಳುನಾಡಿನ ಮಾಜಿ ಮುಖ್ಯಮಂತ್ರಿಗಳು ಸೆಂಟ್ರಲ್ ಜೈಲಿನಲ್ಲಿ ನ್ಯಾಯಾಂಗಕಸ್ಟಡಿಯಲ್ಲಿಇರಬೇಕಾಗಿಬಂದಿದೆ. ಬಹುರಾಷ್ಟ್ರೀಯ ಕಂಪನಿ ಐಟಿಸಿಯಮಾಜಿ,ಹಾಲಿಚೆರ್ಮನ್‌ಗಳುನ್ಯಾಯಾಂಗ ಕಸ್ಟಡಿಗೆ ಹೋಗಬೇಕಾಗಿ ಬಂದಿದೆ.

ಕಾನೂನಿನ ಕಣ್ಣಿನಲ್ಲಿ ಎಲ್ಲರೂ ಸಮಾನರಲ್ಲ!

ಆದರೆ ಇದುವರೆಗೂ ಯಾವುದೇ ಮಂತ್ರಿ, ಅಧಿಕಾರಿ ಅಥವಾ ವ್ಯಾಪಾರಸ್ಥ ಉನ್ನತ ಮಟ್ಟದ ಭ್ರಷ್ಟಾಚಾರಕ್ಕಾಗಿ ಶಿಕ್ಷೆ ಅನುಭವಿಸಿಲ್ಲ. ಅಷ್ಟೇ ಅಲ್ಲ ಅವರು ಕಾನೂನನ್ನು ಉಲ್ಲಂಘಿಸಿದ್ದಕ್ಕೆ ಪುರಾವೆ ಮೇಲ್ನೋಟಕ್ಕೆ ಕಂಡು ಬಂದಿದ್ದರೂ ಇವರನ್ನೆಲ್ಲಾ ಬಂಧಿಸಬಾರದು ಎಂಬ ವಾದ 1996 ಅಂತ್ಯವಾಗುತ್ತಿದ್ದಂತೆ ವ್ಯಾಪಕವಾಗುತ್ತಿದೆ.ಈಮಂತ್ರಿ,ಅಧಿಕಾರಿ, ಉದ್ಯಮಿ, ವ್ಯಾಪಾರಸ್ಥರು ಸಮಾಜದ ಗಣ್ಯ ವ್ಯಕ್ತಿಗಳು, ಅವರಿಗೆ ಸಾಮಾನ್ಯ ನಾಗರೀಕರಿಗೆ ಅನ್ವಯವಾಗುವ ಕಾನೂನುಗಳನ್ನು ಅನ್ವಯಿಸಬಾರದು, ಎಷ್ಟೆಂದರೂ ಅವರೇ ಕಾನೂನುಗಳನ್ನು ಮಾಡುವವರು ತಾನೇ?-ಇದು ಕೆಲವರ ವಾದ. 'ನಿಜವಾಗಿಯೂ ಈಗಿನ ಭಾರತದ ಆಳುವ ಜನಗಳ ನೈತಿಕ ಅಧಃಪತನ, ಎಂತಹ ಕೀಳು ಮಟ್ಟ ತಲುಪಿದೆಯೆಂಬುದಕ್ಕೆ ಇದಕ್ಕಿಂತ ದೊಡ್ಡ ಟಿಪ್ಪಣಿ ಬೇರೆ ಬೇಕೆ?" ಎಂದು ಪ್ರಶ್ನಿಸಿದ್ದಾರೆ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಪ್ರಕಾಶ್ ಕಾರಟ್.

ಕ್ರಿಮಿನಲ್ ಪ್ರೊಸೀಜರ್ ಕೋಡ್, ಭ್ರಷ್ಟಾಚಾರ ತಡೆ ಶಾಸನ ಇತ್ಯಾದಿಗಳನ್ನು ಬಳಸಿ ನ್ಯಾಯಾಲಯಗಳು ಭ್ರಷ್ಟ ರಾಜಕಾರಣಿಗಳ ಮೇಲೆ ಬಲೆ ಬೀಸಿರುವುದನ್ನು ಕಂಡು ಹೌಹಾರಿದ ಹಲವು ಎಂ.ಪಿ.ಗಳು ಸಮಾಲೋಚನೆಗಳನ್ನು ನಡೆಸಿ ಈ ಶಾಸನಗಳಲ್ಲಿ ಹೇಳಿದ 'ಸಾರ್ವಜನಿಕ ಸೇವಕರು' ಎಂಬ ಪದವನ್ನು ತಿದ್ದುಪಡಿ ಮಾಡಿ ಅದು ಎಂಪಿಗಳಿಗೆ, ಎಂಎಲ್‌ಎಗಳಿಗೆ ಅನ್ವಯಿಸದಂತೆ ಮಾಡಬೇಕೆಂಬ ಸೂಚನೆ ಕೊಟ್ಟಿದ್ದಾರೆ. ಹಾಲಿ ಪ್ರಧಾನಿ ದೇವೇಗೌಡರು, ಮಾಜಿ ಪ್ರಧಾನಿಗಳಾದ ಚಂದ್ರಶೇಖರ್, ವಾಜಪೇಯಿಯವರಿಗೆ ಈ ತಿದ್ದುಪಡಿ ಬಗ್ಗೆ ಸಮ್ಮತಿ ಇದೆಯಂತೆ!

ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಹವಾಲಾ ಕಾಂಡದಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ರಾಜಕಾರಣಿಗಳು ಸಿಲುಕಿಕೊಂಡಿದ್ದರು-ಎಡಪಕ್ಷಗಳನ್ನು ಬಿಟ್ಟು. ಅದೇ ರೀತಿ ಮೇಲೆ ಹೇಳಿದ ತಿದ್ದುಪಡಿಗೂ ಎಲ್ಲಾ ರಾಜಕೀಯ ಪಕ್ಷಗಳ ಸಮ್ಮತಿಯಿದೆ- ಎಡಪಕ್ಷಗಳನ್ನು ಮಾತ್ರ ಬಿಟ್ಟು.

ಸಿಪಿಐ(ಎಂ) ಇಂತಹ ಒಂದು 'ಸರ್ವಸಮ್ಮತಿ'ಯ ಭಾಗವಾಗುವುದು ಸಾಧ್ಯವಿಲ್ಲ, ಇಂತಹ ತಿದ್ದುಪಡಿ ತರುವ ಪ್ರಯತ್ನವನ್ನು ಖಡಾಖಂಡಿತವಾಗಿ ವಿರೋಧಿಸುವುದಾಗಿ ಪ್ರಕಾಶ್ ಕಾರಟ್ ಹೇಳಿದ್ದಾರೆ. ಶಾಸಕಾಂಗಗಳ ಸದಸ್ಯರು 'ಸಾರ್ವಜನಿಕ ಸೇವಕರು' ಹೌದೇ ಅಲ್ಲವೇ ಎಂದು ಕಾನೂನಿನ-ಸಂವಿಧಾನದ ಪಾಯಿಂಟುಗಳ ಮೇಲೆ ಚರ್ಚೆ ನಡೆಯಲು ನಮ್ಮದೇನೂ ಅಭ್ಯಂತರವಿಲ್ಲ, ಆದರೆ ಸರಕಾರದ ನೀತಿಗಳ ಮೇಲೆ ಪ್ರಭಾವ ಬೀರಲು ಎಂಪಿ,ಎಂಎಲ್‌ಎಗಳಿಗೆಲಂಚನೀಡುವ, ಪಟ್ಟಭದ್ರ ಹಿತಾಸಕ್ತಿಗಳ ಪ್ರತಿಪಾದಕರಾಗಿ ವರ್ತಿಸುವ ಭ್ರಷ್ಟ ಆಚರಣೆಗಳಿಗೆ ಭ್ರಷ್ಟಾಚಾರ ತಡೆ ಶಾಸನದಿಂದ ರಿಯಾಯ್ತಿ ಕೊಡಲೇ ಬಾರದು ಎಂದು ಪ್ರಕಾಶ್ ಕಾರಟ್ ಸ್ಪಷ್ಟವಾಗಿ ಸಾರಿದ್ದಾರೆ. **ಆಹಾ! ಎಂತಹ ವರ್ಗ ಸೌಹಾರ್ದ!**

ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಜಯಲಲಿತಾರ ಬಂಧನದ ನಂತರದ ಸಂಸತ್ತಿನ ಎರಡೂ ಸದನಗಳಲ್ಲಿ ಕಾಂಗ್ರೆಸ್(ಐ) ಮತ್ತುಬಿಜೆಪಿ ಸದಸ್ಯರು ಭಾರೀ ಕೋಲಾಹಲ ಎಬ್ಬಿಸಿದರು. ಯಾಕೆ? ಆಕೆಯ ಮನೆಯಲ್ಲಿ 40 ಕೆಜಿ ಚಿನ್ನದ ಆಭರಣಗಳು, ಅರ್ಧ ಟನ್‌ಬೆಳ್ಳಿ, ಸಾವಿರಾರು ಸೀರೆ, ಬಟ್ಟೆ, ಚಪ್ಪಲಿಗಳು, ರಾಶಿ ಬಿದ್ದ ಸುದ್ದಿ ಕೇಳಿ ಅವರು ಸಿಟ್ಟಿಗೆದ್ದಿದ್ದರೆ? ಖಂಡಿತಾ ಅಲ್ಲ. ಜಯಲಲಿತಾರನ್ನು ಬಂಧಿಸಿದ ರೀತಿ ಅತ್ಯಂತ ನಾಚಿಕೆಗೇಡು, ಆಕೆಯೊಡನೆ ನಡೆದುಕೊಳ್ಳುವ ರೀತಿ ರಾಜಕೀಯ ಹಗೆಸಾಧನೆಯ ಪ್ರಯತ್ನ ಎಂದು ಕಾಂಗ್ರೆಸ್ಸಿನ ಪ್ರಿಯರಂಜನ್ ದಾಸ್ ಮುನ್ಶಿ ಗುಡುಗಿದರೆ, ಬಿಜೆಪಿಯ ಹಿರಿಯ ಸದಸ್ಯ ಕೆ.ಆರ್.ಮಲ್ಕಾನಿ ಇಂತಹ 'ಹಗೆ ಸಾಧಕ' ಕೃತ್ಯಗಳ ವಿರುದ್ಧ ಎಚ್ಚರಿಕೆ ನೀಡಿದರು! ಇಂದಿರಾಗಾಂಧಿಯನ್ನು ಬಂಧಿಸಿ ಹಿಂದಿನ ಒಂದು ಸರಕಾರ ಅದಕ್ಕೆ ಭಾರೀ ಬೆಲೆ ತೆತ್ತಿತ್ತು, ಇತಿಹಾಸ ಮತ್ತೆ ಮರುಕಳಿಸಬಹುದು ಎಂದು ಈ ಬಿಜೆಪಿ ಮುಖಂಡ ಹಳಹಳಿಸಿದರು! ಬಂಡವಾಳಶಾಹಿ ರಾಜಕಾರಣಿಗಳಲ್ಲಿ ಎಂತಹ ಸೌಹಾರ್ದತೆ!


ಕಾಂಗ್ರೆಸ್ಸಿನವರು ಭ್ರಷ್ಟಾಚಾರಿಗಳ ರಕ್ಷಣೆಗೆ ಧಾವಿಸುವುದು ಈಗ ಬಹಳ ಜನಕ್ಕೆ ವಿಶೇಷವೆನಿಸದು. ಆದರೆ ಬಿಜೆಪಿಯೂ ಅಷ್ಟೇ ತವಕದಿಂದ 1996ರಲ್ಲಿ ಹಲವು ಬಾರಿ ಧಾವಿಸಿ ಬಂದಿರುವುದರಿಂದ ಅದು ಕೂಡಾ ಕಾಂಗ್ರೆಸ್‌ನಂತಹುದೇ ಮಾದರಿಯ ಒಂದು ಬಂಡವಾಳಶಾಹಿ-ಭೂಮಾಲಕರ ಪಕ್ಷ, ಅದೊಂದು ಭಿನ್ನ ರೀತಿಯ ಪಕ್ಷ ಎಂಬುದು ಕೇವಲ ಬೊಗಳೆ ಎಂಬುದು ಬಟ್ಟಬಯಲಾಗಿದೆ.

ನರಸಿಂಹರಾಯರನ್ನು ಕಟಕಟೆಗೆ ಹತ್ತಿಸಿದ್ದನ್ನೂ, ಜಯಲಲಿತಾರನ್ನು ಬಂಧಿಸಿದ್ದನ್ನೂ ಕಂಡು ಆಳುವ ವರ್ಗಗಳ ರಾಜಕಾರಣಿಗಳು ಹೌಹಾರಿದರೆ, ಐಟಿಸಿಯಮುಖ್ಯಸ್ಥರುಗಳನ್ನುಬಂಧಿಸಿದ್ದನ್ನುಕಂಡು ದೊಡ ದೊಡ್ಡ ಉದ್ಯಮಿಗಳೆಲ್ಲಾ ಬೊಗಳಿದ್ದೇ ಬೊಗಳಿದ್ದು. ಇನ್ನೊಂದು ವಿಶೇಷವೆಂದರೆ ಶಿವಸೇನೆಯ ಮುಖ್ಯಸ್ಥ ಬಾಳಾಠಾಕ್ರೆಎಂದಿನಂತೆತನ್ನಒರಟುರೀತಿಯಲ್ಲಿ ಈ ಭ್ರಷ್ಟ ಉದ್ಯಮಿಗಳ ರಕ್ಷಣೆಗೆ ಧಾವಿಸಿದರು.ಛಾಬ್ರಿಯಾಗಳು,ಮಹೇಂದ್ರಗಳು ಇತ್ಯಾದಿ ಉದ್ಯಮಿಗಳ ಮನೆಗಳಿಗೆ ಧಾಳಿ ಮಾಡಬೇಡಿ ಎಂದುಆತ ಪ್ರಧಾನಿ ದೇವೇಗೌಡರನ್ನು ಎಚ್ಚರಿಸಿದರು! ಏಕೆ? ಏಕೆಂದರೆ ಈ ಬಜಾಜ್‌ಗಳು, ಹಿಂದೂಜಾಗಳು, ಟಾಟಾಗಳು, ಅಂಬಾನಿಗಳು ದೇಶ ಕಟ್ಟುವವರು, ಆದ್ದರಿಂದ ಹಿಂದುತ್ವದ ಕಾವಿ ಸದಾ ಎಲ್ಲಾ ಭ್ರಷ್ಟ ಆಚರಣೆಗಳಲ್ಲಿ ಅವರ ಬೆಂಬಲಕ್ಕಿದೆ ಎಂದು ಅವರು ಅಭಯ ಹಸ್ತ ತೋರಿದ್ದಾರೆ.

ಉದಾರೀಕರಣವೆಂದರೆ ಭ್ರಷ್ಟಾಚಾರಕ್ಕೆ ಲೈಸೆನ್ಸೇ?

ಈ ಮಹಾನುಭಾವರುಗಳ 'ಮಹಾನತೆ'ಯ ಬಗ್ಗೆಖ್ಯಾತಉದ್ಯಮಿಕೆ.ಕೆ.ಬಿರ್ಲಾರವರಉದ್ಗಾರವಂತೂಇನ್ನೊಂದುಆಣಿಮುತ್ತು. ಈತ ಕಾಂಗ್ರೆಸ್(ಐ) ಎಂ.ಪಿ. ಕೂಡ ಎಂಬುದು ಗಮನಾರ್ಹ. ಹೀಗೆ ರಾಜಕಾರಣಿಗಳನ್ನು, ಉದ್ಯಮಿಗಳ ಮುಖ್ಯಸ್ಥರನ್ನು ಬಂಧಿಸಿದರೆ 'ಆರ್ಥಿಕ ಸುಧಾರಣೆಗಳ ಪ್ರಕ್ರಿಯೆಯಲ್ಲಿ ಜನಗಳ ವಿಶ್ವಾಸವೇ ಹಾರಿ ಹೋಗುತ್ತದೆ" ಎಂದು ಅವರು ಬೇಸರ ವ್ಯಕ್ತಪಡಿಸಿದ್ದಾರೆ. ಅಂದರೆ ಉದಾರೀಕರಣವೆಂದರೆ ದುಡ್ಡು ಮಾಡಲು, ಲಾಭದೋಚಲು ಯಾವುದೇ ನೀತಿ-ನಿಯಮಗಳ, ಕಾನೂನುಗಳ ಅಡ್ಡಿಯಿರದ ನೀತಿ ಎಂಬ ಅರ್ಥವೇ? 'ಸಾಧ್ಯವಾದಷ್ಟು ಒಬ್ಬ ವ್ಯಕ್ತಿಯ ಬಂಧನ ವನ್ನು ತಪ್ಪಿಸಬೇಕು" ಎಂದು ಅವರು ಸಲಹೆ ಮಾಡಿದ್ದಾರೆ. ಆದರೆ ಇದು ಬಲಿಷ್ಠ ರಾಜಕಾರಣಿಗಳಿಗೆ, ದೊಡ್ಡ ಉದ್ಯಮಿಗಳಿಗೆ ಮಾತ್ರ ಅನ್ವಯವಾಗುತ್ತದೆ. ಈ ಕೆ.ಕೆ.ಬಿರ್ಲಾರ ಕಾರ್ಖಾನೆಯಸಾಮಾನ್ಯಕಾರ್ಮಿಕರಿಗೂ ಈಸಲಹೆಅನ್ವಯವಾಗುತ್ತದೆಯೇಎಂದು ಕೇಳಿದರೆ ಆತಹೌಹಾರುತ್ತಾರೆ.ಕಾರ್ಮಿಕ ಸಂಘದ ಚಟುವಟಿಕೆಗಳನ್ನು ನಡೆಸಿದವರನ್ನು ಬಂಧಿಸುವುದು ಎಷ್ಟು ಸಾಮಾನ್ಯ ಸಂಗತಿ ಎಂಬುದು ಎಲ್ಲರಿಗೂ ಗೊತ್ತು.

ಈ ನಿಲುವಿನಲ್ಲಿ ಎಂತಹ ವರ್ಗ ಪಕ್ಷಪಾತ ಧೋರಣೆ ಇದೆ ಎಂಬುದನ್ನು ಶ್ರಮಜೀವಿಜನಗಳುಅರಿಯಬೇಕಾಗಿದೆ. ದೇಶದ ಲೂಟಿಯನ್ನು ತಪ್ಪಿಸಬೇಕಾದರೆಈಬಂಡವಾಳಶಾಹಿ-ಭೂಮಾಲಕರ, ರಾಜಕಾರಣಿಗಳ ನಿಜ ಸ್ವರೂಪವನ್ನು ನಾವೆಲ್ಲರೂ ಅರಿಯಬೇಕಾಗಿದೆ. □



"ಉನ್ನತ ಉದ್ಯಮಿಗಳು ಮತ್ತು ರಾಜಕಾರಣಿಗಳನ್ನು ವಿಶೇಷ ರೀತಿಯಲ್ಲಿ ಕಾಣಬೇಕು ಎಂಬ ಕೆ.ಕೆ.ಬಿರ್ಲಾರವರ ವಾದಗಳು, ಜಯಲಲಿತಾರಿಗೆ "ಕಿರುಕುಳ" ಕೊಡಲಾಗುತ್ತಿದೆ ಎಂಬ ಬೊಬ್ಬೆ ಹಾಗೂ ಎಂಪಿ.ಗಳನ್ನು ಮತ್ತು ಚುನಾಯಿತ ಪ್ರತಿನಿಧಿಗಳನ್ನು ಭ್ರಷ್ಟಾಚಾರ ತಡೆ ಕಾನೂನಿಗೆ ಒಳಪಡಿಸಬಾರದು ಎಂಬ ಪ್ರಸ್ತಾವನೆ ಇವೆಲ್ಲಾ ಕಾನೂನಿನ ಎದುರು ಎಲ್ಲಾ ನಾಗರೀಕರು ಸಮಾನರು ಎಂಬ ನೀತಿಯ ಮೇಲೆ ಮಾಡಿರುವ ಆಘಾತ. ನಿಜವಾದ ಸಮಾನತೆ ಯೆಂಬುದನ್ನು ಸಾಧಿಸುವುದು ಒಂದು ಬಂಡವಾಳಶಾಹೀ ಸಮಾಜದಲ್ಲಿ ಸಾಧ್ಯವಿಲ್ಲ, ಆದರೆ ಇಂದು ಭ್ರಷ್ಟಾಚಾರಿಗಳನ್ನು ರಕ್ಷಿಸಲು ಮತ್ತು ಆಳುವ [illegible] ಮಂದಿಯ ಲಂಚಕೋರತನವನ್ನು ರಕ್ಷಿಸಲು ಸಮಾನತೆಯ ತೋರಿಕೆಯನ್ನೂ ಕೂಡಾ ಧ್ವಂಸ ಮಾಡುವ ಪ್ರಯತ್ನ ನಡೆದಿದೆ.

- ಪ್ರಕಾಶ್ ಕಾರಟ್
ಸಿಪಿಐ(ಎಂ) ಮುಖಂಡರು

ದೇವೇಗೌಡ ಸರಕಾರದ ವಿರುದ್ಧ ಪ್ರತಿಭಟನೆಯ ಮೊದಲ ತುಫಾಕಿ

ಜನವಿರೋಧಿ ಆರ್ಥಿಕ ನೀತಿಗಳ ವಿರುದ್ಧ ಸಾಮೂಹಿಕ ಕಾರ್ಯಾಚರಣೆ

ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆ ಡಿಸೆಂಬರ್ 16 ರಂದು ನವದೆಹಲಿಯಲ್ಲಿ ಏರ್ಪಡಿಸಿದ್ದ ರಾಷ್ಟ್ರೀಯ ಸಮಾವೇಶ ಸರ್ವಸಮ್ಮತಿಯಿಂದ ಒಂದು ಕಾರ್ಯಾಚರಣೆಯ ಕಾರ್ಯಕ್ರಮವನ್ನು ಅಂಗೀಕರಿಸಿ ಫೆಬ್ರವರಿ 25, 1997ರಂದು ಎಲ್ಲಾ ಕೇಂದ್ರ ಸರಕಾರಿ ಕಚೇರಿಗಳ ವಿರುದ್ಧ ಪಿಕೆಟಿಂಗ್ ನಡೆಸಬೇಕು, ಮಾರ್ಚ್ 28, 1997 ರಂದು ಎರಡುಗಂಟೆಗಳ ರಸ್ತೆ ತಡೆ, ರೈಲುತಡೆ ನಡೆಸಿ ದೇವೇಗೌಡ ಸರಕಾರ ಅನುಸರಿಸುತ್ತಿರುವ ಜನ-ವಿರೋಧಿ ಆರ್ಥಿಕ 'ಸುಧಾರಣೆ'ಗಳ ಬಗ್ಗೆ ಜನಗಳು ಪ್ರತಿಭಟನೆಯನ್ನು ವ್ಯಕ್ತಪಡಿಸಬೇಕು ಎಂದು ಕರೆ ನೀಡಿದೆ. ಈ ಕಾರ್ಯಾಚರಣೆಗಳ ಸಿದ್ಧತೆಗಾಗಿ ಫೆಬ್ರವರಿ 15 ರೊಳಗೆ ಜಿಲ್ಲಾ ಮಟ್ಟದ ಹಾಗೂ ರಾಜ್ಯಮಟ್ಟದ ಸಮಾವೇಶಗಳನ್ನು ನಡೆಸಲಾಗುವುದು ಎಂದು ರಾಷ್ಟ್ರೀಯ ವೇದಿಕೆ ತಿಳಿಸಿದೆ.

ಈ ಸಮಾವೇಶದಲ್ಲಿ ಕೇಂದ್ರ ಕಾರ್ಮಿಕ ಸಂಘಟನೆಗಳು, ರಾಷ್ಟ್ರೀಯ ಒಕ್ಕೂಟಗಳು, ರೈತರು, ಕೃಷಿ ಕೂಲಿಕಾರರು, ವಿದ್ಯಾರ್ಥಿಗಳೂ ಯುವ ಜನರು ಹಾಗೂ ಮಹಿಳೆಯರನ್ನು ಪ್ರತಿನಿಧಿಸುವ ಸುಮಾರು 50 ಸಾಮೂಹಿಕ ಸಂಘಟನೆಗಳ 2000 ಪ್ರತಿನಿಧಿಗಳು ದೇಶದ ಎಲ್ಲಾ ರಾಜ್ಯಗಳಿಂದ ಬಂದು ಭಾಗವಹಿಸಿದ್ದರು, ವಿವಿಧ ಸಾಮೂಹಿಕ ಸಂಘಟನೆಗಳನ್ನು ಪ್ರತಿನಿಧಿಸುವ 15 ಸದಸ್ಯರ ಅಧ್ಯಕ್ಷ ಮಂಡಳಿ ಈ ಸಮಾವೇಶವನ್ನು ನಡೆಸಿಕೊಟ್ಟಿತು.

ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣವೆಂಬ ನೀತಿಗಳ ಪ್ರಕಾರ ಸರಕಾರ ಕೈಗೊಳ್ಳುತ್ತಿರುವ ಸುಧಾರಣೆಗಳ ಫಲವಾಗಿ ಎಲ್ಲಾ ಜನ ವಿಭಾಗಗಳ ಪರಿಸ್ಥಿತಿ ಹದಗೆಡುತ್ತಿದೆ ಎಂದು ಬೊಟ್ಟು ಮಾಡಿ ತೋರಿಸುವ ಘೋಷಣೆ ಎಲ್ಲಾ ಸಾಮೂಹಿಕ ಸಂಘಟನೆಗಳ 15 ಪ್ರಧಾನ ಬೇಡಿಕೆಗಳನ್ನು ನಿರ್ದಿಷ್ಟವಾಗಿ ನಮೂದಿಸಿದೆ.

ಎಲ್ಲಾ ಸಾಮೂಹಿಕ ಸಂಘಟನೆಗಳ ಪರವಾಗಿ ಸುಮಾರು 30 ಪ್ರತಿನಿಧಿಗಳು ಮಾತನಾಡಿ ಸಮಾನ ಕನಿಷ್ಠ ಕಾರ್ಯಕ್ರಮದಲ್ಲಿ ಕೆಲವು ಸಕಾರಾತ್ಮಕ ಅಂಶಗಳಿಗೆ ತಾನು ಬದ್ಧ ಎಂದು ಸಾರಿರುವ ದೇವೇಗೌಡ ಸರಕಾರವೂ ಹಿಂದಿನ ನರಸಿಂಹರಾವ್ ಸರಕಾರ ಅನುಸರಿಸಿದ ಸಾಮ್ರಾಜ್ಯಶಾಹಿ ಹೇರಿದ ನೀತಿಗಳನ್ನೇ ಅನುಸರಿಸುತ್ತಿದೆ ಎಂದು ತೀವ್ರವಾಗಿ ಟೀಕಿಸಿದರು.

ಶ್ರಮಜೀವಿಗಳ ಪರಿಸ್ಥಿತಿ ಹದಗೆಡುತ್ತಲೇ ಇದೆ

ಕಾರ್ಖಾನೆಗಳು ಮುಚ್ಚುತ್ತಲೇ ಇವೆ. ಹೆಚ್ಚೆಚ್ಚು ಉದ್ದಿಮೆಗಳು ರೋಗಗ್ರಸ್ಥವಾಗುತ್ತಿವೆ. ಕಾರ್ಮಿಕರ ಸಂಖ್ಯೆಯಲ್ಲಿ ಕಡಿತ, ಅತಿಹೆಚ್ಚು ಲಾಭ ಮಾಡುತ್ತಿರುವ ಸಾರ್ವಜನಿಕ ವಲಯದ ಉದ್ದಿಮೆಗಳ ಶೇರುಗಳ ಮಾರಾಟ, ಬ್ಯಾಂಕು, ವಿಮೆ, ವಿದ್ಯುತ್, ದೂರಸಂಪರ್ಕ ಮುಂತಾದ ಮಹತ್ವದ ವಲಯಗಳನ್ನು ಖಾಸಗೀಯವರಿಗೆ, ವಿದೇಶಿ ಯರಿಗೆ ತೆರೆದಿರುವ, ಖಾಸಗೀಕರಿಸುವ ಮೂಲಕ ಸಾರ್ವಜನಿಕ ವಲಯವನ್ನೇ ಕಳಚಿ ಹಾಕುವ ಪ್ರಯತ್ನ ಇವೆಲ್ಲವುಗಳಿಂದ ಪರಿಸ್ಥಿತಿ ಉಲ್ಬಣಗೊಳ್ಳುತ್ತಿರುವುದರತ್ತ ಕಾರ್ಮಿಕ ಸಂಘಗಳು ಗಮನ ಸೆಳೆದವು. ಪೇಟೆಂಟ್ ಶಾಸನ ತಿದ್ದುಪಡಿ ಮಾಡಬಾರದೆಂದು ಅವರು ಸರಕಾರವನ್ನು ಎಚ್ಚರಿಸಿದರು. ಸರಕಾರ ತನ್ನ ಸಮಾನ ಕನಿಷ್ಠ ಕಾರ್ಯಕ್ರಮದಲ್ಲಿ ಕಾರ್ಮಿಕ ಸಂಘಗಳಿಗೆ ಗುಪ್ತ ಮತದಾನದ ಮೂಲಕ ಮಾನ್ಯತೆ ನೀಡಲಾಗುವುದು, ಕಾರ್ಖಾನೆಗಳ, ಉದ್ದಿಮೆಗಳ ನಿರ್ವಹಣೆಯಲ್ಲಿ ಕಾರ್ಮಿಕರ ಪಾತ್ರಕ್ಕೆ ಅವಕಾಶ ನೀಡಲಾಗುವುದು ಎಂದು ಭರವಸೆ ನೀಡಿದ್ದರೂ ಅವಿನ್ನೂ ದೂರದ ಕನಸುಗಳಾಗಿಯೇ ಉಳಿದಿವೆ. ದೇಶದ ಶ್ರಮಿಕರ 90% ರಷ್ಟಿರುವ ಅಸಂಘಟಿತ ವಲಯದ ಕಾರ್ಮಿಕರು ಈಗಲೂ ಬಡತನದ ರೇಖೆಗಿಂತ ಕೆಳಗಿರುವ ಕೂಲಿಯಿಂದಲೇ ಬದುಕು ಸಾಗಿಸಬೇಕಾಗಿ ಬಂದಿದೆ. ಸಂಯುಕ್ತರಂಗ ಸರಕಾರ ಅವರ ಪರಿಸ್ಥಿತಿಯನ್ನು ಸುಧಾರಿಸುವ ಮಾತು ಕೊಟ್ಟಿದ್ದರೂ ಏನೂ ಆಗಿಲ್ಲ ಎಂದು ಕಾರ್ಮಿಕ ಪ್ರತಿನಿಧಿಗಳು ಬೇಸರ ವ್ಯಕ್ತಪಡಿಸಿದರು.

ರೈತಾಪಿ ಜನಗಳ ಪ್ರತಿನಿಧಿಗಳು ಭೂಸುಧಾರಣೆಗಳಿಲ್ಲದೆ ಬಡರೈತರು ಅನುಭವಿಸುತ್ತಿರುವ ಶೋಚನೀಯ ಸ್ಥಿತಿಯತ್ತ ಗಮನ ಕೇಂದ್ರೀಕರಿಸಿದರು. ದಟ್ಟದರಿದ್ರ್ಯದಿಂದಾಗಿ ಹತಾಶರಾಗಿ ಅವರು ತಮ್ಮ ಉತ್ಪನ್ನಗಳನ್ನು ಅತಿಕಮ್ಮಿ ಬೆಲೆಯಲ್ಲಿ ಮಾರಬೇಕಾದ ಪರಿಸ್ಥಿತಿಯಿದೆ. ಭೂಮಾಲಕರು ಅವರನ್ನು ವಿಪರೀತ ಬಡ್ಡಿಯ ಸಾಲಗಳಲ್ಲಿ ಸಿಲುಕಿಸಿ ಹಾಕಿದ್ದಾರೆ ಎಂದು ಅವರು ವಿವರಿಸಿದರು.

ಕೃಷಿಕೂಲಿಕಾರರ ಸಂಘಗಳ ಪ್ರತಿನಿಧಿಗಳೂ ಸಮಾನ ಕನಿಷ್ಠ ಕಾರ್ಯಕ್ರಮದಲಿ ವಚನ ನೀಡಿದ್ದರೂ ಕೃಷಿಕೂಲಿಕಾರರ ಸಮಗ್ರ ಶಾಸನವನ್ನು ಇನ್ನೂ ತರದ ಬಗ್ಗೆ ಸರಕಾರವನ್ನು ತೀವ್ರವಾಗಿ ತರಾಟೆಗ ತಗೊಂಡರು. ಕೃಷಿ ಕೂಲಿಕಾರರಿಗೆ ಕನಿಷ್ಠ ಕೂಲಿಯ ಪ್ರಶ್ನೆಯು ನೆನಗುದಿಯಲ್ಲೇ ಇದೆ ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಶಿಕ್ಷಣರಂಗದಲ್ಲೂ ಅದೇ ಖಾಸಗೀಕರಣದ, ವಾಣಿಜ್ಯೀಕರಣ ಹುಚ್ಚು ಹರಡಿದೆ ಎಂದು ವಿದ್ಯಾರ್ಥಿ-ಯುವಜನರ ಪ್ರತಿನಿಧಿಗಳು ಎಲ್ಲರಿಗೂ ಶಿಕ್ಷಣ, ಎಲ್ಲರಿಗೂ ಉದ್ಯೋಗದ ಬೇಡಿಕೆಯನ್ನು ಉಚ್ಚರಿಸಿದರು.

ಎಲ್ಲಾ ಮಹಿಳಾ ಸಂಘಟನೆಗಳ ಪ್ರತಿನಿಧಿಗಳೂ ಸಂಸತ್ತು, ವಿಧಾನ ಸಭೆಗಳಲ್ಲಿ ಮಹಿಳೆಯರಿಗೆ 33% ಮೀಸಲಾತಿಯ ಮಸೂದೆಯ ಬಗ್ಗೆ ಸರಕಾರದ ನಿರ್ಲಕ್ಷ್ಯದ ವಿರುದ್ಧ ದನಿಯೆತ್ತಿದರು. ಮಹಿಳೆರ ಮೇಲೆ ಅತ್ಯಾಚಾರಗಳು ಹೆಚ್ಚುತ್ತಿವೆ ಅವರಲ್ಲಿ ನಿರುದ್ಯೋಗ ಹೆಚ್ಚುತ್ತಿದೆ, ಸಂಬಳದಲ್ಲಿ ತಾರತಮ್ಯ ಮುಂದುವರಿಯುತ್ತಿದೆ, ಮಹಿಳೆಯರ ನಿರ್ದಿಷ್ಟ ಬೇಡಿಕೆಗಳನ್ನು ಉಪೇಕ್ಷಿಸಲಾಗುತಿದೆ, ಸರಕಾರ ಈ ಎಲ್ಲಾ ಪ್ರಮುಖ ಪ್ರಶ್ನೆಗಳನ್ನು ಮೂಕ ಪ್ರೇಕ್ಷಕ ನಂತೆ ನೋಡುತ್ತಿದೆ ಎಂದು ಅವರು ಬಲವಾಗಿ ಆಕ್ಷೇಪಿಸಿದರು.

ಬೆಲೆಏರಿಕೆ

ಎಲ್ಲರನ್ನು ಅತಿ ಹೆಚ್ಚಾಗಿ ಬಾಧಿಸುತ್ತಿರುವ ಬೆಲೆಯೇರಿಕೆಯತ್ತ ಎಲ್ಲಾ ಪ್ರತಿನಿಧಿಗಳೂ ಗಮನ ಸೆಳೆದರು. ಎಲ್ಲಾ ಸಾಮಾಗ್ರಿಗಳ ಬೆಲೆಗಳು ಗಗನಕ್ಕೇರುತ್ತಿವೆ. ಸರಕಾರ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸಲು, ವಿಸ್ತರಿಸಲು ಏನೂ ಮಾಡಿಲ್ಲ, ರೇಷನ್ ಅಂಗಡಿಗಳಲ್ಲಿ ಕಡು ಬಡ ವಿಭಾಗಗಳಿಗೆ ಅರ್ಧ ಬೆಲೆಗಳಲ್ಲಿ ಜೀವನಾವಶ್ಯಕ ವಸ್ತುಗಳನ್ನು ವಿತರಿಸುತ್ತೇವೆ ಎಂಬ ಮಾತನ್ನು ಅದು ಈಡೇರಿಸಿಲ್ಲ.

ಅದೇ ರೀತಿ ನಗರಗಳಲ್ಲಿ, ಹಳ್ಳಿಗಳಲ್ಲಿ ನಿರುದ್ಯೋಗ 10 ಕೋಟಿಯನ್ನು ತಲುಪಿದೆ. ಆದರೆ ಉದ್ಯೋಗವಕಾಶಗಳನ್ನು ನಿರ್ಮಿಸುವ ಯಾವುದೇ ನಿರ್ದಿಷ್ಟ ಅಥವಾ ನೈಜ ಕಾರ್ಯಕ್ರಮಗಳಿಲ್ಲ ಎಂದೂ ಎಲ್ಲಾ ಪ್ರತಿನಿಧಿಗಳು ಬೇಸರ ವ್ಯಕ್ತಪಡಿಸಿದರು, ನಿರುದ್ಯೋಗದ ಬೆಳವಣಿಗೆ ಉದಾರೀಕರಣ ಮತ್ತು ಖಾಸಗೀಕರಣ ನೀತಿಗಳ ಹಾಗೂ ಜಾಗತೀಕರಣಗೊಂಡ ಆರ್ಥಿಕ ವ್ಯವಸ್ಥೆಯಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಪ್ರಾಬಲ್ಯ ಹೆಚ್ಚುವುದರ ನೇರ ಫಲಿತಾಂಶ ಎಂಬುದೂ ಎಲ್ಲಾ ಪ್ರತಿನಿಧಿಗಳ ಸಮಾನ ಅನುಭವವಾಗಿತ್ತು.

ಮೇಲಟ್ಟದಲ್ಲಿ ಸರ್ವವ್ಯಾಪಕವಾಗಿರುವ ಭ್ರಷ್ಟಾಚಾರದ ಬಗ್ಗೆಯೂ ಎಲ್ಲಾ ಪ್ರತಿನಿಧಿಗಳು ಆಳವಾದ ಆತಂಕ ಹಾಗೂ ಕ್ರೋಧವನ್ನು ವ್ಯಕ್ತಪಡಿಸಿದರು. ಇದುಕೂಡಾ ಉದಾರೀಕರಣದ ನೇರ ಫಲ ಎಂದ ಅವರು ಈ ದೇಶದ ಹಾಗೂ ಜನಗಳ ಆ ಶತ್ರುಗಳಿಗೆ ಶೀಘ್ರವಾಗಿ ಕಠಿಣಾತಿಕಠಿಣ ಶಿಕ್ಷೆ ನೀಡಬೇಕು ಎಂದು ಆಗ್ರಹಿಸಿದರು.

ತ್ರಿಮೂರ್ತಿಗಳ ಹಿಡಿತ

ಪ್ರತಿನಿಧಿಗಳು ಬಿಜೆಪಿ-ಶಿವಸೇನೆಗಳನ್ನೂ ತೀವ್ರ ವಾಗಿ ಟೀಕಿಸಿದರು. ಅವರು ಕೋಮುವಾದಿ, ಫ್ಯಾಸಿಸಂ ಚಟುವಟಿಕೆಗಳನ್ನು ಖಂಡಿಸಿದರು. ಬಾಬ್ರಿಮಸಿದಿಯ ಧ್ವಂಸ, ನಂತರ ನಡೆಸಿದ ರಕ್ತದೋಕುಳಿಯನ್ನು ನೆನಪಿಸಿಕೊಂಡ ಅವರು ಈ ಶಕ್ತಿಗಳಿಂದ ದೇಶದ ಐಕ್ಯತೆಯನ್ನು, ನಿರ್ದಿಷ್ಟವಾಗಿ ಶ್ರಮಜೀವಿ ವಿಭಾಗಗಳ ಐಕ್ಯತೆಯನ್ನು ಕಾಪಾಡಿಕೊಳ್ಳುವ ಪ್ರತಿಜ್ಞೆ ಮಾಡಿದರು. ಏಕೆಂದರೆ ಹೀಗೆ ಮಾಡದಿದ್ದರೆ ಪಾಶ್ಚಿಮಾತ್ಯ ಶಕ್ತಿಗಳ ಆದೇಶದಿಂದ ಅನುಸರಿಸುತ್ತಿರುವ ಜನವಿರೋಧಿ ಆರ್ಥಿಕ ನೀತಿಗಳ ವಿರುದ್ಧ ಹೋರಾಟವನ್ನು ಕ್ರೋಡಿಕರಿಸಲು ಸಾಧ್ಯವಾಗದು ಎಂದು ಅವರು ಹೇಳಿದರು. ಐಎಂಎಫ್-ವಿಶ್ವಬ್ಯಾಂಕ್ ಹಾಗೂ ವಿಶ್ವ ವ್ಯಾಪಾರ ಸಂಘಟನೆಯ ತ್ರಿಮೂರ್ತಿಗಳ ಬಿಗಿ ಹಿಡಿತದಿಂದ ಮುಕ್ತವಾದ ಒಂದು ಸ್ವಾವಲಂಬೀ ಆರ್ಥಿಕಕ್ಕಾಗಿ ಎಲ್ಲಾ ಶ್ರಮ ಜೀವಿ ವಿಭಾಗಗಳ ಐಕ್ಯತೆಯನ್ನು ಉಳಿಸಿ, ಬೆಳೆಸುವುದು ಅಗತ್ಯ ಎಂದು ಅವರು ಹೇಳಿದರು.

ಬಹುರಾಷ್ಟ್ರೀಯ ಸಂಸ್ಥೆಗಳ ಪ್ರಾಬಲ್ಯಕ್ಕೊಳಗಾಗಿರುವ ಜಾಗತೀಕರಣಗೊಂಡ ಆರ್ಥಿಕ ಭಾರತದ ಆರ್ಥಿಕ ಎಲ್ಲಾ ವಲಯಗಳಲ್ಲಿ ಆಳವಾಗಿ ನುಸುಳಿದೆ ಎಂಬುದು ಈ ಎಲ್ಲಾ ಪ್ರತಿನಿಧಿಗಳ ಸಮಾನ ಅನುಭವವಾಗಿತ್ತು. ಇವೆಲ್ಲದರ ಒಟ್ಟು ಪರಿಣಾಮವೆಂದರೆ ಉಚ್ಚ ತಂತ್ರಜ್ಞಾನದೊಂದಿಗೆ ಏರುತ್ತಿರುವ ನಿರುದ್ಯೋಗ, ಉದ್ಯೋಗ ಭದ್ರತೆಯ ನಾಶ, ನಿರಂತರ ಬೆಲೆಯೇರಿಕೆ ಮತ್ತು ಬಡತನ. ಅತ್ತ ಭಾರತೀಯ ಮತ್ತು ವಿದೇಶಿ ಗುತ್ತೇದಾರ ಬಂಡವಾಳಶಾಹಿಗಳ ಲಾಭ ದೊಡ್ಡ ಪ್ರಮಾಣದಲ್ಲಿ ಏರುತಿದೆ ಎಂದು ಪ್ರತಿನಿಧಿಗಳು ಹೇಳಿದರು.

ಪ್ರತಿಭಟನೆಯ ಮೊದಲ ತುಫಾಕಿ

ಸಂಯುಕ್ತ ರಂಗ ಸರಕಾರ ಅಧಿಕಾರ ವಹಿಸಿಕೊಂಡ ನಂತರ ನಡೆದಿರುವ ಈ ಮೊದಲ ರಾಷ್ಟ್ರೀಯ ಸಮಾವೇಶ ಆ ಸರಕಾರ ಜನ-ವಿರೋಧಿ ನೀತಿಗಳ ವಿರುದ್ಧ ಮೊದಲ ಫಿರಂಗಿ ಗುಂಡನ್ನು ಹಾರಿಸಿದೆ. ಪಿಕೆಟಿಂಗ್, ರಸ್ತೆತಡೆ, ರೈಲು ತಡೆಗಳು, ಕೊನೆಯಲ್ಲಿ ಸಂಸತ್ತಿನ ಬಜೆಟ್ ಅಧಿವೇಶನದ ಉತ್ತರಾರ್ಧದಲ್ಲಿ ಪಾರ್ಲಿಮೆಂಟ್ ಚಲೋ ನಡೆಸಿ ದೇಶದ ರಾಜಧಾನಿಯ ಬೋಟ್ ಕ್ಲಬ್ ನಲ್ಲಿ ಸಾರ್ವಜನಿಕ ಸಭೆಗಳಿಗೆ ಹಾಕಿರುವ ನಿಷೇಧವನ್ನು ಮುರಿಯಲು ನಿರ್ಧರಿಸಿದೆ.

ತಮ್ಮ ಹಿಂದಿನ ಕಾಂಗ್ರೆಸ್ ಆಳಸರಂತೆ ಈಗಿನ ಪ್ರಧಾನಮಂತ್ರಿ ಹಾಗೂ ಹಣಕಾಸು ಮಂತ್ರಿಗಳು ಆರ್ಥಿಕ ಸುಧಾರಣೆಗಳು ಹಿಂದಿರುಗಲಾರವು ಎಂದು ಪದೇ ಪದೇ ಹೇಳುತ್ತಿದ್ದಾರೆ. ಹಾಗಿದ್ದರೆ ಸಾಮೂಹಿಕ ಸಂಘಟನೆಗಳ, ಶ್ರಮಜೀವಿಗಳ ಐಕ್ಯ ಹೋರಾಟಗಳು ಕೂಡಾ ಹಿಂದಿರುಗಲಾರವು, ಅವೂ ತೀವ್ರಗೊಳ್ಳಲೇಬೇಕು ಎಂದು ಈ ಸಮಾವೇಶದ ಘೋಷಣೆ ದನಿಯೆತ್ತಿ ಸಾರಿದೆ. ಒಂದೆಡೆ ಕೋಮುವಾದಿ ಶಕ್ತಿಗಳನ್ನು, ಬಿಜೆಪಿಯನ್ನು ತಡೆದು ನಿಲ್ಲಿಸಲಾಗುವುದು,ಅದೇ ವೇಳೆಗೆ ರಾಷ್ಟ್ರವಿರೋಧಿ, ಜನ-ವಿರೋಧಿ ಆರ್ಥಿಕ ನೀತಿಗಳೊಂದಿಗೆ ಯಾವ ರಾಜಿಯು ಖಂಡಿತಾ ಅಸಾಧ್ಯ ಎಂದು ಸಾರಿರುವ ಆ ರಾಷ್ಟ್ರೀಯ ಸಮಾವೇಶ ಈ ದಿಕ್ಕಿನಲ್ಲಿ ಎಪ್ರಿಲ್ 2, 1997 ರಂದು ದೇಶವ್ಯಾಪಿ ಮುಷ್ಕರವನ್ನು ನಡೆಸಲು ನಿರ್ಧರಿಸಿರುವ ಸಾರ್ವಜನಿಕ ವಲಯ ಕಾರ್ಮಿಕ ಸಂಘಗಳ ನಿರ್ಧಾರವನ್ನು ಸ್ವಾಗತಿಸಿದೆ.

ಈ ರಾಷ್ಟ್ರೀಯ ಸಮಾವೇಶದಲ್ಲಿ ಮಾತನಾಡಿದ ಪ್ರಮುಖರೆಂದರೆ ಹನ್ನನ್ ಮೊಲ್ಲಾ (ಎಐಎಡಬ್ಲ್ಯೂಯು),ಕೆ.ಎಲ್. ಮಹೇಂದ್ರ (ಎಐಟಿಯುಸಿ),ಆರ್.ವಿ. ಮಿತ್ತಲ್ (ಹೆಚ್ಎಂಎಸ್). ವೈರೆಡ್ಡಿ (ಬಿಕೆಎಂಯು), ಬೃಂದಾಕಾರಟ್ (ಎಐಡಿಡಬ್ಲ್ಯೂಎ), ಅಮರಜಿತ್ ಕೌರ್ (ಎನ್ಎಫ್ಐಡಬ್ಲ್ಯೂ), ಕೃಷ್ಣ ಪ್ರಸಾದ್ (ಎಸ್ಎಫ್ಐ), ದೀಪಂಕರ್ ಭಟ್ಟಾಚಾರ್ಯ(ಎಐಸಿಸಿಟಿಯು), ಡಿ.ಪಿ.ದುಬೆ (ಎಫ್ಎಂಆರ್ಎಎಂ), ಹರೀಶ್ ಕರ್ವಿ(ಬಿಇಎಫ್ಐ), ವಿಮಲ್ ಪಾಲಿವಾಲ್(ಎಐಐಇಎ) ಮುಂತಾದವರು.

ಎಂ.ಕೆ.ಫಂದೆ, ಸಿಐಟಿಯು ಪ್ರಧಾನ ಕಾರ್ಯದರ್ಶಿಗಳು ಸಮಾವೇಶದ ಸಮಾರೋಪ ಮಾಡುತ್ತಾ ಸಮಾವೇಶ ರೂಪಿಸಿದ ಕಾರ್ಯಾಚರಣೆಯ ಕಾರ್ಯಕ್ರಮಗಳನ್ನು ಐಕ್ಯತೆಯಿಂದ, ಸಮರಧೀರವಾಗಿ ಜಾರಿಗೊಳಿಸಬೇಕೆಂದೂ, ಸಂಸತ್ ಚಲೋದ ನಂತರವೂ ಈ ಜನವಿರೋಧಿ ನೀತಿಗಳನ್ನು ಬದಲಿಸದಿದ್ದರೆ ಒಂದು ರಾಷ್ಟ್ರವ್ಯಾಪಿ ಮುಷ್ಕರಕ್ಕೆ ಸಿದ್ಧರಾಗಬೇಕೆಂದು ಕರೆ ನೀಡಿದರು.

ಕೃಷಿ ಕೂಲಿಕಾರರಿಗೆ ಸಮಗ್ರ ಶಾಸನದಲ್ಲಿ ವಿಳಂಬ

ಬಡಜನ - ವಿರೋಧಿ ನೀತಿಗಳ ಸ್ಪಷ್ಟ ಸಂಕೇತ

ಕೃಷಿಕೂಲಿಗಾರರಿಗೆ ಒಂದು ಸಮಗ್ರ ಶಾಸನವನ್ನು ಸಂಸತ್ತಿನ ಪ್ರಸಕ್ತ ಅಧಿವೇಶನದಲ್ಲಿ ತರಲಾಗುವುದು ಎಂದು ಪ್ರಧಾನಮಂತ್ರಿಗಳು, ಕಾರ್ಮಿಕ ಮಂತ್ರಿಗಳು, ಕಾನೂನು ಮಂತ್ರಿಗಳು ಅದೆಷ್ಟು ಬಾರಿ ಅಶ್ವಾಸನೆ ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಅದನ್ನಿನ್ನೂ ಮಂಡಿಸಲೇ ಇಲ್ಲ ಎಂದು ಭಾರತೀಯ ಖೇತ್ ಮಜ್ದೂರ್ ಯೂನಿಯನ್, ಅಖಿಲ ಭಾರತ ಕೃಷಿ ಕಾರ್ಮಿಕರ ಸಂಘ, ಅಖಿಲ ಭಾರತ ಅಗ್ರಗಾಮಿ ಕಿಸಾನ್ ಸಭಾ ಹಾಗೂ ಸಂಯುಕ್ತ ಕಿಸಾನ್ ಸಭಾ ಬೇಸರ ವ್ಯಕ್ತಪಡಿಸಿವೆ. ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆಯು ದಿಲ್ಲಿ ಸಮಾವೇಶದ ಮುನ್ನಾ ದಿನವೂ ಆ ಸಂಘಟನೆಗಳು ಒಂದು ಜಂಟಿ ಹೇಳಿಕೆ ನೀಡಿ ಇದರಲ್ಲಿ ವಿಳಂಬ ತರವಲ್ಲ ಎಂದು ಎಚ್ಚರಿಸಿದ್ದವು.

ಹೆಚ್ಚುತ್ತಿರುವ ಬಡತನ, ತೀವ್ರವಾಗಿ ಹರಡುತ್ತಿರುವ ಆಹಾರ ಧಾನ್ಯಗಳ ಬೆಲೆಗಳು, ಯಾಂತ್ರೀಕರಣದಿಂದ ಕುಗ್ಗುತ್ತಿರುವ ಉದ್ಯೋಗವಕಾಶ ಇಂತಹ ಕಠಿಣ ಪರಿಸ್ಥಿತಿಗಳನ್ನು ಬಡ ಕೃಷಿಕೂಲಿಕಾರರು ಎದುರಿಸಬೇಕಾಗಿ ಬಂದಿದ್ದರೂ ಸರಕಾರ ಇಂತಹ ಒಂದು ಸಮಗ್ರ ಶಾಸನವನ್ನು ತರಲು ನಿರಾಕರಿಸುತ್ತಿರುವುದು ಬಡತನ - ವಿರೋಧಿ ನೀತಿಗಳ ಒಂದು ಸ್ಪಷ್ಟ ಸಂಕೇತ, ಇದನ್ನು ಕೃಷಿ ಕೂಲಿಕಾರರ ಸಂಘಗಳು ದೃಢವಾಗಿ ಪ್ರತಿರೋಧಿಸುತ್ತವೆ ಎಂದು ಈ ಸಂಘಟನೆಗಳು ಹೇಳಿವೆ. ಕೃಷಿಯ ಯಾಂತ್ರೀಕರಣದಿಂದ ಗ್ರಾಮೀಣ ಸಮಾಜದ ಅತಿ ಶ್ರೀಮಂತ ವಿಭಾಗಗಳಿಗೆ ಹಾಗೂ ಈ ಯಂತ್ರಗಳನ್ನು ತಯಾರಿಸುತ್ತಿರುವ ಗುತ್ತೇದಾರಿ ಬಂಡವಾಳಶಾಹಿ ಗುಂಪುಗಳಿಗೆ ಮಾತ್ರ ಪ್ರಯೋಜನವಾಗಿದ್ದು, ಕೃಷಿಕೂಲಿಕಾರರ ಜೀವನಾಧಾರಕ್ಕೇ ಅವು ಸಂಚಕಾರ ತಂದಿವೆ ಎಂದು ಈ ಸಂಘಟನೆಗಳು ನೆನಪಿಸಿವೆ.

ಈ ಸಮಗ್ರ ಶಾಸನವನ್ನು ಮಂಡಿಸುವುದಾಗಿ ಮಾತ್ರವಲ್ಲ, ರೇಷನ್ ವ್ಯವಸ್ಥೆಯ ಮೂಲಕ ಸಾಕಷ್ಟು ಹಾಗೂ ಅಗ್ಗದ ದರದಲ್ಲಿ ಆಹಾರ ಧಾನ್ಯಗಳನ್ನು ಒದಗಿಸುವುದಾಗಿ, ಜಾತ್ಯಾತೀತ ಮೌಲ್ಯಗಳನ್ನು ರಕ್ಷಿಸುವುದಾಗಿ, ಮಹಿಳೆಯರ, ಪರಿಶಿಷ್ಟ ಜಾತಿ-ಬುಡಕಟ್ಟುಜನಗಳ ಮೇಲಿನ ಅತ್ಯಾಚಾರಗಳಿಗೆ ತಕ್ಕ ಶಿಕ್ಷೆ ನೀಡುವುದಾಗಿ ಸಂಯುಕ್ತರಂಗದ ಸಮಾನ ಕನಿಷ್ಠ ಕಾರ್ಯಕ್ರಮ ನೀಡಿರುವ ಭರವಸೆಗಳು ದೇಶದ ಬಹುಪಾಲು ಜನಗಳನ್ನು ತಟ್ಟುವಂತಹವು. ಇದನ್ನು ಕೆಲವು ದೇಶೀ, ವಿದೇಶೀ ಲಾಭಕೋರರ ಮರ್ಜಿಗೆ ತಲೆಬಾಗಿ ಮೂಲೆಗೊತ್ತಲು ಸಾಧ್ಯವಿಲ್ಲ. ಈಗ ಬಗ್ಗೆ ತಕ್ಷಣ ಕ್ರಮ ಅಗತ್ಯ. ಇಲ್ಲವಾದರೆ ತಾವು ಹೋರಾಟ ಕಣಕ್ಕಿಳಿಯಬೇಕಾಗುತ್ತದೆ ಎಂದು ಈ ಸಂಘಟನೆಗಳು ಎಚ್ಚರಿಸಿವೆ.


ಪೌರಸೇವಾ ನೌಕರರ ಅಗತ್ಯ ಬೇಡಿಕೆಗಳನ್ನು ಶೀಘ್ರವಾಗಿ ಪರಿಹರಿಸಬೇಕು

ಎನ್.ಕೆ.ಉಪಾಧ್ಯಾಯ

ರಾಜ್ಯದ 214 ನಗರಸಭೆ, ಪುರಸಭೆಗಳ ನೌಕರರಾದ ಪೌರ ಕಾರ್ಮಿಕರು ಈ ವರ್ಷ ಎರಡನೇ ಸಲ ರಾಜ್ಯಾದ್ಯಂತ ಮುಷ್ಕರ ನಡೆಸುವ ಸಂದಿಗ್ಧ ಪರಿಸ್ಥಿತಿ ಉಂಟಾಗಿದೆ. ಸಂಪನ್ಮೂಲ ಅಭಾವದಿಂದಾಗಿ ತಮಗೆ ಪ್ರತಿ ತಿಂಗಳು ವೇತನ ಸಿಗುತ್ತಿಲ್ಲಾ, 5-6 ತಿಂಗಳುಗಳಿಂದ ಪಗಾರ ಇಲ್ಲದೆ ದುಡಿಯಬೇಕಾಗುತ್ತದೆ. ಆದ್ದರಿಂದ ಸರಕಾರೀ ಖಜಾನೆಯಿಂದಲೇ ಪ್ರತಿ ತಿಂಗಳು ತಮ್ಮ ಪಗಾರ ಸಿಗಬೇಕೆಂಬ ಬೇಡಿಕೆ ಮುಂದಿಟ್ಟು ಡಿಸೆಂಬರ್ 26ರಿಂದ ರಾಜ್ಯಾದ್ಯಂತ ಮುಷ್ಕರ ಪ್ರಾರಂಭಿಸಿದ್ದಾರೆ. 5 ತಿಂಗಳ ಹಿಂದೆ 8 ದಿವಸ ಮುಷ್ಕರ ನಡೆಯಿತು. ಆಗ ಸರಕಾರ ನಗರಸಭೆಗಳಿಗೆ ಕೊಡಮಾಡುವ ದೇಣಿಗೆಯನ್ನು ಜಿಲ್ಲಾಧಿಕಾರಿ ಮತ್ತು ಪೌರಾಯುಕ್ತರ ಜಂಟಿ ಹೆಸರಿನಲ್ಲಿಟ್ಟು ಪ್ರತಿ ತಿಂಗಳು ಪಗಾರವನ್ನು ಸರಕಾರ ಕೊಡಲಾಗುವುದೆಂದು ಹೇಳಿತ್ತು. ಅಕ್ಟ್ವಾಯ್ ಬದಲಾಗಿ ಸರಕಾರ ಕೊಡಮಾಡುವುದು ಅಗತ್ಯ. ಹೀಗೆ ಮಾಡಿದರೆ ಮಾತ್ರ ನಗರಸಭೆಗಳಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಪ್ರತಿತಿಂಗಳು ಸಂಬಳ ಸಿಗುವಂತೆ ಮಾಡಲು ಸಾಧ್ಯ.

ಈಗಿರುವ ಪೌರ ಸೇವಾ ನೌಕರರ ಸಂಘಟನೆಯ ಮುಖಂಡತ್ವ ಸರಿಯಿಲ್ಲ. ಅದು ಸ್ವಾರ್ಥಿಗಳಿಂದ ಕೂಡಿದೆ. ಸರಿಯಾದ ಮಾರ್ಗದರ್ಶನ ನೀಡುತ್ತಿಲ್ಲ. ಪೌರ ಸೇವಾ ನೌಕರರು ಸರಿಯಾದ ಮುಖಂಡತ್ವ ಹೊಂದಿದರೆ ಮಾತ್ರ ಸಮಸ್ಯೆಗೆ ಪರಿಹಾರ ಸಿಗಬಹುದಾಗಿದೆ. ಕಳೆದ 2 ವರ್ಷಗಳಲ್ಲಿ 3 ಸಲ ಮುಷ್ಕರ ಹೂಡಿದರೂ ಕೂಡ ನೌಕರರಲ್ಲಿ ಸಂಘಟಿತ ಶಕ್ತಿ ಇದ್ದರೂ ಕೂಡಾ ಸರಿಯಾದಂತಹ ಮಾರ್ಗದರ್ಶನ ಇಲ್ಲದೆ ಮುಂದಾಳತ್ವ ಇಲ್ಲದೆ, ಅವರ ಸಮಸ್ಯೆಗಳಿಗೆ ಪರಿಹಾರ ಸಿಗಲಾರದಾಗಿದೆ. ಇದರ ಕುರಿತು ನೌಕರರು ವಿಚಾರ ಮಾಡುವುದು ಅಗತ್ಯ. ಇದರಲ್ಲಿ ಕಚೇರಿಗಳಲ್ಲಿ ಕೆಲಸ ಮಾಡುವ ನೌಕರರಿಗೂ ಊರು ಸ್ವಚ್ಛತೆಯ ಕೆಲಸದಲ್ಲಿ ತೊಡಗಿರುವ ಪೌರ ಕಾರ್ಮಿಕರಿಗೂ ವ್ಯತ್ಯಾಸವಿದೆ. ಪೌರ ಕಾರ್ಮಿಕರನ್ನು ಮೇಲ್ವರ್ಗದಲ್ಲಿ ಕೆಲಸ ಮಾಡುವ ನೌಕರರು ಅಧಿಕಾರಿಗಳು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಇದರ ಕುರಿತು ಎಚ್ಚರಿಕೆ ಅಗತ್ಯ. ಸರಕಾರ ಪೌರ ಸೇವಾ ನೌಕರರ ಈ ಅಗತ್ಯ ಬೇಡಿಕೆಯನ್ನು ಶೀಘ್ರವಾಗಿ ಪರಿಹರಿಸಲಿಕ್ಕೆ ತಕ್ಕುದಾದ ಕ್ರಮವನ್ನು ಕೂಡಲೇ ಕೈಗೊಳ್ಳುವುದು ಅಗತ್ಯ. ಇಲ್ಲವಾದರೆ ಕರ್ನಾಟಕ ರಾಜ್ಯದಲ್ಲಿ ನಗರಸಭೆಗಳ ಪ್ರದೇಶಗಳಲ್ಲಿ ಸ್ವಚ್ಛತಾ ಕಾರ್ಯಕ್ರಮ ಕೈಗೊಳ್ಳಲಾರದೆ ಹಲವಾರು ಸಮಸ್ಯೆಗಳಿಗೆ ಎಡೆ ಮಾಡಿಕೊಡುವ ಸಾಧ್ಯತೆ ಇದೆ.





ಸಮಾವೇಶದಲ್ಲಿ ಭಾಗವಹಿಸಿದ ಅಂಗನವಾಡಿ ನೌಕರರ ಪ್ರತಿನಿಧಿಗಳು ಹಾಗೂ ವೇದಿಕೆಯ ಮೇಲೆ ಹೊಸದಾಗಿ ರಚನೆಗೊಂಡ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಪ್ರಧಾನಕಾರ್ಯದರ್ಶಿ ಎಸ್.ವರಲಕ್ಷ್ಮಿ ಮಾತನಾಡುತ್ತಿದ್ದಾರೆ. ಮಧ್ಯದಲ್ಲಿರುವವರು ಅಧ್ಯಕ್ಷರಾಗಿ ಆಯ್ಕೆಯಾದ ಪ್ರಭಾರವರು,

ಬೆರಗುಂಟು ಮಾಡಿದ ಅಂಗನವಾಡಿ ಕಾರ್ಯಕರ್ತೆಯರ ಪ್ರತಿಭಟನೆ ಹಕ್ಕಿಗಾಗಿ ರ್‍ಯಾಲಿ; ಮಹಿಳೆಯರ ಜಾಗೃತಿ

ವರದಿ: ಕೃಷ್ಣಚೆನ್ನ ಪೊಲ್ಲಂಪಲ್ಲಿ

ಗ್ರಾಮೀಣ ಮಹಿಳೆಯರನ್ನು ಬೌದ್ಧಿಕವಾಗಿ ಹಾಗೂ ಇನ್ನಿತರ ವಿಚಾರಗಳ ಬಗ್ಗೆ ಸ್ವಾವಲಂಬನೆಗೊಳಿಸುವ ಉದ್ದೇಶದಿಂದ ಹುಟ್ಟಿಕೊಂಡ ಅಂಗನವಾಡಿ ಕೇಂದ್ರಗಳ ಕತೆ ಇಲ್ಲಿ ಬರೆಯುವುದು ಅಗತ್ಯ - ಅನಿವಾರ್ಯ.

ಮಹಿಳೆ-ಮಕ್ಕಳ ಕಲ್ಯಾಣವೆಂದು ಬಾಯಿ ಹರಿಯ ಬಿಡುವ ಸರಕಾರ ಅದಕ್ಕೆಂದೇ ಆದ್ಯತೆಯ ಮೇಲೆ ಹುಟ್ಟಿಕೊಂಡ ಅಂಗನವಾಡಿಯನ್ನು ಸುಧಾರಿಸಲು ವಿಫಲವಾಗಿದೆ. ಅದರಲ್ಲೂ ಗ್ರಾಮೀಣ ಭಾರತವನ್ನು ಉದ್ಧಾರ ಮಾಡಿಬಿಡುವಂತೆ ಭರವಸೆಗಳ ಮಹಲುಗಳನ್ನೇ ಕಟ್ಟಿ ಅಷ್ಟೇ ನಿರಾಶೆ ಮಾಡುವ ರಾಜಕೀಯ ಪಕ್ಷಗಳ ದಂಡೆ ಇಂದು ನಮ್ಮ ಮುಂದಿದೆ. ಜವಾಬ್ದಾರಿ ಇಲ್ಲದ ರಾಜಕಾರಣ, ಸ್ವಚ್ಛತೆ ಇಲ್ಲದ ಆಡಳಿತದಿಂದಾಗಿ ಅಂಗನವಾಡಿಯಂತಹ ಜನಪರ ಯೋಜನೆಗಳು ಮೂಲೆಗುಂಪಾಗುವ ಅಪಾಯ ಎದುರಿಸುತ್ತಿವೆ.

ಮಹಿಳೆಯರಿಗೆ ಉದ್ಯೋಗ ನೀಡಲು ನೆರವಾಗುವ ಅಂಗನವಾಡಿ ವ್ಯವಸ್ಥೆಯ ಬಗ್ಗೆ ಈಗಂತೂ ದಿವ್ಯ ನಿರ್ಲಕ್ಷ್ಯ ವಹಿಸಿದೆ. ಪರಿಣಾಮವಾಗಿ ಅಂಗನವಾಡಿ ಕಾರ್ಯಕರ್ತೆ ತಮ್ಮಗಳ ಹಕ್ಕೊತ್ತಾಯಗಳಿಗೆ ರಾಜಧಾನಿಗೆ ಧಾವಿಸಿ ಬರುವಂತಾಗಿದ.

ಇದೇ ಡಿಸೆಂಬರ್ 21 ರಂದು ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ಸಾವಿರಾರು ಅಂಗನವಾಡಿ ಕಾರ್ಯಕರ್ತೆಯರ ಬೃಹತ್ ರ್‍ಯಾಲಿಯೊಂದು ನಡೆಯಿತು. ಮಹಿಳಾ ಸಮಾನತೆ ಕುರಿತು ಗಂಟಲು ಹರಿದುಕೊಳ್ಳುವ ಸರಕಾರಿ ನಾಯಕರನ್ನು ತಲೆ ತಗ್ಗಿಸುವಂತೆ ಮಾಡಿತು.

ಗಾಂಧೀಜಿ ಗ್ರಾಮೀಣ ಭಾರತವನ್ನು ಸಮೃದ್ಧಿಗೊಳಿಸುವ ಕನಸು ಕಂಡರು. ಆ ಫಲವಾಗಿ ನಂತರದ ಕೆಲವು ವರ್ಷಗಳಲ್ಲಿ ಕೆಲವಾರು ಜನಪರ ಯೋಜನೆಗಳು ಅನುಷ್ಠಾನಗೊಂಡವಾದರೂ ನಿರೀಕ್ಷಿಸಿದ ಫಲ ದೊರೆಯಲಿಲ್ಲ. ಮೇಲಾಗಿ ಸರಕಾರ ನಿರ್ಲಕ್ಷಿಸುತ್ತಾ ಬಂದಿತು.

ಗ್ರಾಮಾಂತರ ಪ್ರದೇಶಗಳಲ್ಲಿ ಮಕ್ಕಳಿಗೆ ಪೌಷ್ಟಿಕ ಆಹಾರ ನೀಡಲು ಆರು ವರ್ಷಕ್ಕಿಂತಲೂ ಕಿರಿಯ ಮಕ್ಕಳಿಗೆ ಪೂರ್ವ ಪ್ರಾಥಮಿಕ ಶಿಕ್ಷಣ ನೀಡಲು, ಗರ್ಭಿಣಿ, ಬಾಣಂತಿಯರಿಗೆ ಸೂಕ್ತ ಮಾಹಿತಿ ನೀಡಿ, ಅವರ ಆರೋಗ್ಯಗಳನ್ನು ಕಾಪಾಡುವುದು. ಇನ್ನಿತರ ಕೆಲಸಗಳನ್ನು ಮಾಡಲು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಬಾಲ ವಿಕಾಸ ಯೋಜನೆಯಡಿಯಲ್ಲಿ ರಾಜ್ಯಾದ್ಯಂತ ಸುಮಾರು 80 ಸಾವಿರ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ದುಡಿಯುತ್ತಿದ್ದಾರೆ.

ಮೂಲಭೂತವಾಗಿ ಇವರಿಗೆ ಕೆಲಸ ಮಾಡಲು ಮಾತ್ರ ನಿಯೋಜಿಸಿರುವುದು ಆರೋಗ್ಯ, ಶಿಕ್ಷಣ, ಸಮಾಜ ಕಲ್ಯಾಣ ಇಲಾಖೆ ಕೆಲಸಗಳಾದ ಪಲ್ಸ್ ಪೋಲಿಯೋ ಸಾಕ್ಷರತೆ, ಸರ್ವೆ ಮಾಡುವುದು ಜೊತೆಗೆ ದಿನಕ್ಕೆ 24 ರಿಜಿಸ್ಟಾರ್ ಗಳನ್ನು ಬರೆಯುವುದು ಅಂಗನವಾಡಿ ಕಾರ್ಯಕರ್ತೆಯರು ಮಾಡಬೇಕು. ಜೊತೆಗೆ ಕೇಂದ್ರದ ಯಾವುದೇ ಕಾರ್ಯಕ್ರಮಗಳು ನಡೆದರು ಅಂಗನವಾಡಿ ಕಾರ್ಯಕರ್ತೆಯರೇ ಹೊರಬೇಕು. ಕೆಲಸ ಮಾಡಬೇಕು.

ಇವರಿಗೆಷ್ಟು ಸಂಬಳ?

ಸರಕಾರ ಇವರಿಂದ ಇಷ್ಟು ಕೆಲಸ ಮಾಡುವಾಗ ಬಡಪಾಯಿ ಅಂಗನವಾಡಿ ಕಾರ್ಯಕರ್ತೆಯರಿಗೆ ಪ್ರತಿ ತಿಂಗಳು ಸಿಗುವ ಸಂಬಳವೆಷ್ಟು ಗೊತ್ತೆ? ಕೇವಲ 250 ರಿಂದ 450 ರೂಗಳು ಮಾತ್ರ. ವರ್ಷಕ್ಕೆ 20 ರಜಾ ದಿನಗಳು ಬಿಟ್ಟರೆ ಬೇರ್‍ಯಾವ ಸೌಲಭ್ಯಗಳೂ ಇವರಿಗಿಲ್ಲ.

ಇದನ್ನೆಲ್ಲಾ ಪ್ರತಿಭಟಿಸುತ್ತಾ ಅಂಗನವಾಡಿ ಕಾರ್ಯಕರ್ತೆಯರು ಬೀದಿಗೆ ಬಂದಾಗ ಸರಕಾರಕ್ಕೆ ಬಿಸಿ ತಟ್ಟಿತು. ಪರಿಣಾಮವಾಗಿ ಅಂಗನವಾಡಿ ಕೇಂದ್ರಗಳಿಗೆ ಸಹಾಯಕಿಯರು ನೇಮಕಗೊಂಡರು. ಜೊತೆಗೆ ಕರ್ನಾಟಕ ಆಡಳಿತಾತ್ಮಕ ಟ್ರಿಬ್ಯೂನಲ್ ಅಂಗನವಾಡಿ ಕಾರ್ಯಕರ್ತೆಯರನ್ನು ಹಾಗೂ ಸಹಾಯಕಿಯರನ್ನು ನೌಕರರೆಂದು ಪರಿಗಣಿಸಿ ಸಂಬಳ - ಸವಲತ್ತುಗಳನ್ನು ನಿಗದಿ ಮಾಡಲು ಸರಕಾರಕ್ಕೆ ನಾಲ್ಕು ತಿಂಗಳೊಳಗೆ ತಜ್ಞರ ಸಮಿತಿಯೊಂದನ್ನು ರಚಿಸಬೇಕೆಂದು ಸರಕಾರಕ್ಕೆ ಆದೇಶ ನೀಡಿತ್ತು.

ಆದರೆ ಸರಕಾರ ಮಾಡಿದ್ದೇನು? ಟ್ರಿಬ್ಯೂನಲ್ ಆದೇಶವನ್ನು ತಿರಸ್ಕರಿಸಿದೆ. ಮಾತ್ರವಲ್ಲದೇ ಅಂಗನವಾಡಿ ಕೇಂದ್ರಗಳನ್ನು ಖಾಸಗಿಯವರಿಗೆ ವಹಿಸಲು ಹೆಣಗಾಡುತ್ತಿದೆ. ಆದ್ದರಿಂದಲೇ ಡಿ.21 ರಂದು ನಡೆದ ರಾಜ್ಯಮಟ್ಟದ ಅಂಗನವಾಡಿ ಕಾರ್ಯಕರ್ತೆಯರ ರ್‍ಯಾಲಿ ಮತ್ತು ಸಮ್ಮೇಳನ ನಡೆದಾಗ ಸರಕಾರ ಬೆಕ್ಕಸ ಬೆರಗುವಂತಾಯಿತು. ಸುಮಾರು ಮೂರು ಸಾವಿರಕ್ಕಿಂತ ಹೆಚ್ಚು ಅಂಗನವಾಡಿ ಕಾರ್ಯಕರ್ತೆಯರನ್ನು ಒಟ್ಟಿಗೆ ಸೇರಿಸುವಲ್ಲಿ ರಾಜ್ಯ ಅಂಗನವಾಡಿ ನೌಕರರ ಸಮನ್ವಯ ಸಮಿತಿ ಯಶಸ್ವಿಯಾಗಿತ್ತು. ಫಲಿತಾಂಶವಾಗಿ ರಾಜ್ಯ ಅಂಗನವಾಡಿ ನೌಕರರ ಸಂಘ ಜನ್ಮ ತಾಳಿತು. ಮಂಡ್ಯ, ಕೋಲಾರ, ಬಳ್ಳಾರಿ, ರಾಯಚೂರು, ಗುಲ್ಬರ್ಗ, ದಕ್ಷಿಣ ಕನ್ನಡ ಉತ್ತರ ಕನ್ನಡ, ಇನ್ನೂ ಅನೇಕ ಜಿಲ್ಲೆಗಳಿಂದ ಬಂದ ಕಾರ್ಯಕರ್ತೆಯರ ಬೃಹತ್ ರ್‍ಯಾಲಿ ಮಂಕು ಬಡಿದ ಪಟೇಲ್ ಸರಕಾರಕ್ಕೆ ಎಚ್ಚರಿಕೆ ಗಂಟೆ ಬಾರಿಸಿದ್ದಂತು ಸತ್ಯ.

ಅಂಗನವಾಡಿ ಸಮಸ್ಯೆಗಳು

ಗ್ರಾಮಾಂತರ ಪ್ರದೇಶಗಳಲ್ಲಿ ಅಂಗನವಾಡಿ ಕೇಂದ್ರಗಳಿಗ ಸ್ವಂತ ಕಟ್ಟಡವಿಲ್ಲ. ಉತ್ತಮ ವಾತಾವರಣವಿಲ್ಲ. ಇದರಿಂದ ಆ ಕೇಂದ್ರಗಳು ಹಿನ್ನಡೆ ಅನುಭವಿಸುವಂತಾಗಿದೆ.

ಸರಕಾರ ಪೂರೈಸುವ ಪೌಷ್ಟಿಕ ಆಹಾರ ಪೂರೈಕೆಯೂ ಕಳಪೆಯಾಗಿರುತ್ತದೆ. ಕಾರ್ಯಕರ್ತೆಯರನ್ನು ಖಾಯಂ ಮಾಡದೆ ಅತಂತ್ರವಾಗಿಟ್ಟಿರುವುದು. ಅತ್ಯಂತ ಕಡಿಮೆ ಸಂಬಳ, ಬೋನಸ್ ಇಲ್ಲದಿರುವುದು ಕೇಂದ್ರದಲ್ಲಿ ಅಡುಗೆ ಮಾಡಲು ಸೌದೆ ಅಭಾವ, ರಜಾ ಸೌಲಭ್ಯ ಕಡಿಮೆ, ಸರಿಯಾಗಿ ವೇತನ ಪಾವತಿಸದಿರುವುದು - ಹಿಗೆ ಸಮಸ್ಯೆಗಳ ಆಗರವೇ ಆಗಿರುವ ಅಂಗನವಾಡಿ ವ್ಯವಸ್ಥೆಯನ್ನು ಸರಿ ಮಾಡಲು ಯಾವೊಂದು ಸರಕಾರವೂ ಪ್ರಯತ್ನ ಮಾಡದಿರುವುದು ದುರಂತವೇ ಸರಿ.

ಡಿ.21 ರಂದು ಅಂಗನವಾಡಿ ಕಾರ್ಯಕರ್ತೆಯ ರ ಬೃಹತ್ ರ್‍ಯಾಲಿ ಚಿಕ್ಕಲಾಲ್ ಬಾಗ್ ನಿಂದ ಎಜಿಎಫ್ ಕಛೇರಿವರೆಗೂ ನಡೆಯಿತು. ಜೊತೆಗೆ ನಡೆದ ಬಹಿರಂಗ ಸಭೆಯಲ್ಲಿ ಸಿಐಟಿಯುನ ರಾಷ್ಟ್ರೀಯ ಉಪಾಧ್ಯಕ್ಷ ಕಾಂ. ಎಸ್.ಸೂರ್ಯನಾರಾಯಣರಾವ್, ಅಂಗನವಾಡಿ ನೌಕರರ ರಾಷ್ಟ್ರೀಯ ಮುಖಂಡರಾದ ಡಾ.ಹೇಮಲತಾ, ಜೆಎಂಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ನೀಲಾ, ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ವಿಜಿಕೆನಾಯರ್, ವಕೀಲ ಗೋಪಾಲಗೌಡ ಇನ್ನಿತರರು ಭಾಗವಹಿಸಿದ್ದರು.

ಅಂದು ಸಂಜೆ ನಡೆದ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಹಿರಿಯ ಸ್ವಾತಂತ್ರ್ಯ ಹೋರಾಟಾರ ಎನ್.ಕೆ.ಉಪಾಧ್ಯಾಯ, ಡಾ.ಹೇಮಲತಾ, ಕಾಂ. ಸೂರ್ಯನಾರಾಯಣರಾವ್, ವಿಜಿಕೆನಾಯರ್ ಭಾಗವಹಿಸಿದ್ದರು.

ಸಮಾರೋಪ ಸಮಾರಂಭದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ವಿಮಲಾ ಬಾಯಿ ದೇಶ್ ಮುಖ್ ಹಾಗೂ ಜನವಾದಿ ಮಹಿಳಾ ಸಂಘಟನೆ ಅಧ್ಯಕ್ಷೆ ಕೆ.ಎಸ್.ವಿಮಲಾ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಅಸ್ತಿತ್ವಕ್ಕೆ ಬಂದ ರಾಜ್ಯ ಅಂಗನವಾಡಿ ನೌಕರರ ಸಂಘದ ಅಧ್ಯಕ್ಷರಾಗಿ ಪ್ರಭಾ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಎಸ್.ವರಲಕ್ಷ್ಮಿ ಆಯ್ಕೆಯಾದರು. ○

ಜನವರಿ 17: ವಿದ್ಯುಚ್ಛಕ್ತಿ ಬವಣೆ ಪರಿಹಾರಕ್ಕೆ ಮುಖ್ಯ ಮಂತ್ರಿಗಳ ನಿವಾಸದೆದುರು ರೈತರ ಧರಣಿ

ಕರ್ನಾಟಕ ಪ್ರಾಂತ ರೈತಸಂಘದ ನೇತೃತ್ವದಲ್ಲಿ ರಾಜ್ಯದ ವಿವಧ ಭಾಗಗಳ ರೈತರು ವಿದ್ಯುಚ್ಛಕ್ತಿ ಪೂರೈಕೆಯಲ್ಲಿನ ಅನಿಯಮಿತ ತಡೆ, ಕಡಿತ ಇತ್ಯಾದಿಗಳಿಂದ ತಮಗೆ ಉಂಟಾಗಿರುವ ಕಷ್ಟಕರ ಪರಿಸ್ಥಿತಿಯತ್ತ ಸರಕಾರದ ಗಮನ ಸೆಳೆಯಲು ಜನವರಿ 17 ರಂದು ಬೆಂಗಳೂರಿನಲ್ಲಿ ಮುಖ್ಯಮಂತ್ರಿಗಳ ನಿವಾಸದೆದುರು ಧರಣಿ ನಡೆಸಲು ನಿರ್ಧರಿಸಿದ್ದಾರೆ. ಅಂದು ಬೆಳಿಗ್ಗೆ 10ಗಂಟೆಗೆ ಬೆಂಗಳೂರು ರೈಲ್ವೇ ನಿಲ್ದಾಣದಿಂದ ರೈತರ ಪ್ರತಿಭಟನಾ ಮೆರವಣಿಗೆ ನಡೆಯುವುದೆಂದೂ ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಪಿ.ಜಗನ್ನಾಥ್ ತಿಳಿಸಿದ್ದಾರೆ.

ಡಿಸೆಂಬರ್ 20 ರಂದು ನಡೆದ ಕರ್ನಾಟಕ ಪ್ರಾಂತ ರೈತಸಂಘದ ಪದಾಧಿಕಾರಿಗಳ ಸಭೆಯಲ್ಲಿ ಈ ಬಗ್ಗೆ ನಿರ್ಣಯ ಕೈಗೊಳ್ಳಲಾಗಿದೆ.

ಕಿಸಾನ್ ಸಭಾದ 60ನೇ ವಾರ್ಷಿಕೋತ್ಸವ

ಅಖಿಲ ಭಾರತ ಕಿಸಾನ್. ಸಭಾದ 60ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಜನವರಿ 18 ರಂದು ಒಂದು ವಿಚಾರಸಂಕಿರಣವನ್ನು ಏರ್ಪಡಿಸಲು ನಿರ್ಧರಿಸಲಾಗಿದೆ. ಪರ್ಯಾಯ ಕೃಷಿ ನೀತಿ ಹಾಗೂ ಪಶ್ಚಿಮ ಬಂಗಾಳದ ಕಾರ್ಷಿಕ ರಂಗದಲ್ಲಿನ ಬೆಳವಣಿಗೆಗಳ ಬಗ್ಗೆ ವಿಚಾರ-ವಿಮರ್ಶೆ ನಡೆಯಲಿರುವ ಈ ಸಮಾರಂಭದಲ್ಲಿ ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷ ಬಿನೋಯ್ ಕೊನಾರ್ ಹಾಗೂ ಪಶ್ಚಿಮ ಬಂಗಾಳ ಗ್ರಾಮೀಣ ಅಭಿವೃದ್ಧಿ ಸಚಿವರಾದ ಸೂರ್ಯಕಾಂತ್ ಮಿಶ್ರಾ ಭಾಗವಹಿಸಲಿದ್ದಾರೆ.

ರಾಜ್ಯದಲ್ಲಿ ವಿವಿಧ ಬೆಳೆಗಾರರ ಸಮಸ್ಯೆಗಳತ್ತ ಗಮನ ಕ್ರೋಢೀಕರಿಸಲು ವಿವಿಧ ಸಮಾವೇಶಗಳನ್ನು ನಡೆಸಲು ಕೂಡಾ ಕರ್ನಾಟಕ ಪ್ರಾಂತ ರೈತ ಸಂಘ ನಿರ್ಧರಿಸಿದೆ. ಗುಲ್ಬರ್ಗದಲ್ಲಿ ತೊಗರಿ ಬೆಳೆಗಾರರ ಸಮಾವೇಶವನ್ನೂ, ರಾಯಚೂರಿನಲ್ಲಿ ಹತ್ತಿ ಬೆಳೆಗಾರರ ಸಮಾವೇಶವನ್ನು ಹಾಗೂ ಬೆಂಗಳೂರಿನಲ್ಲಿ ಕಬ್ಬು ಬೆಳೆಗಾರರ ಸಮಾವೇಶವನ್ನು ಜನವರಿ ತಿಂಗಳಿನಲ್ಲಿ ನಡೆಸಲಾಗುವುದು.

ಇದಲ್ಲದೆ ಫೆಬ್ರವರಿ ತಿಂಗಳಿನಲ್ಲಿ ರೈತ ಸಂಘಟನೆಯಲ್ಲಿ ಕೆಲಸ ಮಾಡುತ್ತಿರುವ 11 ಪೂರ್ಣಾವಧಿ ಕಾರ್ಯಕರ್ತರಿಗೆ 2 ದಿನಗಳ ಕಾರ್ಯಾಗಾರವನ್ನು ನಡೆಸಲು ಕೂಡಾ ಕರ್ನಾಟಕ ಪ್ರಾಂತ ರೈತ ಸಂಘದ ಪದಾಧಿ ಕಾರಿಗಳ ಸಭೆ ನಿರ್ಧರಿಸಿದೆ.

ಕರ್ನಾಟಕದಲ್ಲಿ ಕಳೆದ ವಾರ

ಡಿಸೆಂಬರ್ 20

- ಮೈಸೂರಿನ ವಿಕ್ರಾಂತ್ ಟೈರ್ಸ್ ಕಾರ್ಖಾನೆಯ ಶೇರುಗಳನ್ನು ಖಾಸಗಿ ಜೆ.ಕೆ.ಟೈರ್ಸ್ ಕಂಪನಿಗೆ ವಹಿಸುವ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳಲು ಮುಖ್ಯ ಮಂತ್ರಿಗಳಿಗೆ ಸಚಿವ ಸಂಪುಟದ ಅಧಿಕಾರ.
- ವೀರಪ್ಪನ್ ಸೆರೆಯ ವಿಶೇಷ ಕಾರ್ಯಾಚರಣೆ ದಳದಲ್ಲಿ 'ಆತ್ಮಾಹುತಿ' ದಳವನ್ನು ರಚಿಸಲಾಗಿಲ್ಲ ಎಂದು ದಳದ ಮುಖ್ಯಸ್ಥರ ವಿವರಣೆ.

ಡಿಸೆಂಬರ್ 21

- ಹಾಸನದಲ್ಲಿ ನಾಲ್ಕು ದಿನಗಳ 65ನೇ ಕನ್ನಡ ಸಾಹಿತ್ಯ ಸಮ್ಮೇಳನ ಆರಂಭ.

ಡಿಸೆಂಬರ್ 22

- ಬಸ್ ದರ ಏರಿಕೆ ಪ್ರಸ್ತಾವನೆ ಸರಕಾರದ ಪರಿಶೀಲನೆಯಲ್ಲಿ ಇಲ್ಲ ಎಂದು ಸಾರಿಗೆ ಮಂತ್ರಿಗಳು.
- ಪ್ರಧಾನಿಗಳ ಯೋಗಕ್ಷೇಮಕ್ಕೆ ನಡೆಸ ಲಾಗುತ್ತಿದೆ ಎನ್ನಲಾದ ಚಂಡಿಕಾಯಾಗ ಅಂತ್ಯ. ಪೂರ್ಣಾಹುತಿಯಲ್ಲಿ 120 ರೇಷ್ಮೆ ಸೀರೆಗಳು, ಅಪಾರ ಪ್ರಮಾಣದ ತುಪ್ಪ, ಜೇನು ಮತ್ತು ಇತರ ವಸ್ತುಗಳು ಅಗ್ನಿಕುಂಡಕ್ಕೆ.

ಡಿಸೆಂಬರ್ 23

- 4360 ಕೋಟಿ ರೂಗಳ ಯೋಜನಾ ಗಾತ್ರದಲ್ಲಿ 550 ಕೋಟಿ ರೂ ಕಡಿತ ದಿಂದ ಅಭಿವೃದ್ಧಿ ಯೋಜನೆಗಳಿಗೆ ಒದಗಿಸಿರುವ ಹಣದಲ್ಲಿ 10% ಖೋತಾ ಮಾಡುವಂತೆ ಎಲ್ಲಾ ಇಲಾಖೆಗಳಿಗೆ ಸೂಚನೆ. ಯೋಜನಾ ಗಾತ್ರ ಕಡಿತದಿಂದ ಅಭಿವೃದ್ಧಿ ಕೆಲಸಗಳಿಗೆ ತೊಂದರೆ ಯಾಗುವುದಿಲ್ಲ ಎಂದು ಹಣಕಾಸು ಮಂತ್ರಿಗಳ ಹೇಳಿಕೆಗೆ ತದ್ವಿರುದ್ಧವಾದ ಸೂಚನೆ.

ಡಿಸೆಂಬರ್ 24

- ಇತ್ತೀಚಿನ ಅತಿವೃಷ್ಟಿಯಿಂದ 134,41 ಕೋಟಿ ನಷ್ಟವಾಗಿದ್ದು, ರಾಷ್ಟ್ರೀಯ ನೈಸರ್ಗಿಕ ವಿಕೋಪ ನಿಧಿಯಿಂದ ಇಷ್ಟು ನೆರವಿಗೆ ಕೇಂದ್ರಕ್ಕೆ ರಾಜ್ಯ ಸರಕಾರ ಮನವಿ.
- ಬೀದರ್ ಜಿಲ್ಲಾ ಪಂಚಾಯ್ತಿಯ ಕೋಟ್ಯಾಂತರ ರೂಪಾಯಿಗಳ ಖರೀದಿ ಅವ್ಯವಹಾರಕ್ಕೆ ಸಂಬಂಧಪಟ್ಟಂತೆ ಐವರು ಅಧಿಕಾರಿಗಳ ಅಮಾನತು.

ಡಿಸೆಂಬರ್ 25

- ಭ್ರಷ್ಟಾಚಾರದ ವಿರುದ್ಧ ಸಂಘಟಿತ ಹೋರಾಟ ನಡೆಸಲು ರಾಜ್ಯ, ಜಿಲ್ಲೆ, ತಾಲೂಕು ಮಟ್ಟಗಳಲ್ಲಿ ಸಮಿತಿ ರಚಿಸಬೇಕೆಂದು ನಿವೃತ್ತ ನ್ಯಾಯಾಧೀಶ ಕೋ.ಚನ್ನಬಸಪ್ಪ ಅಧ್ಯಕತೆಯಲ್ಲಿ ಸೇರಿದ್ದ ಗಣ್ಯರ ಸಭೆ. ಭ್ರಷ್ಟಾಚಾರ ಪ್ರಕರಣಗಳನ್ನು ಒಂದು ವರ್ಷದೊಳಗೆ ಇತ್ಯರ್ಥಗೊಳಿಸಬೇಕೆಂದು ಸಲಹೆ.

ಡಿಸೆಂಬರ್ 26

- ದೇವನಹಳ್ಳಿಯ ಅಂತರ್‍ರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಬಿಲ್ ಆಂಡ್ ಆಪರೇಟ್(ಕಟ್ಟಿ-ನಿರ್ವಹಿಸಿ) ಪ್ರಕಾರ ಖಾಸಾಗಿಯವರಿಗೆಕೊಟ್ಟರೆ ಬಿಲ್-ಆಪರೇಟ್-ಟ್ರಾನ್ಸ್ ಫರ್ (ಕಟ್ಟಿ-ನಿರ್ವಹಿಸಿ-ವರ್ಗಾಯಿಸಿ) ಪ್ರಕಾರ ಕೊಡಬೇಕು ಎಂದು ಕೇಂದ್ರ ಸರಕಾರದ ಶರತ್ತು.

ಸ್ವಾತಂತ್ರ್ಯದ ಚಿನ್ನದ ಹಬ್ಬವನ್ನು ಹೇಗೆ ಆಚರಿಸಬೇಕು?



ಈ ಆಚರಣೆಗಳಲ್ಲಿ ವಿವಿಧ ಜನವಿಭಾಗಗಳು – ಕಾರ್ಮಿಕ ವರ್ಗ, ರೈತಾಪಿ ವರ್ಗಗಳು, ಮಧ್ಯಮ ವರ್ಗಗಳು, ಬುದ್ಧಿಜೀವಿಗಳು, ಲೇಖಕರು, ಕಲಾವಿದರು, ವಿವಿಧ ಸಂಘಟನೆಗಳು, ಸಂಸ್ಥೆಗಳು ಸ್ವಾತಂತ್ರ್ಯ ಹೋರಾಟದಲ್ಲಿ ವಹಿಸಿದ ಪಾತ್ರದತ್ತ ಗಮನ ಸೆಳೆಯುವಂತಿರಬೇಕು, ಸ್ವಾತಂತ್ರ್ಯಾನಂತರದ ನವಭಾರತದ ಬಗ್ಗೆ ಇದ್ದ ಕನಸುಗಳೇನು ಎಂದು ನೆನಪಿಸುವಂತಿರಬೇಕು; ಸ್ವಾತಂತ್ರ್ಯಾನಂತರ ಬಂದ ಸರಕಾರಗಳು ಈ ದಿಕ್ಕಿನಲ್ಲಿ ಏನು ಮಾಡಿವೆಎಂಬುದರ ವಿಶ್ಲೇಷಣೆ–ವಿಮರ್ಶೆಯೂ ಆಗುವಂತಿರಬೇಕು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಹೇಳಿದ್ದಾರೆ. ಭಾರತದ ಸ್ವಾತಂತ್ರ್ಯದ ೫೦ನೇ ವಾರ್ಷಿಕೋತ್ಸವದ ಸಂಸ್ಮರಣಾ ರಾಷ್ಟ್ರೀಯ ಸಮಿತಿಯ ಸಭೆಗೆ ನೀಡಿದ ತನ್ನ ಟಿಪ್ಪಣಿಯಲ್ಲಿ ಹೀಗೆ ಅವರು ಹೇಳಿದ್ದಾರೆ.

ಈ ಸಮಿತಿಯ ಅಜೆಂಡಾ ವಿವಿಧ ಅಂಶಗಳನ್ನು ಅಂದರೆ ಒಂದು ಅಂತರ್‍ರಾಷ್ಟ್ರೀಯ ಸಮ್ಮೇಳನ ನಡೆಸಬೇಕು, ಸ್ವಾತಂತ್ರ್ಯದ ಬಗ್ಗೆ ಗುಂಪು ಚರ್ಚೆ, ವಿಚಾರ ಸಂಕಿರಣಗಳು, ಛಾಯಾ ಚಿತ್ರಪ್ರದರ್ಶನ ಇತ್ಯಾದಿಗಳನ್ನು ಸೂಚಿಸಿತ್ತು. ಆದರೆ ಇವು ಕೇವಲ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ನೇತೃತ್ವದ ಹೋರಾಟಗಳಿಗೆ ಮಾತ್ರ ಸೀಮಿತವಾಧಂತಿದೆ ಎಂದಿರುವ ಸುರ್ಜಿತ್ ಸ್ವಾತಂತ್ರ್ಯ ಹೋರಾಟದಲ್ಲಿ ಕಾಂಗ್ರೆಸ್‌ನ ಪಾತ್ರ ಮಹತ್ವದ್ದಾದರೂ ಇತರ ಹತ್ತು ಹಲವು ಪ್ರವಾಹಗಳು ಸ್ವಾತಂತ್ರ್ಯ ಆಂದೋಲನಕ್ಕೆ ನೀಡಿದ ಕೊಡುಗೆಗಳನ್ನು ಕಡೆಗಣಿಸುವುದು ಅನ್ಯಾಯದ ಕೆಲಸವಾಗುತ್ತದೆ ಎಂದಿದ್ದಾರೆ.

ವಿವಿಧ ಪ್ರವಾಹಗಳು

ಪ್ರಥಮ ಸ್ವಾತಂತ್ರ್ಯ ಸಮರ ಎಂದೆನಿಸಿದ 1857ರ ಬಂಡಾಯ ವಾಗಲೀ, 19ನೇ ಶತಮಾನದ ಅಂತ್ಯದ ವೇಳೆಗೆ ನಡೆದ ಇತರ ಹಲವು ಬಂಡಾಯಗಳಾಗಲೀ, 20ನೇ ಶತಮಾನದ ಆರಂಭದಲ್ಲಿ ದೇಶದ ವಿವಿಧೆಡೆ ಆರಂಭವಾದ ಕ್ರಾಂತಿಕಾರಿ ಪ್ರವೃತ್ತಿ, ಹಲವರು ದೇಶಭ್ರಷ್ಟರಾಗಿ ಪರದೇಶ ಗಳಿಂದ ನಡೆಸಿದ ಹೋರಾಟಗಳು, 1920ರ ದಶಕದಲ್ಲಿ ಕಾರ್ಮಿಕ ಆಂದೋಲನ ಸಂಘಟಿತ ರೂಪ ಪಡೆದ ಮೇಲೆ ಸ್ವಾತಂತ್ರ್ಯ ಹೋರಾಟದಲ್ಲಿ ಕಾರ್ಮಿಕರು ವಹಿಸಿದ ಪಾತ್ರ, 1930ರ ದಶಕದ ನಂತರ ಅಖಿಲ ಭಾರತ ಕಿಸಾನ್ ಸಭಾದ ರಚನೆ, ಅದರ ಮೂಲಕ ರೈತಾಪಿ ವರ್ಗಗಳು ಸ್ವಾತಂತ್ರ್ಯ ಆಂದೋಲನಕ್ಕೆ ನೀಡಿದ ಕೊಡುಗೆ, ಎಡಪಂಥೀಯರ ಕೊಡುಗೆ, ಜಮ್ಮು-ಕಾಶ್ಮೀರದಲ್ಲಿ ನ್ಯಾಶನಲ್ ಕಾನ್ಫರೆನ್ಸ್‌ನ ಆಂದೋಲನ, ಹೈದರಾಬಾದಿನಲ್ಲಿ ತೆಲಂಗಾಣಾ ಹೋರಾಟ, ತಿರುವಾಂಕೂರಿನಲ್ಲಿ ಪುನ್ನಪ್ರ-ವಾಯಲಾರ್ ಹೋರಾಟ ಇತ್ಯಾದಿ ಸಾಮ್ರಾಜ್ಯಶಾಹಿಯ ಆಟವನ್ನು ವಿಫಲಗೊಳಿಸುವ ಹೋರಾಟಗಳು ಇವನ್ನೆಲ್ಲಾ ಉಪೇಕ್ಷಿಸುವುದು ಸರಿಯಲ್ಲ.

ಈ ಎಲ್ಲಾ ಹೋರಾಟಗಳಲ್ಲಿನ ಒಂದು ಸಮಾನ ಅಂಶ ಎಂದರೆ ದೇಶಪ್ರೇಮ, ತ್ಯಾಗ ಹಾಗೂ ಬಲಿದಾನದ ಭಾವನೆ. ವಿಭಿನ್ನ ಭಾಷೆ, ಸಂಸ್ಕೃತಿ ಜನಾಂಗ, ಧರ್ಮದ ಜನಗಳಿರುವ ದೇಶದ ಸಮ್ಮಿಶ್ರ ಸ್ವರೂಪ ಸಮಾನ ಶತ್ರುವಾದ ಬ್ರಿಟಿಶ್ ವಸಾಹತುಶಾಹಿಯ ವಿರುದ್ಧ ಹೋರಾಡುವಲ್ಲಿ ಅಡ್ಡ ಬರಲಿಲ್ಲ. ಬದಲಾಗಿ ಆ ಹೋರಾಟಕ್ಕೆ ಅವೆಲ್ಲಾ ಕಾಣಿಕೆ ನೀಡಿದವು ಎಂದು ಸುರ್ಜಿತ್ ತಮ್ಮ ಟಿಪ್ಪಣಿಯಲ್ಲಿ ನೆನಪಿಸಿದ್ದಾರೆ.

ಸ್ಮರಿಸಿದರಷ್ಟೇ ಸಾಲದು ವಿಶ್ಲೇಷಣೆಯಾಗಬೇಕು

ಭಾರತದ ಸ್ವಾತಂತ್ರ್ಯದ 50ನೇ ವಾರ್ಷಿಕೋತ್ಸವದಂದು ಸ್ಮರಣೆ ಮಾಡಿದರಷ್ಟೇ ಸಾಲದು. ಸ್ವಾತಂತ್ರ್ಯ ಹೋರಾಟದ ದಿನಗಳಲ್ಲಿ ದೇಶಬಾಂಧವರಿಗೆ ನೀಡಿದ ವಚನಗಳನ್ನು ಪಾಲಿಸಲು ಸಾಧ್ಯವಾಗಿದೆಯೇ, ಸ್ವತಂತ್ರ ಭಾರತದ ಆಕಾಂಕ್ಷೆಗಳನ್ನು ಈಡೇರಿಸಲು ಸಾಧ್ಯವಾಗಿದೆಯೇ ಎಂದು ಕೂಡಾ ನಾವು ವಿಶ್ಲೇಷಿಸಬೇಕಾಗಿದೆ ಎಂದು ಸುರ್ಜಿತ್ ಹೇಳಿದ್ದಾರೆ. ನಮ್ಮ ನಂತರ ವಿಮೋಚನೆಗೊಂಡ ಇತರ ಹಲವು ದೇಶಗಳು ನಮ್ಮಿಂದ ಮುಂದೆ ಹೋಗಿವೆ, ನಮಗೇಕೆ ಬಡತನ, ಹಸಿವು, ನಿರುದ್ಯೋಗದ ಸಮಸ್ಯೆಗಳನ್ನು ಇನ್ನೂ ಬಗೆಹರಿಸಲಾಗಿಲ್ಲ ಎಂಬುದರ ಜಿಜ್ಞಾಸೆಯೂ ಆಗಬೇಕಾಗಿದೆ. ಈ ಚಿನ್ನದ ಹಬ್ಬದ ಸಂದರ್ಭದಲ್ಲಿ ನಮ್ಮ ಸಾಧನೆಗಳ, ನಮ್ಮ ಹಿಂದುಳಿಕೆಗಳ, ವಿಫಲತೆಗಳ ಆತ್ಮವಿಮರ್ಶೆಯೂ ಆಗತ್ಯ ಎಂದು ಸುರ್ಜಿತ್ ಹೇಳಿದ್ದಾರೆ.

ಸ್ವಾತಂತ್ರ್ಯ ಆಂದೋಲನದ ವಿಭಿನ್ನ ಆಯಾಮಗಳ ಬಗ್ಗೆ ಪುಸ್ತಕಗಳ ಪ್ರಕಟಣೆಗಳೂ ರಾಷ್ಟ್ರೀಯ ಮಟ್ಟದಲ್ಲಿ ಹಾಗೂ ರಾಜ್ಯ ಮಟ್ಟಗಳಲ್ಲಿ ಆಗಬೇಕಾಗಿದೆ, ಅವುಗಳ ನಿರ್ದಿಷ್ಟ ಲಕ್ಷಣಗಳನ್ನು ಕೂಡಾ ಎತ್ತಿ ತೋರುವಂತಹ ಪ್ರಕಟಣೆಗಳೂ ಬರಬೇಕು. ಅದೇ ರೀತಿ ಬ್ರಿಟಿಷರು ಜನರನ್ನು ಒಡೆಯಲು ಬಳಸಿದಂತೆ ಕೋಮುವಾದದಿಂದ ರಾಜಕೀಯ ಈಗ ಗ್ರಸ್ತಗೊಂಡುದರ ಬಗ್ಗೆಯೂ ಗಮನ ಕೇಂದ್ರೀಕರಿಸಿ ಕೋಮುವಾದವನ್ನು ಎದುರಿಸಬೇಕಾಗಿದೆ ಹಾಗೂ ಜನಗಳಲ್ಲಿ ದೇಶಪ್ರೇಮ ಮತ್ತು ಧರ್ಮನಿರಪೇಕ್ಷತೆಯ ಮೌಲ್ಯಗಳನ್ನು ಬೆಳೆಸಬೇಕಾಗಿದೆ ಎಂದು ಸುರ್ಜಿತ್ ಅಭಿಪ್ರಾಯಪಟ್ಟಿದ್ದಾರೆ.

ಐವತ್ತು ವರ್ಷಗಳು ಒಂದು ದೇಶದ ಜೀವನದಲ್ಲಿ ಸಣ್ಣ ಅವಧಿಯೇನೂ ಅಲ್ಲ ಎಂದಿರುವ ಸುರ್ಜಿತ್ ಈ ಅವಧಿಯಲ್ಲಿ ನಮ್ಮ ಸಾಧನೆಗಳ ಹಾಗೂ ದೌರ್ಬಲ್ಯಗಳ ವಿಮರ್ಶೆ ಅಗತ್ಯ ಎನ್ನುತ್ತಾ ಈ ಸ್ಮರಣೆ ಕೇವಲ ತೋರಿಕೆಯ ಚಟುವಟಿಕೆಯಾಗ ಬಾರದು, ಸ್ವಾತಂತ್ರ್ಯ ಆಂದೋಲನದ ವಿಭಿನ್ನ ಅಂಶಗಳ ಬಗ್ಗೆ ಜನಗಳಿಗೆ ಶಿಕ್ಷಣ ನೀಡಲು, ಅದರಿಂದ ಸ್ಫೂರ್ತಿ ಪಡೆದು ಸರಿಯಾದ ಪಾಠ ಕಲಿಯಲು ಗಂಭೀರ ಪ್ರಯತ್ನ ಮಾಡಬೇಕಾಗಿದೆ ಎಂದು ಸುರ್ಜಿತ್ ತಮ್ಮ ಟಿಪ್ಪಣಿಯಲ್ಲಿ ಒತ್ತಿ ಹೇಳಿದ್ದಾರೆ.

ಇದು ಕೇವಲ ಹೆಸರಿಗಷ್ಟೇ ನಡೆಯದೆ ಅರ್ಥಪೂರ್ಣವಾಗಿರಬೇಕು, ಸ್ವಾತಂತ್ರ್ಯ ಹೋರಾಟದ ಸಾಗರವನ್ನು ಸೇರಿದ ಎಲ್ಲಾ ಪ್ರವಾಹಗಳನ್ನು ನೆನಪಿಸಿಕೊಳ್ಳುವಂತದ್ದಿರಬೇಕು, ಸ್ವಾತಂತ್ರ್ಯಾನಂತರದ ಸಾಧನೆ, ವಿಫಲತೆಗಳ ವಿಶ್ಲೇಷಣೆ ನಡೆಯಬೇಕು, ರಾಷ್ಟ್ರೀಯ ಆಂದೋಲನದ ಅಡಿಗಲ್ಲಾದ ದೇಶಪ್ರೇಮ ಮತ್ತು ಧರ್ಮನಿರಪೇಕ್ಷತೆಯ ಮೌಲ್ಯಗಳನ್ನು ಜನಗಳಲ್ಲಿ ಮತ್ತೆ ಬೆಳೆಸುವಂತಿರಬೇಕು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಈ ಬಗ್ಗೆ ನಡೆದ ಸ್ವಾತಂತ್ರ್ಯದ 50ನೇ ವಾರ್ಷಿಕೋತ್ಸವದ ಸಂಸ್ಮರಣಾ ರಾಷ್ಟ್ರೀಯ ಸಮಿತಿಯ ಸಭೆಗೆ ಸಲ್ಲಿಸಿದ ಟಿಪ್ಪಣಿಯಲ್ಲಿ ಹೇಳಿದ್ದಾರೆ. □

‘ಪ್ರಸಾರ ಭಾರತಿ’ ಬಗ್ಗೆ ಸಿಪಿಐ(ಎಂ) ಟಿಪ್ಪಣಿ

ಸರಕಾರೀ ಮಾಧ್ಯಮದ ಬದಲು ಪ್ರಜಾಸತ್ತಾತ್ಮಕ ಪರ್ಯಾಯ ವ್ಯವಸ್ಥೆ ಬೇಕು, ಖಾಸಗಿ ವ್ಯವಸ್ಥೆಯಲ್ಲ

ಇಲೆಕ್ಟ್ರಾನಿಕ್ ಮಾಧ್ಯಮದಲ್ಲಿ ವಿದೇಶೀ ಒಡೆತನದ ಸಂಸ್ಥೆಗಳ ಪ್ರವೇಶಕ್ಕೆ ಸಿಪಿಐ(ಎಂ)ನ ವಿರೋಧವಿದೆ. ಅಲ್ಲದೇ ನಿತೀಶ್‌ಸೇನ್ ಗುಪ್ತಾ ವರದಿ ಶಿಫಾರಸು ಮಾಡಿರುವಂತೆ ಸ್ಥಳೀಯ ಖಾಸಗಿ ಹಾಗೂ ವಿದೇಶೀ ಕಂಪನಿಗಳಿಗೆ ದೇಶದಲ್ಲಿ ಉಪಗ್ರಹಗಳೊಂದಿಗೆ ಸಂಪರ್ಕ ಕಲ್ಪಿಸುವ ಅವಕಾಶ ನೀಡುವ ಪ್ರಯತ್ನವನ್ನು ಸಿಪಿಐ(ಎಂ) ವಿರೋಧಿಸಿದೆ.

‘ಪ್ರಸಾರ ಭಾರತಿ’ ಶಾಸನ ಹಾಗೂ ನಿತೀಶ್ ಸೇನ್ ಗುಪ್ತಾ ವರದಿಯ ಬಗ್ಗೆ ಸಲ್ಲಿಸಿದ ಒಂದು ಟಿಪ್ಪಣಿಯಲ್ಲಿ ಸಿಪಿಐ(ಎಂ) ‘ಸ್ವಯಮಾಡಳಿತದ ಅಧಿಕಾರವುಳ್ಳ ಪ್ರಸಾರ ಭಾರತಿಯನ್ನು ರಚಿಸಬೇಕು. ಅದು ಏಕೈಕ ರಾಷ್ಟ್ರೀಯ ಪ್ರಸಾರ ಸಂಸ್ಥೆಯಾಗಿರಬೇಕು’ ಎಂದು ಅಭಿಪ್ರಾಯ ಪಟ್ಟಿದೆ.

1990ರಲ್ಲಿ ಪ್ರಸಾರ ಭಾರತಿ ಶಾಸನವನ್ನು ಸರ್ವ ಸಮ್ಮತಿಯಿಂದ ಅಂಗೀಕರಿಸಿದ್ದು ದೇಶದಲ್ಲಿ ಒಂದು ಸ್ವಯಮಾಡಳಿತ ಸಂಪನ್ನ ಪ್ರಸಾರ ವ್ಯವಸ್ಥೆಯನ್ನು ಸ್ಥಾಪಿಸಲಿಕ್ಕಾಗಿ ಎಂದು ನೆನಪಿಸಿರುವ ಸಿಪಿಐ(ಎಂ)ನ ಟಿಪ್ಪಣಿ ಈಗಿರುವ ಸರಕಾರಿ ಹತೋಟಿಯ ಮಾಧ್ಯಮದ ಸ್ಥಾನದಲ್ಲಿ ಒಂದು ಪ್ರಜಾ ಸತ್ತಾತ್ಮಕ ಪರ್ಯಾಯ ವ್ಯವಸ್ಥೆಯನ್ನು ರೂಪಿಸುವುದು, ಅಂತಹ ಪ್ರಸಾರ ವ್ಯವಸ್ಥೆಯ ಮೇಲೆ ಸಾರ್ವಜನಿಕ ಹತೋಟಿಯಿರುವಂತೆ ಮಾಡುವುದು ಇದರ ಉದ್ದೇಶ ಎಂದಿದೆ.

ಪ್ರಸಾರ ವ್ಯವಸ್ಥೆಯ ‘ಸಾರ್ವಜನಿಕ ಸೇವೆ’ಯ ಪಾತ್ರವನ್ನು ಮತ್ತು ‘ಮನರಂಜನಾ’ ಪಾತ್ರವನ್ನು ಭಿನ್ನ-ಭಿನ್ನವಾಗಿ ಕಾಣುವುದು ಸರಿ ಯಲ್ಲ ಎಂದು ಅಭಿಪ್ರಾಯ ಪಡುತ್ತಾ ಪ್ರಸಾರ ಮಾಧ್ಯಮ ಮಾಹಿತಿ ನೀಡಬೇಕು, ಶಿಕ್ಷಣ ನೀಡಬೇಕು, ಮನರಂಜನೆ ನೀಡಬೇಕು, ಪ್ರಜಾಸತ್ತಾತ್ಮಕ ಸಂಸ್ಕೃತಿಯನ್ನು ಪೋಷಿಸ ಬೇಕು, ಬೆಳವಣಿಗೆಗೆ ಪ್ರೋತ್ಸಾಹ ನೀಡಬೇಕು, ಜನಗಳ ವಿಭಿನ್ನ ಹಾಗೂ ಬಹು ಸ್ವರೂಪದ ಸಂಸ್ಕೃತಿಗಳನ್ನು ಪ್ರತಿಫಲಿಸುವುದರೊಂದಿಗೆ ಜಾತ್ಯಾತೀತ ವಿಚಾರಗಳು ಮತ್ತು ರಾಷ್ಟ್ರೀಯ ಐಕ್ಯತೆಯನ್ನು ಪ್ರೋತ್ಸಾಹಿಸಬೇಕು ಎಂದು ಸಿಪಿಐ(ಎಂ) ತನ್ನ ಅಭಿಪ್ರಾಯವನ್ನು ಮುಂದಿಟ್ಟಿದೆ.

ದ್ವಂದ್ವ ವ್ಯವಸ್ಥೆ ಬೇಕಿಲ್ಲ

ನಿತೀಶ್‌ಸೇನ್ ಗುಪ್ತಾ ವರದಿ ಖಾಸಗೀ ಪ್ರಸಾರ ಸಂಸ್ಥೆಗಳು (ಸ್ಥಳೀಯ ಮತ್ತು ವಿದೇಶಿ) ಕೂಡಾ ಸ್ವಾಯತ್ತ ಪ್ರಸಾರ ಭಾರತಿಯೊಂದಿಗೆ ಪ್ರಸಾರ ಮಾಡಲು ಅವಕಾಶವಿರುವ ಒಂದು ದ್ವಂದ್ವ ವ್ಯವಸ್ಥೆಯಿರಬೇಕು ಎಂದಿದೆ. ಇದನ್ನು ತಾನು ಒಪ್ಪುವುದಿಲ್ಲ ಎಂದು ಸಿಪಿಐ(ಎಂ) ಸ್ಪಷ್ಟ ಪಡಿಸಿದೆ.

ಹೊಸ ತಂತ್ರಜ್ಞಾನಗಳು ಸರಕಾರಿ ಒಡೆತನದ ಗುತ್ತೇದಾರಿಕೆಯನ್ನು ಧ್ವಂಸ ಮಾಡಿವೆ, ನಿಯಮಾವಳಿಗಳನ್ನು ನಿಷ್ಪ್ರಯೋಜಕಗೊಳಿಸಿವೆ ಎಂಬ ಸೇನ್ ಗುಪ್ತಾ ವರದಿಯ ತೀರ್ಮಾನ ಸರಿಯಲ್ಲ ಎಂದು ಸಿಪಿಐ(ಎಂ) ಹೇಳಿದೆ. ಇದೊಂದು ತಪ್ಪು ತಿಳುವಳಿಕೆ. ತಾಂತ್ರಿಕ ಮುನ್ನಡೆಯೆಂದರೆ ಖಾಸಗಿ ಅಥವಾ ವಿದೇಶೀ ಹತೋಟಿ ಅನಿವಾರ್ಯ ಎಂದೇನೂ ಅರ್ಥವಾಗುವುದಿಲ್ಲ. ಯಾವ ರೀತಿಯ ಹತೋಟಿ, ನಿಯಮಾವಳಿಗಳು ಇರಬೇಕೆಂಬುದು ಪ್ರಸಾರ ಮಾಧ್ಯಮವನ್ನು ನಾವು ಹೇಗೆ ಬಳಸ ಬಯಸು ತ್ತೇವೆ ಎಂಬುದನ್ನು ಅವಲಂಬಿಸಿದೆ ಎಂದು ಸಿಪಿಐ(ಎಂ) ಹೇಳಿದೆ.

ಸಾರ್ವಜನಿಕ ಒಡೆತನಗಳ ಹಾಗೂ ಸಾರ್ವಜನಿಕ ಸೇವೆಗೆ ಬದ್ಧವಾದ ಸ್ವಾಯತ್ತ ‘ಪ್ರಸಾರ ಭಾರತಿ’ಯನ್ನು ರಚಿಸುವ ಗುರಿ ಈಗಲೂ ಸಮರ್ಥನೀಯ, ಖಾಸಗೀ ದೇಶೀ -ವಿದೇಶೀ ಪ್ರಸಾರಕ್ಕಾಗಿ ಲೈಸೆನ್ಸ್ ನೀಡುವುದು ಈ ಗುರಿಗೆ ಅಡ್ಡಿಯಾಗುತ್ತದೆ ಎಂದು ಅದು ಮುಂದುವರಿದು ಹೇಳಿದೆ.

ಸ್ಪರ್ಧೆ ಏತಕ್ಕಾಗಿ?

ಖಾಸಗಿ ಪ್ರಸಾರಕರು ಪ್ರಸಾರ ಭಾರತಿಗೆ ಸ್ಪರ್ಧೆ ನೀಡುತ್ತಾರೆ ಎಂಬ ಸೇನ್ ಗುಪ್ತಾ ಸಮಿತಿಯ ಅಭಿಪ್ರಾಯದ ಬಗ್ಗೆ ಪ್ರತಿಕ್ರಿಯಿಸುತ್ತಾ “ಏತಕ್ಕಾಗಿ ಸ್ಪರ್ಧೆ? ಲಾಭದ ಗುರಿಯಿಂದ ಕೆಲಸ ಮಾಡುವ ಖಾಸಗಿ ಮತ್ತು ವಿದೇಶೀ ಪ್ರಸಾರಕರು ಸ್ವಾಯತ್ತ ಪ್ರಸಾರ ಭಾರತಿಗೆ ಸ್ಪರ್ಧಿಸಬೇಕಾದಂತಹ ಆದರ್ಶ ಮಾದರಿಗಳೇ? ಸಾರ್ವಜನಿಕ ಪ್ರಸಾರದ ನೀತಿ ಯನ್ನು ಬಲಪಡಿಸಲು ಇದು ನೆರವಾಗುವುದೇ?” ಎಂದು ಸಿಪಿಐ(ಎಂ) ಪ್ರಶ್ನಿಸಿದೆ.

ಇತ್ತೀಚಿನ ವರ್ಷಗಳಲ್ಲಿ ಭಾರತದ ಇಲೆಕ್ಟ್ರಾನಿಕ್ ಮಾಧ್ಯಮವನ್ನು ಪ್ರವೇಶಿಸಲು ದೈತ್ಯ ಬಹು ರಾಷ್ಟ್ರೀಯ ಪ್ರಸಾರ ಕಂಪನಿಗಳಿಗೆ ಅವಕಾಶ ನೀಡಲಾಗಿದೆ. ಸಿಎನ್‌ಎನ್ - ದೂರದರ್ಶನ ಒಪ್ಪಂದ ಇದಕ್ಕೊಂದು ಉದಾಹರಣೆ. 1995 ರಲ್ಲಿ ಅಂಗೀಕರಿಸಿದ ಕೇಬಲ್ ಜಾಲ(ಹತೋಟಿ) ಶಾಸನ 49% ದ ವರೆಗೆ ವಿದೇಶೀ ಬಂಡವಾಳಕ್ಕೆ ಅವಕಾಶ ನೀಡಿದೆ. “ವಿದೇಶೀ ಕಂಪನಿಗಳಿಗೆ ನಮ್ಮ ನೆಲದಲ್ಲಿ ಉಪಗ್ರಹ ಸಂಪರ್ಕಕ್ಕೆ ಅವಕಾಶ ಮಾಡಿ ಕೊಡುವುದರ ಅರ್ಥ ವಿದೇಶೀ ಬಹುರಾಷ್ಟ್ರೀಯ ಕಂಪನಿಗಳಿಗೆ ನಮ್ಮ ಪ್ರಸಾರ ವೀಕ್ಷಕರನ್ನು, ಮಾರುಕಟ್ಟೆಯನ್ನು ತಮ್ಮ ಮೇಲಟ್ಟದ ಸಂಘಟನಾ ಹಾಗೂ ಹಣಕಾಸು ಶಕ್ತಿಯ ಮೂಲಕ ಸುಲಿಯಲು ಅವಕಾಶ ನೀಡುವುದೆಂದೇ ಆಗು ತ್ತದೆ” ಎಂದು ಸಿಪಿಐ (ಎಂ) ಹೇಳಿದೆ.

ಖಾಸಗೀಕರಣವೆಂದರೆ ವ್ಯಾಪಾರೀಕರಣ

ಹೀಗೆ ಪ್ರಸಾರ ವ್ಯವಸ್ಥೆಯ ಖಾಸಗೀಕರಣವೆಂದರೆ ಅದನ್ನು ಕಂಪನಿಗಳಿಗೆ ವಹಿಸಿಕೊಟ್ಟು ಅದರ ವ್ಯಾಪಾರೀಕರಣಕ್ಕೆ ಅವಕಾಶ ಮಾಡಿ ಕೊಟ್ಟಂತೆಯೇ ಸರಿ. ಇದರಿಂದ ಪ್ರಸಾರ ವ್ಯವಸ್ಥೆಯ ಮೇಲೆ ಗುತ್ತೇದಾರಿಕೆ ಬೆಳೆಯಲು ಅವಕಾಶವಾಗುತ್ತದೆ. ಈ ಗುತ್ತೇದಾರಿಕೆಯೆಂಬುದು ಪ್ರಜಾ ಪ್ರಭುತ್ವ -ವಿರೋಧಿಯಾದ ಪ್ರಕ್ರಿಯೆ ಎಂದು ಸಿಪಿಐ (ಎಂ) ಟಿಪ್ಪಣಿ ವಿಶ್ಲೇಷಿಸಿದೆ.

“ಸರಕಾರೀ ಹತೋಟಿಯಿಂದ ಸ್ವಾಯತ್ತತೆ ಅಂದರೆ ಖಾಸಗೀ, ಪ್ರಸಾರ ವ್ಯವಸ್ಥೆ ಎಂದರ್ಥ ವಲ್ಲ. ಸ್ವಾಯತ್ತತೆಯ ಉದ್ದೇಶ ವೆಂದರೆ ಒಂದು ಸಾರ್ವಜನಿಕ ಪ್ರಸಾರ ವ್ಯವಸ್ಥೆಯನ್ನು ಹೊಂದು ವುದು. ಒಂದು ಸ್ವಾಯ ತ್ತ ಪ್ರಸಾರ ವ್ಯವಸ್ಥೆ ಸಾವಜನಿಕ ಸೇವೆ ಸಲ್ಲಿಸಲು ಸಾಧ್ಯಮಾಡಿ ಕೊಡಲೆಂಬ ನಿಲುವಿನಿಂದಾಗಿ ಪ್ರಸಾರ ಭಾರತಿ ಶಾಸನವನ್ನು ಅಂಗೀಕರಿ ಸಲಾಯಿತು. ಈ ದೃಷ್ಟಿಯಲ್ಲಿ ಸ್ವಾಯತ್ತತೆ ಮತ್ತು ಸಾರ್ವಜನಿಕ ಸೇವೆಗಾಗಿ ಪ್ರಸಾರದ ನೀತಿಗೆ ಬದ್ಧತೆ ಇವೆರಡೂ ಅವಿಭಾಜ್ಯ ಎಂದು ಮುಂದುವರಿದು ಈ ಟಿಪ್ಪಣಿ ಅಭಿಪ್ರಾಯ ಪಟ್ಟಿದೆ.

ಒಂದು ಪಾಶ್ಚಿಮಾತ್ಯ ದೈತ್ಯ ಮಾಧ್ಯಮ ಕಂಪನಿಯೊಂದಿಗೆ ಕೈಜೋಡಿಸುವುದರಲ್ಲಿ ಮತ್ತು ಇನ್ನೊಂದು ವಾಣಿಜ್ಯ ಕಂಪನಿಯೊಂದಿಗೆ ಕೈಜೋಡಿಸುವುದರಲ್ಲಿ ಭಿನ್ನತೆ ಕಾಣುವುದು ತಪ್ಪು ಎಂದಿರುವ ಸಿಪಿಐ(ಎಂ) ಟಿಪ್ಪಣಿ ಹಲವಾರು ಪ್ರಸ್ತಾವಗಳನ್ನು ಮುಂದಿಟ್ಟಿದೆ. ಅವುಗಳಲ್ಲಿ ಕೆಲವು ಹೀಗಿವೆ.

O ತಕ್ಷಣ ಒಂದು ಸ್ವಾಯತ್ತ ‘ಪ್ರಸಾರ ಭಾರತಿ’ಯನ್ನು ಏಕೈಕ ರಾಷ್ಟ್ರೀಯ ಪ್ರಸಾರ ಸಂಸ್ಥೆ ಯಾಗಿ ರಚಿಸುವುದು.

O ಇದರಲ್ಲಿ ಕೆಲವು ಮಾರ್ಗದರ್ಶಕ ಸೂತ್ರಗಳ ಪ್ರಕಾರ ಖಾಸಗೀ ತಯಾರಿಕರಿಗೆ ತರ್ಕಬದ್ಧ ಅವಕಾಶ ನೀಡಬಹುದು. ಆದರೆ ಕಂಪನಿಗಳಿಗೆ ಮತ್ತು ವಿದೇಶೀ ಬಹುರಾಷ್ಟ್ರೀಯ ಕಂಪನಿಗಳಿಗೆ ಪ್ರಸಾರ ಕೇಂದ್ರಗಳನ್ನು ಆರಂಭಿಸಲು ಅಥವಾ ಉಪಗ್ರಹ ಗಳೊಂದಿಗೆ ಸಂಪರ್ಕ ಸೌಲಭ್ಯಗಳನ್ನು ಪಡೆಯಲು ಅವಕಾಶ ನೀಡಬಾರದು.

O ದೂರದರ್ಶನ-ಸಿ.ಎನ್.ಎನ್. ಒಪ್ಪಂದವನ್ನು ರದ್ದು ಮಾಡಬೇಕು.

O ಅಂತರ್‍ರಾಷ್ಟ್ರೀಯ ಅನುಭವಕ್ಕೆ ತೆರೆದುಕೊಳ್ಳಲು ಪ್ರಸಾರ ಭಾರತಿ ಮತ್ತು ವಿದೇಶಗಳ ಪ್ರಸಾರ ಸಂಘಟನೆಗಳ ನಡುವೆ ಕಾರ್ಯಕ್ರಮಗಳ ವಿನಿಮಯ.

O ‘ಪ್ರಸಾರ ಭಾರತಿ’ ತನ್ನ ಅಂತರ್‍ರಾಷ್ಟ್ರೀಯ ಸುದ್ದಿ ಸಂಗ್ರಹವನ್ನು ಸ್ವತಂತ್ರವಾಗಿ ಹೆಚ್ಚಿಸಬೇಕು.

O ‘ಪ್ರಸಾರ ಭಾರತಿ’ ಒಕ್ಕೂಟ ಆಕಾಂಕ್ಷೆಗಳಿಗೆ ಅವಕಾಶ ನೀಡಲು ಕ್ರಮಗಳನ್ನು ಕೈಗೊಳ್ಳಬೇಕು. ಈ ಸಂಸ್ಥೆಯ ವಿವಿಧ ಕೇಂದ್ರಗಳಿಗೆ ಮಾರ್ಗದರ್ಶನ ನೀಡಲು ರಾಜ್ಯಮಟ್ಟದ ಸ್ವಾಯತ್ತ ಸಂಸ್ಥೆ ಯನ್ನು ರಚಿಸಬಹುದು.

O 1995ರ ಕೇಬಲ್ ಟೆಲಿವಿಷನ್(ಹತೋಟಿ) ಶಾಸನವನ್ನು ವಿದೇಶೀ ಬಹುರಾಷ್ಟ್ರೀಯ ಕಂಪನಿಗಳನ್ನು ಪ್ರತಿರೋಧಿಸಲು ಸಾಧ್ಯವಾಗು ವಂತೆ ತಿದ್ದುಪಡಿ ಮಾಡಬೇಕು. ಕೇಬಲ್, ಟಿ.ವಿ. ವ್ಯವಸ್ಥೆಯ ಮೇಲೆ ಸಾರ್ವಜನಿಕ ಹತೋಟಿಯಿರಬೇಕು.

O ವಾಯು ತರಂಗಗಳ ಮೇಲೆ ಸಾರ್ವಜನಿಕ ಹತೋಟಿಯ ಉದ್ದೇಶ ಹೊಂದಿದ್ದರೆ ವಾಯು ತರಂಗಗಳನ್ನು ನಿಯಂತ್ರಿಸಲು, ಅವುಗಳ ಉಸ್ತುವಾರಿ ನೋಡಲು ಒಂದು ಅತ್ಯುನ್ನತ ಸಂಸ್ಥೆಯನ್ನು ರಚಿಸುವ ಪ್ರಸ್ತಾವಕ್ಕೆ ಆಕ್ಷೇಪವಿಲ್ಲ. □

ಹೊಟ್ಟೆಗೆ ಹಿಟ್ಟು ಮೊದಲು - ಜುಟ್ಟಿಗೆ ಮಲ್ಲಿಗೆ ಆಮೇಲೆ

ಬೆಲೆಗಳು ಏರುತ್ತಲೇ ಇವೆ. ಇದು ಹೊಸದರಲ್ಲಿ ಬಂಡವಾಳಶಾಹಿ ಬೆಳವಣಿಗೆಯ ರೀತಿಯೇ ಅದು. ಆದರೆ ಕಳೆದ ಕೆಲವು ವರ್ಷಗಳಲ್ಲಿ ಆಹಾರ ಧಾನ್ಯಗಳ ಬೆಲೆ ತೀವ್ರ ಏರಿದೆ. ಈಗ ಕೆಲವು ದಿನಗಳಿಂದ ಗೋಧಿ ಹಿಟ್ಟಿನ ಬೆಲೆ ಅಪಾರವಾಗಿ ಏರಿ ಜನಸಾಮಾನ್ಯರ ಹೆಗಲನ್ನು ಭಾರಗೊಳಿಸಿ ಹೊಟ್ಟೆಯಲ್ಲಿ ಬೆಂಕಿಯುಂಟುಮಾಡಿತು. ಅಲ್ಲದೇ ಗೋಧಿ ಮತ್ತು ಗೋಧಿ ಹಿಟ್ಟು ಮಾರುಕಟ್ಟೆಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ಇರಲಿಲ್ಲ. ರೇಷನ್ ಅಂಗಡಿಗಳಿಂದಲಂತೂ ಇವು ಮಾಯವಾಗಿ ಬಿಟ್ಟಿವೆ.

ಈ ಸಮಸ್ಯೆಯ ಮೂಲ ಇರುವುದು ರಫ್ತಿಗಾಗಿ ಆಹಾರ ಧಾನ್ಯ ಬೆಳೆದ ನೀತಿಯಲ್ಲಿ. ಉದಾರೀಕರಣದ ಭಾಗವಾಗಿ ಆಹಾರಧಾನ್ಯಗಳನ್ನು ರಫ್ತು ಮಾಡುವುದರ ಮೇಲೆ ಒತ್ತುನೀಡಲಾಯಿತು. ಜಾಗತೀಕರಣ ಮಾಡಿದರೆ ನಮ್ಮಲ್ಲಿ ಶಿಲ್ಕಿರುವ ಆಹಾರಧಾನ್ಯಗಳನ್ನು ರಫ್ತು ಮಾಡಬಹುದು ಮತ್ತು ನಮಗೆ ಬೇಕಾಗುವ ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳಬಹುದು. ಆಗ ನಮ್ಮ ರಫ್ತಿಗೆ ಒಳ್ಳೆ ಬೆಲೆದೊರೆಯುತ್ತದೆ. ಮತ್ತು ನಮಗೆ ಬೇಕಾದ ಆಹಾರ ಧಾನ್ಯವನ್ನು ಕಡಿಮೆ ಬೆಲೆಗೆ ಆಮದು ಮಾಡಿಕೊಳ್ಳಬಹುದು ಎಂಬುದು ಈ ಜಾಗತೀಕರಣ/ಉದಾರೀಕರಣವಾದಿಗಳ ವಾದವಾಗಿತ್ತು.

ಆದರೆ ಈಗ ಏನಾಗಿದೆಯೆಂದರೆ ನಾವು ಗೋಧಿಯನ್ನು ರಫ್ತು ಮಾಡುತ್ತೇವೆ. ಗೋಧಿಯನ್ನು ಆಮದು ಮಾಡಿಕೊಳ್ಳುತ್ತೇವೆ. ಇದೇ ಸಮಯದಲ್ಲಿ ನಮ್ಮ ಜನ ಸಾಮಾನ್ಯರು ಹೊಟ್ಟೆಗೆ ಹಿಟ್ಟಿಲ್ಲದೆ ಉಪವಾಸ ಬೀಳುತ್ತಾರೆ. ಹಾಗಾದರೆ ಈ ಜಾಗತೀಕರಣದಿಂದ ಏನು ಲಾಭವಾಯಿತು. ಉದಾರೀಕರಣವಾದಿಗಳು ಏನೇನೊ ವಿವರಣೆ ನೀಡುತ್ತಾರೆ. ಆದರೆ ವಾಸ್ತವ ಏನೆಂದರೆ ಆಹಾರ ಧಾನ್ಯಗಳ ರಫ್ತು ಆಮದು ಎಲ್ಲ ಏನೂ ಮಾಡುತ್ತೇವೆ. ಇದರ ಲಾಭವನ್ನು ನಮ್ಮ ಬಂಡವಾಳಿಗರು ಹೊಡೆಯುತ್ತಾರೆ. ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿನ ವ್ಯಾಪಾರಿಗಳೂ ಲಾಭ ಹೊಡೆಯುತ್ತಾರೆ. ಇವರೆಲ್ಲ ಆಹಾರ ಧಾನ್ಯಗಳ ಬೆಲೆ ಹೆಚ್ಚಾಗುವಂತೆ ನೋಡಿಕೊಳ್ಳುತ್ತಾರೆ. ಯಾಕೆಂದರೆ ಒಟ್ಟು ವ್ಯಾಪಾರದ ಪ್ರಮಾಣ ಮತ್ತು ಬೆಲೆಗಳು ಹೆಚ್ಚಾದಂತೆ ಅವರ ಲಾಭವೂ ಹೆಚ್ಚಾಗುತ್ತದೆ. ಇದರ ಪರಿಣಾಮವನ್ನು ದೇಶದ ಜನಸಾಮಾನ್ಯರು ಅನುಭವಿಸಬೇಕಾಗುತ್ತದೆ. ಬೆಲೆ ಹೆಚ್ಚಳದ ಜೊತೆಗೆ ಜನಸಾಮಾನ್ಯರ ಕೊಳ್ಳುವ ಸಾಮರ್ಥ್ಯ ಹೆಚ್ಚಾಗುವುದಿಲ್ಲ.

ಈಗ ಆಗಿರುವುದೂ ಅದೇ. ಗೋಧಿಯನ್ನು ರಫ್ತು ಮಾಡಲಾಗಿದೆ. ಇದರಿಂದಾಗಿ ಮತ್ತು ಕಾಳಸಂತೆ ದಾಸ್ತಾನುಕಾರರಿಂದಾಗಿ ಮಾರುಕಟ್ಟೆಯಲ್ಲಿ ಗೋಧಿಯ ಅಭಾವ ಉಂಟಾಗಿದೆ. 1995-96 ರಲ್ಲಿ ಗೋಧಿ ಉತ್ಪಾದನೆ 3.1 ದಶಲಕ್ಷ ಟನ್ನುಗಳಷ್ಟು ಉತ್ಪಾದನೆ ಕಡಿಮೆ ಆಗಿರುವುದು ನಿಜ. ಸಮಸ್ಯೆಗೆ ಇದೂ ಕಾರಣ. ಆದರೆ ಈ ಸಮಸ್ಯೆ ಪರಿಹರಿಸಲಾರದ್ದಲ್ಲ. ಯಾಕೆಂದರೆ ಉತ್ಪಾದನೆಯಲ್ಲಿ ಏರು-ಪೇರು ಸಹಜವಾಗೇ ಉಂಟಾಗುತ್ತದೆ. ಆದ್ದರಿಂದಲೇ ದಾಸ್ತಾನು, ಸಾರ್ವಜನಿಕ, ವಿತರಣಾ ವ್ಯವಸ್ಥೆ ಇವೆಲ್ಲವೂ ಬಂದಿದ್ದು. ಇದರಿಂದ ಇಂತಹ ಸಮಸ್ಯೆಯನ್ನು ಸುಲಭವಾಗಿ ಪರಿಹರಿಸಬಹುದು, ಖಾಸಗಿ ವ್ಯಾಪಾರಿಗಳನ್ನು ಹತೋಟಿಯಲ್ಲಿಡುವುದು ಅವಶ್ಯ.

ಉದಾರೀಕರಣ ಈ ಎಲ್ಲವನ್ನು ಸಡಿಲುಗೊಳಿಸಿಬಿಟ್ಟಿದೆ. ಜನರಲ್ಲಿ ಖರೀದಿಸುವ ಸಾಮರ್ಥ್ಯವಿಲ್ಲ. ಅದು ದಿನದಿಂದ ದಿನಕ್ಕೆ ಕ್ಷೀಣಿಸುತ್ತಿದೆ ಹೊರತು ಹೆಚ್ಚುತ್ತಿಲ್ಲ ಸಾರ್ವಜನಿಕವಿತರಣಾ ವ್ಯವಸ್ಥೆ ಕುಸಿದು ಬಿದ್ದಿದೆ. ಕಾಳಸಂತೆಕೋರರ ಮೇಲೆ ಹತೋಟಿಯಿಲ್ಲ. ಇವೆಲ್ಲವೂ ಉದಾರೀಕರಣ/ಜಾಗತೀಕರಣದ ಪರಿಣಾಮ.

ಇಂದಿನ ಹಾಹಾಕಾರ ಈ ನೀತಿಗಳಿಂದಲೇ ಉಂಟಾದದ್ದು. ಭಾರತದಿಂದ ಗೋಧಿಯ ರಫ್ತು ಆಗಿದೆ. ಈ ರಫ್ತು ಮತ್ತು ಕಾಳಸಂತೆ ದಾಸ್ತಾನುಗಳಿಂದ ಮಾರುಕಟ್ಟೆಯಲ್ಲಿ ಅಭಾವ ಈ ಅಭಾವ ನೀಗಿಸಲು ಹೆಚ್ಚಿನ ಬೆಲೆಯಲ್ಲಿ ಗೋಧಿಯ ಆಮದು ಇದೇ ಸಂಸತ್ತಿನಲ್ಲಿ ಕೋಲಾಹಲ ಉಂಟುಮಾಡಿದ್ದು.

ಸಂಯುಕ್ತರಂಗದ ಸರಕಾರ ಜನರ ನೋವು ಕಡಿಮೆ ಮಾಡಲು ಇಂತಹ ನೀತಿಗಳ ಪರಿಣಾಮಗಳನ್ನು ಪೂರ್ತಿ ಅರ್ಥೈಸಿಕೊಂಡು ಕ್ರಮ ಕೈಗೊಳ್ಳಬೇಕಾಗುತ್ತದೆ. ಆ ರಾಜಕೀಯ ಸಂಕಲ್ಪ ಶಕ್ತಿ ಸಂಯುಕ್ತ ರಂಗಕ್ಕಿದೆಯೇ?

ವಾರದ ಆರ್ಥಿಕ ಟಿಪ್ಪಣಿಗಳು

ಕರಕಲಾಗುವ ಮೊಗ್ಗುಗಳು

ಮೊಗ್ಗುಗಳು ಅರಳಿ ಹೂವಾಗಿ ಕಂಪು ನೀಡಬೇಕು. ಅದು ನೈಜ ಸೌಂದರ್ಯ. ಆದರೆ ಈ ಮೊಗ್ಗುಗಳು ಸುಟ್ಟು ಕರಕಲಾದರೆ?

ಭಾರತದಲ್ಲಿ ದೊಡ್ಡ ಸಂಖ್ಯೆಯ ಮಕ್ಕಳ ಪರಿಸ್ಥಿತಿ ಇದೆ. ಸ್ಪಷ್ಟವಾಗಿ ಹೇಳುವುದಾದರೆ ಇದು ಭಾರತದಲ್ಲಿನ ಬಾಲಕಾರ್ಮಿಕರ ಸ್ಥಿತಿ.

ಅಂಕೆ-ಸಂಖ್ಯೆಯ ಪ್ರಕಾರ ಭಾರತದಲ್ಲೇ ಎಲ್ಲ ದೇಶಗಳಿಗಿಂತ ಹೆಚ್ಚು ಬಾಲಕಾರ್ಮಿಕರಿದ್ದಾರಂತೆ. ಭಾರತದ ಒಟ್ಟುತ್ಪಾದನೆಯ ಶೇ 20 ಕ್ಕಿಂತ ಹೆಚ್ಚು ಬಾಲಕಾರ್ಮಿಕರಿಂದ ಆಗುವುದಂತೆ.

ಈಗ ವಿಶ್ವ ವ್ಯಾಪಾರ ಒಪ್ಪಂದಗಳ ಹಿನ್ನೆಲೆಯಲ್ಲಿ ಇದು ಅಂತರ್ರಾಷ್ಟ್ರೀಯ ರಾಜಕೀಯದ ವಿಷಯವೂ ಆಗಿದೆ. ಅಮೆರಿಕಾ ಮತ್ತು ಯುರೋಪಿನ ದೇಶಗಳು ಭಾರತದಿಂದಾಗುವ ರಫ್ತಿನ ಮೇಲೆ ತಡೆಯೊಡ್ಡಲು ಈ ವಿಷಯವನ್ನು ದೊಡ್ಡದು ಮಾಡಿ ಬಳಸಿಕೊಳ್ಳಲು ಪ್ರಯತ್ನ ಮಾಡುತ್ತಿವೆ. ಇದರ ವಿರುದ್ಧ ಭಾರತ ಸರಕಾರ ಹೋರಾಡುತ್ತಿದೆ.

ಆದರೆ ಭಾರತ ಸರಕಾರ ಈ ಬಾಲಕಾರ್ಮಿಕರ ಸಮಸ್ಯೆ ಬಡತನ ನಿರುದ್ಯೋಗಿಗಳಿಂದಾಗಿ ಉಂಟಾಗಿರುವುದು ಎಂಬುದನ್ನು ಗಮನಿಸಬೇಕು. ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿಗೆ ಅನುಕೂಲವಾದಂತಹ ಆರ್ಥಿಕ ನೀತಿಗಳನ್ನು ಅಳವಡಿಸಿಕೊಳ್ಳುವ ಅವಶ್ಯಕತೆ ಇದೆ.

ಉದಾರೀಕರಣ ಆರ್ಥಿಕ ನೀತಿಯೂ ಸಾಮ್ರಾಜ್ಯಶಾಹಿ ಗಳಿಗೆ ಅನುಕೂಲ ಮತ್ತು ದೇಶದ ಜನರಿಗೆ ಅನಾನುಕೂಲ ತರುವ ನೀತಿಯೆಂಬುದು ಸ್ಪಷ್ಟ. ಇಂತಹ ನೀತಿಗಳಿಂದ ನಮ್ಮ ಮೊಗ್ಗುಗಳು ಅರಳದೇ ಕರಕಲಾಗುತ್ತವೆ ಅಲ್ಲವೇ?

ಗ್ರಾಮೀಣ ಬಡತನ ಹೆಚ್ಚುತ್ತಿದೆ ಎಂದು ಯೋಜನಾ ಆಯೋಗ

ಎಂಟನೇ ಪಂಚವಾರ್ಷಿಕ ಯೋಜನೆಯ ಮಧ್ಯಂತರ ಸಮೀಕ್ಷೆ ವರದಿಯ ಮಂಡನೆಯೇ ಆಗದಂತೆ ನಮ್ಮ ಅತ್ಯಂತ ಪ್ರಾಮಾಣಿಕ ಹಿಂದಿನ ಅರ್ಥ ಮಂತ್ರಿ ಡಾ. ಮನಮೋಹನ ಸಿಂಗ್‌ರು ನೋಡಿಕೊಂಡದ್ದು ನಿಮಗೆ ನೆನಪಿರಬಹುದಲ್ಲವೇ? ಉದಾರೀಕರಣದ ದುಷ್ಪರಿಣಾಮಗಳನ್ನು ಒಪ್ಪಿಕೊಳ್ಳುವ/ಎದುರಿಸುವ ಧೈರ್ಯವಿಲ್ಲದ್ದರಿಂದಲೇ ಇಂತಹ ನಡವಳಿಕೆ ಎಂಬುದು ಸ್ಪಷ್ಟ.

ಈಗ ಯೋಜನಾ ಆಯೋಗವೇ ಗ್ರಾಮೀಣ ಬಡತನ 1990-91ರ ನಂತರ ಹೆಚ್ಚಾಗಿದೆ. ಎಂದು ಹೇಳಿದೆ ಯೋಜನಾ ಆಯೋಗದ ಪ್ರಕಾರ 1995-94ರಲ್ಲಿ ಗ್ರಾಮೀಣ ಪ್ರದೇಶದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಜನರ ಪ್ರಮಾಣ ಶೇ 37.27 ರಷ್ಟಿತ್ತು. 1990-91 ರಲ್ಲಿ ಈ ಪ್ರಮಾಣ ಶೇ 35 ರಷ್ಟಿತ್ತು. ಅಂದರೆ 1990-91ರ ನಂತರ ಅಂದರೆ ನರಸಿಂಹರಾಯರ ಸರಕಾರ ಆಡಳಿತಕ್ಕೆ ಬಂದು ಉದಾರೀಕರಣದ ಆರ್ಥಿಕ ನೀತಿಯನ್ನು ಜಾರಿಗೆ ತಂದ ಮೇಲೆ ದೇಶದ ಗ್ರಾಮೀಣ ಪ್ರದೇಶದಲ್ಲಿ ಬಡತನ ಹೆಚ್ಚಾಗಿದೆ. ಬಡತನ ಹೆಚ್ಚಾಗಿದೆ ಎಂದರೆ ಬಡ ಜನರ ಸಂಖ್ಯೆ ಮತ್ತು ಅವರ ಬಡತನ ಎರಡೂ ಹೆಚ್ಚಾಗಿದೆ.

ರಾಜ್ಯವಾರು ಈ ಬೆಳವಣಿಗೆಯನ್ನು ಗಮನಿಸುವುದಾದರೆ ಪಶ್ಚಿಮ ಬಂಗಾಳ ಮತ್ತು ದಕ್ಷಿಣದ ನಾಲ್ಕು ರಾಜ್ಯಗಳನ್ನು ಹೊರತುಪಡಿಸಿದರೆ ಉಳಿದೆಲ್ಲ ರಾಜ್ಯಗಳಲ್ಲೂ ಬಡತನ ಹೆಚ್ಚಾಗುತ್ತಲೇ ಇದೆ.

ಅಂಕಿ ಸಂಖ್ಯೆಗಳ ಪ್ರಕಾರ 1987-88ರಲ್ಲಿ 23.19 ಕೋಟಿ ಜನ ಬಡತನ ರೇಖೆಗಿಂತ ಕೆಳಗಿದ್ದರೆ 1993-94 ರಲ್ಲಿ 24.40 ಕೋಟಿ ಜನ ಬಡತನ ರೇಖೆಗಿಂತ ಕೆಳಗಿದ್ದವು.

1973-74 ಮತ್ತು 1993-94ರ ಅವಧಿಯನ್ನು ಗಣನೆಗೆ ತೆಗೆದುಕೊಂಡರೆ ಬಡತನವನ್ನು ಅತ್ಯಂತ ಪರಿಣಾಮಕಾರಿಯಾಗಿ ಹಿಮ್ಮೆಟ್ಟಿಸಿದ ರಾಜ್ಯವೆಂದರೆ ಪ.ಬಂಗಾಳ. 1973-74ರಲ್ಲಿ ಶೇ78.16ರಷ್ಟು ಜನ ಬಡತನ ರೇಖೆಗಿಂತ ಕೆಳಗಿದ್ದರು. 1993-94ರಲ್ಲಿ ಈ ಪ್ರಮಾಣದ ಶೇ 40.80 ರಷ್ಟು ಇಳಿದಿತ್ತು.

ಎಡರಂಗ ಸರ್ಕಾರದ ನೀತಿ ಮತ್ತು ಉದಾರೀಕರಣದ ಆರ್ಥಿಕ ನೀತಿ ಇವೆರಡರಲ್ಲಿರುವ ವ್ಯತ್ಯಾಸವನ್ನು ಇದು ಬಹಳ ಸ್ಪಷ್ಟವಾಗಿ ಎತ್ತಿ ತೋರಿಸುತ್ತದೆ.

ಲಾಭದ ಮೇಲೆ ತೆರಿಗೆ ಹೇರಿದರೆ ಹೇಗೆ?

ಇದು ನಮ್ಮ ಬಂಡವಾಳಿಗರ ಪ್ರಶ್ನೆ. ಅಷ್ಟೇ ಅಲ್ಲ ನಮ್ಮ ದೇಶದ ಶೇರು ಮಾರುಕಟ್ಟೆಯಲ್ಲಿ ಇಳಿತವಿರುವುದಕ್ಕೂ ಮುಖ್ಯ ಕಾರಣ ಅದೇ ಅಂತೆ. ಇಲ್ಲಿ ಮುಖ್ಯ ಸಮಸ್ಯೆ ಏನೆಂದರೆ ಉದಾರೀಕರಣದ ಕಳೆದ ವರ್ಷಗಳಲ್ಲಿ ಹಲವು ಕಂಪನಿಗಳು ಲಾಭ ಮಾಡುತ್ತಿದ್ದರೂ ತೆರಿಗೆ ತೆರುತ್ತಿರಲಿಲ್ಲ. ಉದಾರೀಕರಣ ಅಂತಹ ಅವಕಾಶಗಳನ್ನು ಅವರಿಗೆ ನೀಡಿತ್ತು.

ಇದರಿಂದಾಗಿ ಇಂತಹ ಲಾಭದಲ್ಲಿ ನಡೆವ ಕಂಪನಿಗಳ ಮೇಲೆ ತೆರಿಗೆ ಹೇರಬೇಕೆಂಬ ಜನಾಭಿಪ್ರಾಯ ಮೂಡಿತ್ತಾದ್ದರಿಂದ ಹಿಂದಿನ ಬಜೆಟ್ಟಿನಲ್ಲಿ ಇಂತಹ ಕಂಪನಿಗಳ ಮೇಲೆ ಕನಿಷ್ಠ ಪರ್ಯಾಯ ತೆರಿಗೆ ಹೇರಲಾಯಿತು.

ಈ ತೆರಿಗೆಯನ್ನು ತಪ್ಪಿಸಿಕೊಳ್ಳುವತ್ತ ಶತಾಯಗತಾಯ ಪ್ರಯತ್ನ ಮಾಡುತ್ತಿರುವ ಬಂಡವಾಳಿಗರು ಆರ್ಥಿಕವಲ್ಲಿನ ಎಲ್ಲ ಕೆಟ್ಟ ಪರಿಣಾಮಗಳೂ ಈ ಕನಿಷ್ಠ ಪರ್ಯಾಯ ತೆರಿಗೆಯಿಂದಾಗಿ ಎನ್ನುತ್ತಿದ್ದಾರೆ. ಅವರ ಪ್ರಕಾರ ಶೇರು ಮಾರುಕಟ್ಟೆಯಲ್ಲಿ ಇಳಿತವಿರುವುದೂ ಅದೇ ಕಾರಣಕ್ಕಾಗಿ, ಆದ್ದರಿಂದ ಎಲ್ಲಾ ತೆರಿಗೆಗಳನ್ನೂ ತೆಗೆದುಹಾಕಿದರೆ ಒಳ್ಳೆಯದು. ಆಗ ದೇಶೀ ಮತ್ತು ವಿದೇಶೀ ಹೂಡಿಕೆದಾರರು ಹೂಡಿಕೆ ಮಾಡಲು ಮುಂದೆ ಬರುತ್ತಾರೆ. ಈ ಕನಿಷ್ಠ ಪರ್ಯಾಯ ತೆರಿಗೆಯನ್ನಂತೂ ತೆಗೆದುಹಾಕಲೇ ಬೇಕು.

ಬಂಡವಾಳಿಗರ ಕೂಗು ಒತ್ತಟ್ಟಿಗಿರಲಿ ನಮ್ಮ ಹಣಕಾಸು ಮಂತ್ರಿ ಪಿ.ಚಿದಂಬರಂ ಸಹ ಇಂತಹ ಮಾತನ್ನೇಆಡುತ್ತಿದ್ದಾರೆ. ಮುಂದಿನ ಬಜೆಟ್ಟಿನ ವೇಳೆಗೆ ಈ ತೆರಿಗೆಯ ಪುನರ್ ವಿಮರ್ಶೆಗೆ ಮಾಡುವ ಮಾತನ್ನು ಅವರು ಆಡಿದ್ದಾರೆ. ಆ ತೆರಿಗೆ ಹೂಡಿಕೆಗೆ ತಡೆ ಎಂಬರ್ಥ ಬರುವ ಮಾತನಾಡಿದ್ದಾರೆ. ಇದು ಉದಾರೀಕರಣ ಹೇಗಿದೆ.?

ಭಾರತ-ಬಾಂಗ್ಲಾ ದೇಶಗಳ ನಡುವೆ ಒಂದು ಚಾರಿತ್ರಿಕ ಒಪ್ಪಂದ

ಭಾರತ ಮತ್ತು ಬಾಂಗ್ಲಾ ದೇಶಗಳ ಜನತೆಯನ್ನು ಗಂಗಾ ನದಿ ನೀರಿನ ಹೆಸರಲ್ಲಿ ಒಡೆಯಲು ಪ್ರಯತ್ನಿಸುತ್ತಿದ್ದ ಎರಡೂ ದೇಶಗಳ ಕೋಮುವಾದಿ ಹಾಗೂ ಮೂಲಭೂತವಾದಿ ಶಕ್ತಿಗಳಿಗೆ ದೊಡ್ಡ ಹಿನ್ನಡೆಯಾಗಿದೆ. ಡಿಸೆಂಬರ್ 12ರಂದು ನವದೆಹಲಿಯಲ್ಲಿ ಫರಕ್ಕಾ ಬ್ಯಾರೇಜಿನಿಂದ ಗಂಗಾ ನದಿ ನೀರು ಪಾಲಿನ ಬಗ್ಗೆ ಭಾರತ-ಬಾಂಗ್ಲಾ ದೇಶ ಸಂಧಿಗೆ ಎರಡೂ ದೇಶಗಳ ಪ್ರಧಾನ ಮಂತ್ರಿಗಳು ಸಹಿ ಮಾಡಿದ್ದು ಈ ಸಂಧಿ ಭಾರತದ ಹಿತಾಸಕ್ತಿಗಳನ್ನು ರಕ್ಷಿಸಿದೆ ಹಾಗೂ ಬಾಂಗ್ಲಾ ದೇಶಕ್ಕೂ ನೆರವಾಗಿದೆ. ಇದಕ್ಕಿಂತಲೂ ಮಿಗಿಲಾಗಿ ಎರಡು ದೇಶಗಳ ನಡುವಿನ ಸಂಬಂಧಗಳನ್ನು ಸುಧಾರಿಸಲು ಬುನಾದಿ ಹಾಕಿದೆ. ಏಕೆಂದರೆ ಪರಸ್ಪರ ಸಂಬಂಧಗಳಲ್ಲಿ ಈ ನದಿ ನೀರಿನ ಪಾಲಿನ ಸಮಸ್ಯೆ ದೊಡ್ಡ ಮುಳ್ಳಾಗಿತ್ತು.

ಈ ವಿವಾದದಲ್ಲಿ ಭಾರತದ ಹಿತಾಸಕ್ತಿಯಿದ್ದದ್ದು ಕಲ್ಕತ್ತಾ ಬಂದರಿನಲ್ಲಿ ಸಂಚಾರ ಚಟುವಟಿಕೆಗಳನ್ನು ಕಾಯ್ದುಕೊಳ್ಳುವ ಬಗ್ಗೆ. ಇದಕ್ಕೆ ಫರಕ್ಕಾ ಅಣೆಕಟ್ಟಿನಿಂದ ಭಾಗೀರಥಿ-ಹೂಗ್ಲಿ ನದಿಯ ಮೂಲಕ ಬರುವ ನೀರಿನ ಪ್ರಮಾಣ 40000 ಕ್ಯೂಸೆಕ್‌ಗಳಿಗಿಂತ ಬಹಳ ಕಮ್ಮಿಯಿರಬಾರದು ಎಂದು ವಿಭಿನ್ನ ಪರಿಣಿತ ವರದಿಗಳು ಹೇಳಿವೆ. ಜೂನ್‌ನಿಂದ ಡಿಸೆಂಬರ್‌ರವರೆಗೆ ಇಷ್ಟು ನೀರಿನ ಹರಿವು ಇದ್ದೇ ಇರುತ್ತದೆ. ಆದರೆ ಸಮಸ್ಯೆಯಾಗುವುದು ಜನವರಿಯಿಂದ ಮೇ ತಿಂಗಳ ಅವಧಿಯಲ್ಲಿ, ಅದರಲ್ಲೂ ವಿಶೇಷವಾಗಿ ಮಾರ್ಚ್-ಏಪ್ರಿಲ್ ತಿಂಗಳಲ್ಲಿ. ಈ ಬಗ್ಗೆ 1977ರಲ್ಲಿ ಒಪ್ಪಂದವಾಗಿದ್ದರೂ ಕಳೆದ 20 ವರ್ಷಗಳಲ್ಲಿ ಈ ಅತೀ ಬಿಕ್ಕಟ್ಟಿನ ಅವಧಿಯಲ್ಲಿ ಕಲ್ಕತ್ತಾ ಬಂದರಿಗೆ ಇಷ್ಟು ನೀರಿನ ಹರಿವು ಬಂದಿಲ್ಲ. ಇದರ ಜತೆಗೆ ಹಲವು ಸಮಸ್ಯೆಗಳಿದ್ದವು. ಕಲ್ಕತ್ತಾ ಬಂದರು ಕೇಂದ್ರ ಸರಕಾರದ ಆಡಳಿತ ವ್ಯಾಪ್ತಿಗೆ ಒಳಪಟ್ಟಿದ್ದು ನೀರಿನ ಹರಿವು ಕಮ್ಮಿಯಾದಾಗ ಹೂಳೆತ್ತುವ ಕೆಲಸವನ್ನು ಬಹಳ ಚುರುಕಾಗಿ ಮಾಡಬೇಕು. ಆದರೆ ಕಳೆದ ಎರಡು ದಶಕಗಳಲ್ಲಿ ಮೂರನೇ ಒಂದರಷ್ಟು ಈ ಕೆಲಸ ಆಗಿಲ್ಲ. ನದಿ ನೀರಿನ ಪಾತ್ರದ ಮೇಲೆ ಹತೋಟಿಯಿಡುವ ಏಳು ಯೋಜನೆಗಳನ್ನು ರೂಪಿಸಲಾಗಿತ್ತು-1981ರಲ್ಲೇ. ಅವುಗಳಲ್ಲಿ ಇದುವರೆಗೆ ಒಂದನ್ನು ಮಾತ್ರ ಕೈಗೆತ್ತಿಕೊಳ್ಳಲಾಗಿದೆ. ಫರಕ್ಕಾ ಅಣೆಕಟ್ಟಿನ ನೀರಿನ ಸಂಗ್ರಹವನ್ನು ಹೆಚ್ಚಿಸಲು ಇತರ ಮೂಲಗಳ ಮೂಲಕ ನೀರು ಪೂರೈಕೆಯನ್ನು ಹೆಚ್ಚಿಸಬೇಕು ಎಂಬ ಅಂಶವೂ 1977ರ ಒಪ್ಪಂದಗಳಲ್ಲಿ ಇತ್ತು. ಅದೂ ಕೈಗೂಡಲಿಲ್ಲ.

ಭಾರತದಲ್ಲಿ ಇತ್ತೀಚೆಗೆ ಸಂಯುಕ್ತ ರಂಗ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಹಾಗೂ ಬಾಂಗ್ಲಾ ದೇಶದಲ್ಲಿ ಪ್ರಜಾಪ್ರಭುತ್ವವಾದೀ ಶಕ್ತಿಗಳು ಸರಕಾರ ರಚಿಸಿದ ಮೇಲೆ ಈ ಎಲ್ಲಾ ಪ್ರಶ್ನೆಗಳ ಬಗ್ಗೆ ಒಂದು ಸಕಾರಾತ್ಮಕ ನಿಲುವು ತಳೆಯುವ ಪ್ರಕ್ರಿಯೆ ಆರಂಭವಾಯಿತು. ಮೊತ್ತಮೊದಲ ಬಾರಿಗೆ ಪಶ್ಚಿಮ ಬಂಗಾಳ ಸರಕಾರದ ಅಭಿಪ್ರಾಯಗಳನ್ನು ಗಂಭೀರವಾಗಿ ಪರಿಗಣಿಸುವ ಪ್ರಯತ್ನ ಆರಂಭವಾಯಿತು. 1996ರ ಈ ಸಂಧಿಗೆ ಸಹಿ ಬಿದ್ದದ್ದು ಈ ಹಿನ್ನೆಲೆಯಲ್ಲಿ. ಈ ಸಂಧಿಯ ಒಂದು ಮುಖ್ಯ ಅಂಶವೆಂದರೆ ಫರಕ್ಕಾ ಅಣೆಕಟ್ಟಿನ ನೀರನ್ನು ಯಾವ ಅನುಪಾತದಲ್ಲಿ ಎರಡು ದೇಶಗಳು ಬಳಸಬಹುದು ಎಂದು ನಿರ್ದಿಷ್ಟವಾಗಿ ಇದರಲ್ಲಿ ತಿಳಿಸಲಾಗಿದೆ. ಅದು ಹೀಗಿದೆ -

1. ಫರಕ್ಕಾ ಅಣೆಕಟ್ಟಿನಲ್ಲಿ ನೀರಿನ ಹರಿವು 70000 ಕ್ಯೂಸೆಕ್ಸ್‌ಗಿಂತ ಕಮ್ಮಿಯಿದ್ದಾಗ ಎರಡೂ ದೇಶಗಳು ಸಮವಾಗಿ ನೀರನ್ನು ಹಂಚಿಕೊಳ್ಳಬೇಕು.
2. 70000-750000 ಕ್ಯೂಸೆಕ್ಸ್ ಇದ್ದಾಗ ಬಾಂಗ್ಲಾ ದೇಶದ ಪಾಲು 350000 ಕ್ಯೂಸೆಕ್ಸ್. ಉಳಿದದ್ದ ಭಾರತದ ಪಾಲು.
3. 75000ಕ್ಕಿಂತ ಹೆಚ್ಚಿದ್ದಾಗ ಭಾರತದ ಪಾಲು 40000 ಕ್ಯೂಸೆಕ್, ಉಳಿದದ್ದು ಬಾಂಗ್ಲಾ ದೇಶದ ಪಾಲು.

ಮಾರ್ಚ್ 1ರಿಂದ ಮೇ 10ರವರೆಗೆ ಅವಧಿಯನ್ನು 10 ದಿನಗಳ 7 ಅವಧಿಗಳಾಗಿ ವಿಂಗಡಿಸಿದ್ದು ಇಂತಹ ಪ್ರತಿ ಮೂರು ಅವಧಿಗಳಲ್ಲಿ ಪರ್ಯಾಯವಾಗಿ ಭಾರತ ಹಾಗೂ ಬಾಂಗ್ಲಾ ದೇಶಗಳಿಗೆ ಕನಿಷ್ಠ 35000 ಕ್ಯೂಸೆಕ್ ನೀರು ಸಿಗುವಂತಾಗುತ್ತದೆ.

ಅನಿಶ್ಚಿತತೆಯನ್ನು ತೊಡೆದು ಹಾಕಲು ಇದನ್ನು 30 ವರ್ಷಗಳ ದೀರ್ಘ ಕಾಲದ ಸಂಧಿಯನ್ನಾಗಿ ಮಾಡಲಾಗಿದೆ. ಆದರೆ ಈ ನೀರಿನ ಪಾಲಿನ ಸೂತ್ರದ ಪರಿಣಾಮವನ್ನು ಈ ನಡುವೆ ಕಾಲಕಾಲಕ್ಕೆ ವಿಮರ್ಶೆ ಮಾಡಲು ಅವಕಾಶ ಒದಗಿಸಲಾಗಿದೆ.


ಇದರ ಜೊತೆಗೆ ಕೇಂದ್ರ ಸರಕಾರ ಕಲ್ಕತ್ತಾ ಬಂದರಿನಲ್ಲಿ ಹೂಳೆತ್ತುವ ಕೆಲಸವನ್ನು ತೀವ್ರಗೊಳಿಸಲು, ಅದಕ್ಕೆ ಹಣ ಒದಗಿಸುವ ಭರವಸೆಯನ್ನು ಪ್ರಧಾನಮಂತ್ರಿಗಳು ಪಶ್ಚಿಮ ಬಂಗಾಳ ಸರಕಾರಕ್ಕೆ ನೀಡಿದ್ದಾರೆ. ಅಲ್ಲದೆ ಇನ್ನೂ ಆರು ನದಿಗಳ ಪಾತ್ರವನ್ನು ಹತೋಟಿಯಲ್ಲಿಡುವ ಕೆಲಸವನ್ನು ಒಂಭತ್ತನೇ ಯೋಜನೆಯಲ್ಲಿ ಕೈಗೆತ್ತಿಕೊಳ್ಳಲಾಗುವುದು ಎಂದು ಕೇಂದ್ರ ಸರಕಾರ ಭರವಸೆ ನೀಡಿದೆ. ಫರಕ್ಕಾ ಅಣೆಕಟ್ಟಿನಲ್ಲಿ ನೀರಿನ ಪ್ರಮಾಣವನ್ನು 12000 ಕ್ಯೂಸೆಕ್‌ಗಳಷ್ಟು ಹೆಚ್ಚಿಸುವ ಒಂದು ಯೋಜನೆಯನ್ನು ಕೂಡಾ ಒಂಭತ್ತನೇ ಯೋಜನೆಯಲ್ಲಿ ಕೈಗೆತ್ತಿಕೊಳ್ಳುವುದಾಗಿ ಬರವಣಿಗೆಯಲ್ಲಿ ವಚನ ನೀಡಲಾಗಿದೆ.

ಅತ್ತ ಬಾಂಗ್ಲಾ ದೇಶದಲ್ಲೂ ಭೂ ಜಲ ಸಂಪನ್ಮೂಲದ ಬಳಕೆ ಹಾಗೂ ಹೆಚ್ಚಳಕ್ಕೆ ಇಂತಹುದೇ ಕ್ರಮಗಳನ್ನು ತೆಗೆದುಕೊಳ್ಳಲು ಪ್ರಯತ್ನ ನಡೆಯುತ್ತಿದೆ. ಬಾಂಗ್ಲಾ ದೇಶದ ಹೊಸ ಸರಕಾರ ಪ್ರಮುಖ ನದಿಗಳನ್ನು ಜೋಡಿಸುವ ಹೊಸ ಕಾಲುವೆಗಳನ್ನು ಅಣೆಕಟ್ಟುಗಳನ್ನು ಕಟ್ಟುವ ಬಗ್ಗೆಯೂ ಈಗಾಗಲೇ ಸಕಾರಾತ್ಮಕ ಹೆಜ್ಜೆಯಿಟ್ಟಿದೆ.

ಹೀಗೆ ಈ ನದಿ ನೀರಿನ ಪಾಲಿನ ಸಂಧಿ, ಭಾರತ ಮತ್ತು ಬಾಂಗ್ಲಾ ದೇಶಗಳ ಹಿತಾಸಕ್ತಿಗಳನ್ನು ಮೊದಲಿಗಿಂತ ಉತ್ತಮ ರೀತಿಯಲ್ಲಿ ಕಾಪಾಡಿದೆಯಷ್ಟೇ ಅಲ್ಲ, ಮೇಲೆ ಹೇಳಿದ ಹೊಸ ಪ್ರಯೋಜನಗಳೂ ಈ ಸಂಧಿಯ ನಿಮಿತ್ತವಾಗಿ ಎರಡೂ ದೇಶಗಳ ಜನರಿಗೆ ದೊರೆಯಲಿದೆ.

ಹೀಗೆ ಇದು ಚಾರಿತ್ರಿಕ ಸಂಧಿ ಎಂದು ಪಶ್ಚಿಮ ಬಂಗಾಳದ ಎಡರಂಗಸರಕಾರದ ಹಣಕಾಸು ಮಂತ್ರಿ ಅಸೀಮ್ ದಾಸ್‌ಗುಪ್ತಾ ಹೇಳಿದ್ದಾರೆ. ಅಷ್ಟೇ ಅಲ್ಲ, ಈ ಸಂಧಿಯಿಂದಾಗಿ ನಮ್ಮೆರಡು ದೇಶಗಳ ಸಂಬಂಧಗಳು ಇತರ ವಲಯಗಳಲ್ಲೂ - ಮುಖ್ಯವಾಗಿ ಕೈಗಾರಿಕೆ, ವ್ಯಾಪಾರ, ಶಿಕ್ಷಣ ಹಾಗೂ ಸಂಸ್ಕೃತಿಯ ವಲಯಗಳಲ್ಲಿ - ಸುಧಾರಿಸಲು ಸಾಧ್ಯತೆ ಈಗ ತೆರೆದಿದೆ ಎಂದು ಅವರು ಹೇಳಿದ್ದಾರೆ. ಇದರ ಫಲವಾಗಿ ಈ ಇಡೀ ಪ್ರದೇಶ ಸ್ವಾವಲಂಬೀ ಹಾಗೂ ಬಲಿಷ್ಠ ಆರ್ಥಿಕ ಕೂಟವಾಗಿ ಬೆಳೆದು ಪಾಶ್ಚಿಮಾತ್ಯ ಶ್ರೀಮಂತ ದೇಶಗಳಿಗೆ ಸಡ್ಡು ಹೊಡೆದು ನಿಲ್ಲಲು ಸಾಧ್ಯವಾಗುತ್ತದೆ. ಇಂತಹ ಚಾರಿತ್ರಿಕ ಅವಕಾಶವನ್ನು ಇದು ತೆರೆದಿದೆ ಎಂದು ಅವರು ಹೇಳುತ್ತಾರೆ.

ಸಹಜವಾಗಿಯೇ ಭಾರತದ ಮತ್ತು ಬಾಂಗ್ಲಾದೇಶದ ಹೆಚ್ಚಿನ ರಾಜಕೀಯಪಕ್ಷಗಳು ಇದನ್ನು ಸ್ವಾಗತಿಸಿದ್ದರೂ ಭಾರತದಲ್ಲಿ ಬಿಜೆಪಿ ಮತ್ತು ಬಾಂಗ್ಲಾ ದೇಶದಲ್ಲಿ ಮುಸ್ಲಿಂ ಮೂಲಭೂತವಾದಿ ಶಕ್ತಿಗಳು ಮಾತ್ರ ಇದರ ಬಗ್ಗೆ ಅಪಲಾಪ ಎತ್ತಿವೆ. ಈಗಲೂ ಈ ಎರಡೂ ದೇಶಗಳ ಜನಗಳ ನಡುವೆ ಕಂದರ ಹೆಚ್ಚಿಸುವುದು ಅವರ ಉದ್ದೇಶ ಎಂಬುದು ಸ್ಪಷ್ಟ. ಇದನ್ನು ಎರಡೂ ದೇಶಗಳ ಜನಗಳು ಗಮನಕ್ಕೆ ತರಬೇಕಾಗಿದೆ. □



ಉಗ್ರಗಾಮಿಗಳ ಕೈಯಿಂದ ಪಾರಾದ ಸಿಪಿಐ(ಎಂ) ಶಾಸಕ

ಅಖಿಲ ತ್ರಿಪುರಾ ವ್ಯಾಘ್ರ ಪಡ(ATTF) ಅಪಹರಿಸಿಕೊಂಡು ಹೋಗಿದ್ದ ತ್ರಿಪುರಾದ ಸಿಪಿಐ(ಎಂ) ಶಾಸಕ ಕಾಂ॥ ಪ್ರಣವ್ ದೇವವರ್ಮ ಮತ್ತು ಅವರ ಅಂಗರಕ್ಷಕ ಅಮಲ ಚಕ್ರವರ್ತಿ ದುರುಳರ ಕೈಯಿಂದ ತಪ್ಪಿಸಿಕೊಂಡು ಸುರಕ್ಷಿತವಾಗಿ ಮರಳಿದ್ದಾರೆ.

1996 ಜನವರಿ 19 ರಂದು ಇವರನ್ನು ಉಗ್ರಗಾಮಿಗಳು ಅಪಹರಿಸಿ ಬಾಂಗ್ಲಾದೇಶದ ಅಡಗುತಾಣಕ್ಕೆ ಕರೆದುಕೊಂಡು ಹೋಗಿದ್ದರು.

ನಕ್ಸಲೀಯರಿಂದ ಹತ್ಯೆ

ಆಂಧ್ರಪ್ರದೇಶದ ಅಚ್ಚಂಪೇಟೆ ಮಂಡಲದ ಇನ್ನೂಲು ಗ್ರಾಮದಲ್ಲಿ ಪಿಡಬ್ಲ್ಯುಜಿ ನಕ್ಸಲಿಯರು ಭಾನುವಾರ ರಾತ್ರಿ (ಡಿ.22) ಸಿಪಿಐ(ಎಂ) ಕಾರ್ಯಕರ್ತರ ಮೇಲೆ ಹಲ್ಲೆ ಮಾಡಿ ಸುಧಾಕರ ರೆಡ್ಡಿ ಎಂಬ ಸಂಗಾತಿಯನ್ನು ಕೊಂದು ಹಾಕಿದರು.

ಗ್ರಾಮಕ್ಕೆ ನುಗ್ಗಿದ ನಕ್ಸಲೀಯರು ಸುಧಾಕರ ರೆಡ್ಡಿ, ಪರ್ವತಲು ಮತ್ತು ಇತರ ಇಬ್ಬರನ್ನು ಅಪಹರಿಸಿಕೊಂಡು ಹೋಗಿ ಹೊಡೆದರು. ಆಸ್ಪತ್ರೆಗೆ ಸಾಗಿಸುತ್ತಿರುವಾಗ ಸುಧಾಕರ ರೆಡ್ಡಿ ಮಾರ್ಗ ಮಧ್ಯದಲ್ಲೆ ಮೃತಪಟ್ಟರು.

ಈ ನಾಲ್ವರನ್ನು ಅಪಹರಿಸಿದ ದುಷ್ಕರ್ಮಿಗಳೇ ಸಿಪಿಐ(ಎಂ) ಅಚ್ಚಂಪೇಟೆ ವಿಭಾಗೀಯ ಸಮಿತಿ ಕಾರ್ಯದರ್ಶಿ ರಾಮಚಂದ್ರ ರೆಡ್ಡಿಯವರ ಮನೆಯನ್ನು ಸ್ಫೋಟಿಸಿದರು.

ಬಿಹಾರ ಬಂದ್‌ಗೆ ಸ್ಪಂದಿಸಿದ ಜನರು

ನಾಲ್ಕು ಎಡಪಕ್ಷಗಳು ನೀಡಿದ ಕರೆಯ ಮೇರೆಗೆ ಡಿಸೆಂಬರ್ 18 ರಂದು ಬಿಹಾರ ಬಂದ್ ಯಶಸ್ವಿಯಾಗಿ ನಡೆಯಿತು. ಕೆಲವು ಚಿಕ್ಕಪುಟ್ಟ ಘಟನೆಗಳನ್ನು ಬಿಟ್ಟರೆ ಉಳಿದಂತೆ ಬಂದ್ ಪೂರ್ಣ ಶಾಂತಿಯುತವಾಗಿತ್ತು.

ಹವಾಲಾ ಮತ್ತು ಮೇವು ಹಗರಣ, ರಾಜ್ಯದಲ್ಲಿ ಹೆಚ್ಚುತ್ತಿರುವ ಅಪರಾಧಗಳು, ಮಹಿಳೆಯರ ವಿರುದ್ಧದ ದೌರ್ಜನ್ಯಗಳು, ಬೆಲೆಯೇರಿಕೆ ಮತ್ತು ಭೂಸುಧಾರಣೆ ಅನುಷ್ಠಾನಗೊಳಿಸದಿರುವತ್ತ ಗಮನ ಸೆಳೆಯಲು ಬಂದ್‌ಗೆ ಕರೆ ಕೊಡಲಾಗಿತ್ತು.

ನವೆಂಬರ್‌ನಲ್ಲಿ ಪಾಟ್ನಾದಲ್ಲಿ ನಡೆದ ಬೃಹತ್ ರ್‍ಯಾಲಿಯ ನಿರ್ಧಾರದ ಮೇರೆಗೆ ಸಿಪಿಐ(ಎಂ), ಸಿಪಿಐ, ಆರ್.ಎಸ್.ಪಿ. ಮತ್ತು ಫಾರ್ವರ್ಡ್‌ಬ್ಲಾಕ್ ಪಕ್ಷಗಳು ಬಿಹಾರ ಬಂದ್‌ಗೆ ಕರೆ ಕೊಟ್ಟಿದ್ದವು. ಮುಖ್ಯವಾಗಿ ಭ್ರಷ್ಟಚಾರದ ವಿರುದ್ಧ ಹೋರಾಡುವುದು ಈ ಆಂದೋಲನದ ಗುರಿಯಾಗಿದೆ.

ಬಂದ್‌ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು ಎಂದು 'ದಿ ಹಿಂದೂ' ವರದಿ ಮಾಡಿದೆ. ಸಾಮಾನ್ಯ ಜನಜೀವನದ ಮೇಲೆ ಬಂದ್ ಪರಿಣಾಮ ಬೀರಿತು. ರೈಲು, ವಾಹನಗಳ ಸಂಚಾರ ಅಸ್ತವ್ಯಸ್ತಗೊಂಡಿತು. ಸರಕಾರಿ ಕಚೇರಿಗಳಲ್ಲಿ ಹಾಜರಾತಿ ಕಡಿಮೆಯಿತ್ತು. ಶಾಲೆ ಕಾಲೇಜುಗಳು ಮುಚ್ಚಿದ್ದವು.

ಲಾಠಿ ಪ್ರಹಾರ, ಬಂಧನ

ಬಿಹಾರದಲ್ಲಿ ಆಡಳಿತದಲ್ಲಿರುವುದು ಎಡಪಕ್ಷಗಳ ಮಿತ್ರ ಪಕ್ಷವಾದ ಜನತಾ ದಳವಾದರೂ ಲಾಲೂ ಪ್ರಸಾದ್ ನೇತೃತ್ವದ ಸರಕಾರ ಹಗರಣಗಳಲ್ಲಿ ಒಳಗೊಂಡಿರುವುದು ಹಾಗೂ ಅದು ಜನವಿರೋಧಿ ನೀತಿಗಳನ್ನು ಅನುಸರಿಸುವುದನ್ನು ಸುಮ್ಮನೆ ನೋಡುತ್ತಾ ಕುಳಿತಿರುವುದು ನೈತಿಕವಾಗಿ ಸರಿಯಲ್ಲ. ಈ ಹಿನ್ನಲೆಯಲ್ಲಿ ಎಡಪಕ್ಷಗಳು ರಾಜಿರಹಿತ ಆಂದೋಲನವನ್ನೇ ಆರಂಭಿಸಿವೆ.

ಎಡಪಕ್ಷಗಳ ಹೋರಾಟ ಹಾಗೂ ಅದಕ್ಕೆ ಜನರಿಂದ ಸಿಗುತ್ತಿರುವ ಪ್ರತಿಕ್ರಿಯೆಯಿಂದ ಲಾಲೂ ಸರಕಾರ ಧೃತಿಗೆಟ್ಟಂತಿದೆ. ಬಂದ್ ಬೆಂಬಲಿಗರ ಮೇಲೆ ಪೋಲೀಸ್ ಬಲವನ್ನು ಅದು ಪ್ರಯೋಗಿಸಿತು.

ಡಾಕಾ ಬಂಗ್ಲೆ ಕ್ರಾಸಿಂಗ್ ಮತ್ತು ಪಾಟ್ನಾದ ರೈಲ್ವೇ ಸ್ಟೇಷನ್ ಕ್ರಾಸಿಂಗ್ ಬಳಿ ಪೋಲೀಸರು ಎಡಪಕ್ಷಗಳ ಕಾರ್ಯಕರ್ತರ ಮೇಲೆ ಲಾಠಿ ಪ್ರಹಾರ ಮಾಡಿದರು. ಇದರಲ್ಲಿ ಅನೇಕ ಕಾರ್ಯಕರ್ತರು ಗಾಯಗೊಂಡರು.

ರಾಜ್ಯಾದ್ಯಂತ ಬಂದ್ ಬೆಂಬಲಿಗ ಪಕ್ಷಗಳ ಸಾವಿರಾರು ಕಾರ್ಯಕರ್ತರನ್ನು ಬಂಧಿಸಲಾಯಿತು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಗಣೇಶ ಶಂಕರ ವಿದ್ಯಾರ್ಥಿ, ಸಿಪಿಐ ರಾಜ್ಯ ಕಾರ್ಯದರ್ಶಿ ಸೂರಜ್ ಪ್ರಸಾದ್ ಮತ್ತು ಸಮಾಜವಾದಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಹಾಗೂ ಸಂಸತ್ ಸದಸ್ಯ ರಾಜೇಶ್ ರಂಜನ್ ಆಲಿಯಾಸ್ ಪಪ್ಪು ಯಾದವ್ ಬಂಧಿತರಲ್ಲಿ ಪ್ರಮುಖರು. ಬಂದ್‌ಗೆ ಸಮಾಜವಾದಿ ಪಕ್ಷವಲ್ಲದೆ ಕಾಂಗ್ರೆಸ್ ಕೂಡ ಬೆಂಬಲ ನೀಡಿತ್ತು.

ಜೈಲಿನಲ್ಲೇ ಸಭೆ

ಖಿಗಲ್ ಸೆರೆಮನೆಯಲ್ಲಿ ಇಡಲಾಗಿದ್ದ ಬಂಧಿತ ಮುಖಂಡರು ಅಲ್ಲೇ ಸಭೆ ನಡೆಸಿದರು. ಹೋರಾಟದ ಮುಂದಿನ ರೂಪರೇಷೆಗಳನ್ನು ಚರ್ಚಿಸಿದರು.

ಫೆಬ್ರವರಿಯಲ್ಲಿ ಜಿಲ್ಲಾಧಿಕಾರಿ ಮತ್ತು ಬ್ಲಾಕ್ ಕಚೇರಿಗಳಿಗೆ ಮುತ್ತಿಗೆ ಹಾಕಲು ಈ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಯಿತು.

ಬಿಹಾರ ಬಂದ್ ವಿಚಾರ ರಾಜ್ಯ ವಿಧಾನಸಭೆಯಲ್ಲಿಯೂ ಪ್ರತಿಧ್ವನಿಸಿತು. ತಮ್ಮ ಬೇಡಿಕೆಗಳ ಬಗ್ಗೆ ಗಮನ ಸೆಳೆಯಲು ಯತ್ನಿಸಿದ ಎಡಪಕ್ಷಗಳ ಶಾಸಕರನ್ನು ಎತ್ತಿಹೊರಗೆ ಹಾಕಲಾಯಿತು.

ಮತ್ತೆ ಶಿವಸೈನಿಕರ ಗೂಂಡಾಗಿರಿ

ಮಹಾರಾಷ್ಟ್ರದ ಆಳುವ ಮೈತ್ರಿಕೂಟದ ಪ್ರಮುಖ ಅಂಗಪಕ್ಷವಾದ ಶಿವಸೇನೆ ಮತ್ತೊಮ್ಮೆಗೂಂಡಾಗಿರಿಗೆ ಇಳಿದಿದೆ. ತಾನು ಫ್ಯಾಸಿಸ್ಟ್ ಪಕ್ಷವೇ ಹೌದು ಎನ್ನುವುದನ್ನು ಅದು ಇನ್ನೊಮ್ಮೆ ಸಾಬೀತು ಪಡಿಸಿದೆ.

ಶಿವಸೇನೆ ಮುಖ್ಯಸ್ಥ ಬಾಳಾಠಾಕ್ರೆಯನ್ನು ಟೀಕಿಸಿದ ಒಬ್ಬ ವ್ಯಕ್ತಿಹಾಗೂ ಅವರ ಹೇಳಿಕೆಯನ್ನು ಪ್ರಕಟಿಸಿದ ಪತ್ರಿಕೆಗಳ ಮೇಲೆ ಶಿವಸೇನೆ ಕಾರ್ಯಕರ್ತರು ಹಲ್ಲೆನಡೆಸಿದ್ದಾರೆ.

ಬಾಳಠಾಕ್ರೆಯ ನಡವಳಿಕೆ ಸರಿಯಲ್ಲ ಎಂದು ಮುಂಬಯಿ ಮಹಾನಗರದ ಉಚ್ಚಾಟಿತ ಉಪ ಕಮಿಶನರ್ ಜಿ. ಆರ್.ಖೈರ್‌ನಾರ್ ಹೇಳಿದ್ದೇ ಶಿವಸೇನೆಯವರು ಇಷ್ಟೊಂದು ರಾದ್ಧಾಂತ ಎಬ್ಬಿಸಲು ಕಾರಣವಾಗಿದೆ.

ಈ ರೀತಿ ಟೀಕೆ ಮಾಡಿದ್ದಕ್ಕಾಗಿ ಖೈರಾನಾರ್‌ರ ಮನೆ ಮೇಲೆ ಮತ್ತು ಅವರ ಹೇಳಿಕೆ ಯನ್ನು ಪ್ರಕಟಿಸಿದ 'ಮಹಾನಗರ' ಮತ್ತು 'ಅಪ್ನಾ ಮಹಾನಗರ್'(ಮರಾಠಿ) ಪತ್ರಿಕೆಗಳ ಕಾರ್ಯಾಲಯಗಳು, ಅವುಗಳ ಸಂಪಾದಕರು, ಪತ್ರಕರ್ತರು ಮತ್ತು 250 ಸಿಬ್ಬಂದಿ ಮೇಲೆ ಶಿವಸೈನಿಕರೆಂಬ ಗೂಂಡಾಗಳು ಹಲ್ಲೆಮಾಡಿದರು. ಶಿವಸೇನೆಯ ಶಾಸಕರು ಮತ್ತು ಅನೇಕ ಮಹಿಳಾ ಕಾರ್ಯಕರ್ತರು ಕೂಡಾ ಗೂಂಡಾಗಿರಿಯಲ್ಲಿ ತೊಡಗಿದ್ದು ಇನ್ನಷ್ಟು ಗಂಭೀರ ವಿಷಯವಾಗಿದೆ.

'ಮಹಾನಗರ' ಪತ್ರಿಕೆ ಕಾರ್ಯಾಲಯಕ್ಕೆ ನುಗ್ಗಿದ ದುಷ್ಕರ್ಮಿಗಳು ದಾಂದಲೆ ನಡೆಸಿ ಸಂಪಾದಕ ನಿಶಿಕಾಂತ ಭಲೆರಾವ್ ಅವರ ಮುಖಕ್ಕೆ ಡಾಂಬರು ಬಳಿದರು. ಈ ಪೈಶಾಚಿಕ ಕೃತ್ಯದಲ್ಲಿ ಹಲವು ಮಹಿಳೆಯರೂ ಪಾಲ್ಗೊಂಡಿದ್ದರು. ಪತ್ರಿಕೆಗಳ ಮೇಲೆ ದಾಳಿ ಮಾಡಿದ್ದಲ್ಲದೆ ಅವುಗಳ ಮಾರಾಟವನ್ನು ತಡೆಯಲೂ ಶಿವಸೇನೆಯವರು ಪ್ರಯತ್ನಿಸಿದರು.

ಖೈರನಾರ್ ಮನೆ ಮತ್ತು ಪತ್ರಿಕೆಗಳ ಮೇಲೆ ನಡೆದ ಈ ಹಲ್ಲೆಗೆ ವ್ಯಾಪಕ ಪ್ರತಿಭಟನೆ ವ್ಯಕ್ತವಾಗಿದೆ. ರಾಜ್ಯ ಸಭೆಯಲ್ಲಿಕೂಡ ಪ್ರತಿಧ್ವನಿ ಗೊಂಡಿವೆ.

ಠಾಕ್ರೆ ಬಂಧನಕ್ಕೆ ಆಗ್ರಹ

ರಾಜ್ಯಸಭೆಯಲ್ಲಿ ವಿಷಯವನ್ನು ಪ್ರಸ್ತಾಪಿಸಿದ ಜನತಾದಳದ ವಾಸಿವತ್ ಅಹಮದ್ ಪತ್ರಿಕಾ ಸ್ವಾತಂತ್ರ್ಯದ ಮೇಲೆ ಹಲ್ಲೆ ಎಸಗಿರುವುದಕ್ಕಾಗಿ ಠಾಕ್ರೆಯನ್ನು ಬಂಧಿಸಬೇಕು, ಅವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು ಎಂದು ಒತ್ತಾಯಿಸಿದರು. ಎಡಪಕ್ಷಗಳ ಅನೇಕ ಸದಸ್ಯರು ಕೂಡ ಶಿವಸೇನೆಯ ದುಷ್ಕೃತ್ಯವನ್ನು ಕಟುವಾಗಿ ಖಂಡಿಸಿದರು.

ಪತ್ರಿಕೆಗಳ ಮೇಲೆ ನಡೆದ ಹಿಂಸಾಚಾರಕ್ಕೆ ಅಖಿಲ ಭಾರತ ವೃತ್ತ ಪತ್ರಿಕೆಗಳ ಸಂಪಾದಕರ ಸಮ್ಮೇಳನ, ಬಾಂಬೆ ಪತ್ರಕರ್ತರ ಸಂಘ(ಬಿಯುಜೆ) ಮತ್ತುಪತ್ರಿಕಾ ಮಂಡಳಿ ಮೊದಲಾದ ಸಂಘಸಂಸ್ಥೆಗಳು ತೀವ್ರ ಕಳವಳ ವ್ಯಕ್ತಪಡಿಸಿವೆ.

'ಇದು ಪತ್ರಿಕಾ ಮಾಧ್ಯಮ ಮತ್ತು ಅದರ ಸ್ವಾತಂತ್ರ್ಯದ ಮೇಲಿನ ನಗ್ನ ಹಾಗೂ ಬರ್ಬರ ಆಕ್ರಮಣವಾಗಿದೆ. ಇಂಥ ಘಟನೆಗಳ ಬಗ್ಗೆ ಕಣ್ಣುಮುಚ್ಚಿ ಕೂತಿರಲು ಸಾಧ್ಯವಿಲ್ಲ' ಎಂದು ಪತ್ರಿಕಾ ಮಂಡಳಿ ಹೇಳಿದೆ.

ಸ್ವತಃ ತಾನು ಆಡಳಿತದಲ್ಲಿ ಭಾಗಿಯಾಗಿದ್ದರೂ ಕಾನೂನಿನ ಆಡಳಿತ ದಲ್ಲಿ ತನಗೆ ನಂಬಿಕೆಯಿಲ್ಲ ಎನ್ನುವುದನ್ನು ಶಿವಸೇನೆ ಇನ್ನೊಮ್ಮೆ ತೋರಿಸಿಕೊಟ್ಟಿದೆ ಎಂದು ಬಿಯುಜೆ ಹೇಳಿದೆ.

ಮಹಾರಾಷ್ಟ್ರದ ಬಿಜೆಪಿ ಮಂತ್ರಿಯೊಬ್ಬರು ಈಚೆಗೆ ಪ್ರತಿಪಕ್ಷದ ಶಾಸಕರೊಬ್ಬರ ಮೇಲೆ ಹಲ್ಲೆ ಮಾಡಿದ್ದರು. ಈ ಎಲ್ಲಾ ಪ್ರಕರಣಗಳು ಶಿವಸೇನೆ-ಬಿಜೆಪಿ ಮೈತ್ರಿಕೂಟದ ನೈತಿಕ ದಿವಾಳಿಕೋರತನವನ್ನು ತೋರಿಸುತ್ತದೆ.

ಲೈಂಗಿಕ ಹಗರಣದಲ್ಲಿ ಆರೋಪಿಗೆ ಸಿಗದ ಜಾಮೀನು

ಅದ್ಮಾರ್ ಲೈಂಗಿಕ ಹಗರಣ ಎಂದು ಕುಖ್ಯಾತವಾಗಿರುವ ಹಗರಣದ ಪ್ರಮುಖ ಆರೋಪಿ ಬಿಜೆಪಿ ಕಾರ್ಯಕರ್ತ ಶಾಲಿನಿ ಶರ್ಮಾಗೆ ರಾಜಸ್ತಾನ ಹೈಕೋರ್ಟ್ ಜಾಮೀನು ನಿರಾಕರಿಸಿದೆ. ನ್ಯಾಯಮೂರ್ತಿ ಎನ್.ಸಿ.ಕೋಟಾರ್ ಆರೋಪಿಯ ಅರ್ಜಿಯನ್ನು ತಳ್ಳಿಹಾಕಿದ್ದಾರೆ.

'ಇಡೀ ದೇಶದ ಮಾತೃತ್ವಕ್ಕೆ ಅಪಮಾನ ಎಸಗಿರುವಂಥ ಪ್ರಕರಣ ಇದಾಗಿದೆ' ಎಂಬ ನ್ಯಾಯಾಧೀಶರು ಹೇಳಿದ್ದಾರೆ.

ಅದ್ಮಾರ್ ಸೆಷನ್ಸ್ ನ್ಯಾಯಾಲಯದಲ್ಲಿ ಜಾಮೀನು ಸಿಗದಿದ್ದ ಶಾಲಿನಿ ಹೈಕೋರ್ಟ್ ಮೊರೆ ಹೋಗಿದ್ದರು. ಆದರೆ ಹೈಕೋರ್ಟ್ ಕೂಡ ಅದನ್ನು ಪುರಸ್ಕರಿಸಲಿಲ್ಲ.

ಆರೋಪಿಪರ ವಕೀಲರ ವಾದವನ್ನು ಆಲಿಸಲು ಕೂಡ ನ್ಯಾಯಾಧೀಶರು ನಿರಾಕರಿಸಿದರು. ವಾದ ಈಗ ಬೇಕಾಗಿಲ್ಲ ಈ ಪ್ರಕರಣ ಎಷ್ಟು ಹೀನ ಎಂಬುದು ಗೊತ್ತಾಗಿದೆ ಎಂದು ನ್ಯಾಯಾಧೀಶರು ನುಡಿದರು.

"ಆಡದೇ ಮಾಡಿ ರೂಢಿಯಲ್ಲಿ ಉತ್ತಮನೆನಿಸಿಕೊಳ್ಳುವ ಸರಕಾರ ಇನ್ನೂ ಕನಸು"

ಕನ್ನಡಿಗರ ಪ್ರಜಾಸತ್ತಾತ್ಮಕ ಆಕಾಂಕ್ಷೆಗಳನ್ನು ನೆನಪಿಸುವ ಸಾಹಿತ್ಯ ಸಮ್ಮೇಳನಾಧ್ಯಕ್ಷರ ಭಾಷಣ

ಮತ್ತೊಂದು ಕನ್ನಡ ಸಾಹಿತ್ಯ ಸಮ್ಮೇಳನ ಮುಕ್ತಾಯಗೊಂಡಿತು. ಈ ಬಾರಿಯ 65ನೇ ಸಾಹಿತ್ಯ ಸಮ್ಮೇಳನವನ್ನು ಹಾಸನದಲ್ಲಿ ದೇಶದ ಪ್ರಧಾನಮಂತ್ರಿಗಳು ಉದ್ಘಾಟಿಸಿದ್ದು ಈ ಸಮ್ಮೇಳನದ ಒಂದು ಹೆಗ್ಗಳಿಕೆಯಷ್ಟೇ. ಎಂದಿನಂತೆ ಕನ್ನಡ ಭಾಷೆಯ, ಸಂಸ್ಕೃತಿಯ ಪ್ರಶ್ನೆ ಬಂದಾಗ ಕರ್ನಾಟಕದ ಪರಿಸ್ಥಿತಿಯ ಪ್ರಸ್ತಾಪಗಳೂ ಬಂದವು. ಇದು ಸಹಜ. ಏಕೆಂದರೆ ಸಾಹಿತ್ಯ ಶೂನ್ಯದಲ್ಲಿ ಸೃಷ್ಟಿಯಾಗುವುದಿಲ್ಲ.

ಸಮ್ಮೇಳನಾಧ್ಯಕ್ಷ ಕವಿ ಚೆನ್ನವೀರಕಣವಿಯವರ ಮಾತುಗಳಲ್ಲಿ ಹೇಳುವುದಾದರೆ "ದೇಶ, ಸಮಾಜ ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಇರುವಾಗ ಲೇಖಕನಾದವನು ಅದರಿಂದ ಪ್ರತ್ಯೇಕವಾಗಿ ಉಳಿಯಲಾರ." ತನ್ನ ಈ ಅಭಿಪ್ರಾಯಕ್ಕನುಗುಣವಾಗಿ ಕಣವಿಯವರ ಸಮ್ಮೇಳನಾಧ್ಯಕ್ಷ ಭಾಷಣ ಕೇವಲ ಸಾಹಿತ್ಯಕ್ಕೇ ಸೀಮಿತವಾಗಿರದೆ ಭಾರತ ದೇಶದ, ಅದರ ಭಾಗವಾಗಿ ಕರ್ನಾಟಕದ ಜನಜೀವನವನ್ನು ತಟ್ಟುವ ಎಲ್ಲಾ ಅಂಶಗಳನ್ನು ಪ್ರಸ್ತಾಪಿಸಿತು. "ಪ್ರತಿಬಂಧಕವಿಲ್ಲದ ವ್ಯಕ್ತಿವಾದ ಮತ್ತು ಬೇರು ಕಳಚಿದ ವಿಶ್ವವಾದ ಅಪಾಯಕಾರಿಯಾಗಿ ಬೆಳೆಯುತ್ತಿದೆ" ಎಂಬ ಅವರ ಮಾತು ಜಾಗತೀಕರಣದ ಹೆಸರಲ್ಲಿ ನಡೆಯುತ್ತಿರುವ ಅನ್ಯಾಯವನ್ನು ಕಂಡು ಬೇಸರದಿಂದ ಹೇಳಿದ ಮಾತು.

"ಸರ್ವ ರೋಗಕ್ಕೂ ಮದ್ದು, ಪರಿಹಾರ ಎಂಬಂತೆ ದಲ್ಲಾಳಿ ಹಿಡಿತದ ಮಾರುಕಟ್ಟೆಯ ಅರ್ಥ ವ್ಯವಸ್ಥೆ ಮತ್ತು ಉದಾರೀಕರಣದ ತತ್ವ ಸೂತ್ರಗಳು ಈ ಅಪಾಯಕಾರಿ ವಿಶ್ವವಾದದ ಒಂದು ಮಜಲು" ಎಂದ ಅವರು ಅಂತಿಮವಾಗಿ ಉದಾರೀಕರಣದ ಫಲಶ್ರುತಿ ಎಂದರೆ ಯಾರು ವಿಶೇಷ ಸವಲತ್ತು, ವಿಶೇಷಾಧಿಕಾರಗಳನ್ನು ಪಡೆದಿದ್ದರೋ ಅವರೇ ಸುಖಭೋಗದಲ್ಲಿ ಮುಂದುವರಿಯುವುದು ಹಾಗೂ ಅದಾವುದೂ ಇಲ್ಲದ ನತದೃಷ್ಟ ಜನ ಆಳುವ ವರ್ಗದ ಗುಲಾಮರಾಗಿ ಬಾಳುವುದು ಎಂದಾಗ ದೇಶದ ದುಡಿಯುವ ಜನಗಳ ಕಳೆದ ಐದಾರು ವರ್ಷಗಳ ದುಃಖ-ದುಮ್ಮಾನಗಳ ಹೋರಾಟಗಳು ಅವರ ಕಣ್ಣ ಮುಂದಿದ್ದಿರಬೇಕು.

"ನಮ್ಮ ಎಲ್ಲಾ ಬಗೆಯ ಸೃಜನಾತ್ಮಕ ಬರವಣಿಗೆ, ವಿಮರ್ಶೆಯ ಮೂಲಕ ಭಾರತದ ಪುನಶ್ಶೋಧ ಹಾಗೂ ಭಾರತೀಯತೆಯ ಪುನರ್ವ್ಯಾಖ್ಯಾನ ಅತ್ಯಂತ ಅಗತ್ಯ ಎಂದು ನಾನು ಭಾವಿಸಿದ್ದೇನೆ" ಎನ್ನುತ್ತಾ ಈ ಪುನರ್ವ್ಯಾಖ್ಯಾನ ಎಂದರೆ ಜಡಗಟ್ಟಿರುವುದರ ಗುಣವರ್ಣನೆಯಲ್ಲ ಎಂದೂ ಅವರು ಸ್ಪಷ್ಟಪಡಿಸಿದರು. ಇದೇ ಸಂದರ್ಭದಲ್ಲಿ ಈ ಪುನಶ್ಶೋಧನೆಯ ಬೌದ್ಧಿಕ ಕಾರ್ಯವನ್ನು ಹಿಂದುತ್ವದ ಬೆಂಬಲಿಗರು ತಮ್ಮ ಹಸಿ ಬಿಸಿ ಜಾತೀಯ ವಾದದಿಂದ ಬೇರೆಡೆಗೆ ಹೊರಳಿಸುತ್ತಿರುವುದು ದುರ್ದೈವದ ಸಂಗತಿ ಎಂದು ಹಿಂದುತ್ವವಾದಿಗಳ ದುಷ್ಟತನದ ಬಗ್ಗೆ ಅವರು ಟಿಪ್ಪಣಿ ಮಾಡಿದರು. ಹಿಂದುತ್ವವಾದಿಗಳಿಂದ ಭಾರತೀಯತೆಯ ಪುನರ್ವ್ಯಾಖ್ಯಾನಕ್ಕೆ ಯಾವುದೇ ಕಾಣಿಕೆ ಸಂದಿಲ್ಲ ಮಾತ್ರವಲ್ಲ, ಇವರ ಸಾಮಾಜಿಕ ಆರ್ಥಿಕ ಸಿದ್ಧಾಂತಗಳು ಪಶ್ಚಿಮದಿಂದ ಕಡ ತಂದ ಮುಕ್ತ ಮಾರುಕಟ್ಟೆಯ ಸಿದ್ಧಾಂತಗಳಿಗಿಂತ ಯಾವುದೇ ರೀತಿಯಿಂದ ಭಿನ್ನವಾಗಿಲ್ಲ ಎಂದೂ ಅವರು ಅಭಿಪ್ರಾಯಪಟ್ಟರು. ಒಂದೆಡೆ ಅವರು ಉಳಿದ ಭಾರತೀಯರನ್ನು ದ್ವೇಷಿಸಿದರೆ ಇನ್ನೊಂದೆಡೆ ಸ್ವದೇಶಿಯ ಹೆಸರಲ್ಲಿ ಅವರು ಭಾರತೀಯ ಬೃಹತ್ ಉದ್ಯಮಿಗಳ ರಕ್ಷಣೆ ಮಾಡುತ್ತರಷ್ಟೇ ಎಂದವರು ಹೇಳಿದರು.

"ಜಾತ್ಯಾತೀತತೆ ಎಂದರೆ ಧರ್ಮಗಳಿಗೆ ಸರಕಾರಿ ಬೆಂಬಲ ನೀಡುವುದಲ್ಲ. ಧರ್ಮವನ್ನು ಖಾಸಗಿಗೆ ಬಿಟ್ಟು ದುಷ್ಟತನ, ಸಾಮಾಜಿಕ ಆರ್ಥಿಕ ಅನ್ಯಾಯಗಳ ವಿರುದ್ಧ ಹೋರಾಡುವುದೇ ಜಾತ್ಯಾತೀತತೆಯ ನಿಜವಾದ ಲಕ್ಷಣ" ಎಂಬ ಅವರ ಮಾತನ್ನು ಧರ್ಮ, ಜಾತೀ, ನದಿ ನೀರು, ಭಾಷೆ, ಗಡಿ ಹೆಸರಲ್ಲಿ ಪರಸ್ಪರ ಘರ್ಷಣೆಗಿಳಿಯಬಾರದು ಎಂಬ ಅವರ ಮಾತನ್ನು ಕರ್ನಾಟಕದ ದುಡಿಯುವ ವರ್ಗಗಳ ಜನರು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾರೆ.

"ಬ್ರಿಟಿಶ್ ವಸಾಹತುಶಾಹಿಯಿಂದ ಬಿಡುಗಡೆ ಪಡೆದ ಮೇಲೆ ಬಡ ಭಾರತೀಯನ ಕಣ್ಣೀರನ್ನು ತೊಡೆದು ಹಾಕುವ ಆಶಯ ಈಡೇರಿಲ್ಲ" ಎಂದಾಗಲೀ, "ದೇಶದ ಬಲಿಷ್ಠ ನೂರು ಕಂಪನಿಗಳ ಕೈಯಲ್ಲಿ 66 ಸಾವಿರ ಕೋಟಿಗಿಂತಲೂ ಅಧಿಕ ಆಸ್ತಿ, ಅವುಗಳ ವಾರ್ಷಿಕ ಲಾಭದ ಮೊತ್ತ 10 ಸಾವಿರ ಕೋಟಿಗೂ ಅಧಿಕ ಎಂದು ವರದಿಯಾಗಿದೆ. ಕೋಟಿ ಎಂದರೆ ಏನೆಂದೇ ಅರಿಯದ ಕೋಟ್ಯಾಂತರ ಜನರ ಬಾಳಿನಲ್ಲಿ ಈಗ ಯಾವುದೇ ಅರ್ಥವೂ ಉಳಿದಿಲ್ಲ" ಎಂಬ ಅವರ ವಿಷಾದದಲ್ಲಾಗಲೀ ನಮಗೆ ಸ್ವಾತಂತ್ರ್ಯ ಹೋರಾಟದ ಮೌಲ್ಯಗಳನ್ನು ಮೈಗೂಡಿಸಿಕೊಂಡ ಒಬ್ಬ ನೈಜ ಪ್ರಜಾಪ್ರಭುತ್ವವಾದಿಯ ವ್ಯಾಕುಲತೆ ಎದ್ದು ಕಾಣುತ್ತದೆ.

ಶಿಕ್ಷಣ ಮಾರಾಟದ ವಸ್ತುವಾಗದಂತೆ ನಿಯಂತ್ರಿಸಬೇಕು, ಪ್ರಾಥಮಿಕ ಶಿಕ್ಷಣ ಮಾತೃಭಾಷೆಯಲ್ಲಿಯೇ ಇರಬೇಕು ಎಂಬ ಅವರ ಒತ್ತಾಯ ಎಲ್ಲಾ ಪ್ರಜಾಪ್ರಭುತ್ವವಾದಿಗಳ ಬಹಳ ದಿನಗಳ ಒತ್ತಾಯ. ಇನ್ನೂ ಈಡೇರದ ಒತ್ತಾಯ.

"ಕನ್ನಡದ ಕೆಲಸಗಳನ್ನು ಆಡದೆ ಮಾಡಿ ರೂಢಿಯಲ್ಲಿ ಉತ್ತಮನೆನಿಸಿಕೊಳ್ಳುವಂಥ ಸರಕಾರ ಇನ್ನೂ ಕನಸಾಗಿಯೇ ಉಳಿದಿದೆ" ಎಂದು ಚೆನ್ನವೀರ ಕಣವಿಯರು ನೋವಿನಿಂದ ನುಡಿದಿದ್ದಾರೆ. ಇದಕ್ಕೆ ಕಾರಣವೂ ಅವರ ಭಾಷಣದಲ್ಲೇ ಇತ್ತು. "ಪ್ರಜಾಪ್ರಭುತ್ವ ಎಂದರೆ ಜನಶಕ್ತಿ. ಅದು ಈಗ ಓಟು ನೀಡುವುದಕ್ಕೇ ಸೀಮಿತವಾಗಿದೆ" ಎಂಬ ಅವರ ಮಾತು ಸತ್ಯ. ಇದರಿಂದಾಗಿಯೇ ಕನ್ನಡದ ಕೆಲಸಗಳು, ಮಾತೃಭಾಷೆಯಲ್ಲಿ ಶಿಕ್ಷಣ, ಸಮಾನ ಅಭಿವೃದ್ಧಿ ವಿಕೇಂದ್ರೀಕರಣ ಒಕ್ಕೂ ವ್ಯವಸ್ಥೆ ಎಲ್ಲವೂ ಕನಸಾಗಿಯೇ ಉಳಿದಿವೆ. ಇದು ಎಲ್ಲಾ ಪ್ರಜಾಪ್ರಭುತ್ವವಾದಿಗಳ ನೋವಿನ ಅನುಭವ. ಕಣವಿಯರು ಹೇಳಿದಂತೆ ಪ್ರಜಾಪ್ರಭುತ್ವ ಸೀಮಿತಗೊಳ್ಳದೆ ಅದನ್ನು ವಿಸ್ತರಿಸುವ, ಎಲ್ಲಾ ಜನಸಾಮಾನ್ಯರಿಗೆ, ಮುಖ್ಯವಾಗಿ ದುಡಿಯುವ ಜನಗಳಿಗೆ ಅದನ್ನು ಅರ್ಥಪೂರ್ಣವಾಗಿಸುವ ಪ್ರಯತ್ನ ಇನ್ನಷ್ಟು ದೊಡ್ಡ ಪ್ರಮಾಣದಲ್ಲಿ ನಡೆಯಬೇಕಾಗಿದೆ. ಆಗ ಮಾತ್ರವೇ ಕನ್ನಡದ ಕೆಲಸಗಳನ್ನು ಆಡದೇ ಮಾಡಿ ರೂಢಿಯಲ್ಲಿ ಉತ್ತಮ ಎನಿಸಿಕೊಳ್ಳುವ ಸರಕಾರ ಬರಲು ಸಾಧ್ಯ. ಅದುವರೆಗೆ ನವಂಬರ್, ಡಿಸೆಂಬರ್ ತಿಂಗಳಿಡೀ 'ಕರ್ನಾಟಕ ರಾಜ್ಯೋತ್ಸವ'ದ ಹೆಸರಲ್ಲಿ ಆಳುವ ವರ್ಗಗಳ ರಾಜಕಾರಣಿಗಳ ನೇರ-ಪರೋಕ್ಷ ಪೋಷಣೆಯಲ್ಲಿ ನಡೆಯುವ ಅಬ್ಬರದ ಕಾರ್ಯಕ್ರಮಗಳೇ ಕನ್ನಡದ ಕೆಲಸ ಎನಿಸಿಕೊಳ್ಳುತ್ತವೆ.

– ಕೆ.ವಿ

ಗಣ್ಯರನ್ನು ಒತ್ತೆಯಾಳಾಗಿಸಿದ ಪೆರು ಗೆರಿಲ್ಲಾಗಳು

ದಕ್ಷಿಣ ಆಫ್ರಿಕಾದ ಪೆರುವಿನ ರಾಜಧಾನಿ ಲಿಮಾದಲ್ಲಿ ಎಡಪಂಥೀಯ ಸಂಘಟನೆ ತುಫಾಕ್ ಅಮಾರು ಜಪಾನಿ ರಾಯಭಾರ ಕಛೇರಿ ಮೇಲೆ ಸಶಸ್ತ್ರ ದಾಳಿ ಮಾಡಿ, ಭೋಜನಕೂಟಕ್ಕೆ ಬಂದಿದ್ದ ಪೆರುವಿನ ಹಾಗೂ ವಿದೇಶಗಳ ಹಲವಾರು ಗಣ್ಯ ನಾಯಕರನ್ನು ಒತ್ತೆಯಾಳುಗಳಾಗಿ ಸೆರೆ ಹಿಡಿದಿದ್ದಾರೆ. ತಮ್ಮ ಸಂಘಟನೆಯ 300 ಸಂಗಾತಿಗಳನ್ನು ಬಿಡುಗಡೆ ಮಾಡುವುದೇ ಗೆರಿಲ್ಲಾಗಳ ಮುಖ್ಯ ಬೇಡಿಕೆ. ಈಗಾಗಲೇ ಹಲವು ದಿನಗಳು ಕಳೆದಿದ್ದು, ಈ ಒತ್ತೆಯಾಳು ಬಿಕ್ಕಟ್ಟು ಪರಿಹಾರ ಕಂಡಿಲ್ಲ. ಗೆರಿಲ್ಲಾಗಳು ಪೆರುವಿನ ಜಪಾನಿ ರಾಯಭಾರಿ ಕಚೇರಿಯಲ್ಲಿ, ಚಕ್ರವರ್ತಿ ಅಕಿಹಿಟೋರವರ ಹುಟ್ಟುಹಬ್ಬಕ್ಕಾಗಿ ನೀಡಿದ ಭಾರೀ ಔತಣಕೂಟದಲ್ಲಿ ಭಾಗವಹಿಸಲು ಬಂದಿದ್ದ ಪೆರುವಿನ ಸರಕಾರದ ಸದಸ್ಯರು, ಅಧಿಕಾರಿಗಳು, ಕೈಗಾರಿಕೋದ್ಯಮಿಗಳು, ವಿದೇಶಗಳ ರಾಯಭಾರಿ ಹಾಗೂ ಅವರ ಕುಟುಂಬದವರು, ವಿದೇಶೀ ಕೈಗಾರಿಕೋದ್ಯಮಿಗಳನ್ನು ಒತ್ತೆಯಾಳುಗಳಾಗಿ ತೆಗೆದುಕೊಂಡಿದ್ದರು.

ಪೆರುವಿನ ಜಪಾನಿ ಮೂಲದ ಅಧ್ಯಕ್ಷ ಫುಜಿಮೂರಿ ಗೆರಿಲ್ಲಾಗಳ ಬೇಡಿಕೆಗಳನ್ನು ತಳ್ಳಿಹಾಕಿದ್ದು ಒತ್ತೆಯಾಳುಗಳನ್ನು ಸೆರೆ ಹಿಡಿದಿರುವ ಕಟ್ಟಡವನ್ನು ಕಮಾಂಡೋಗಳು ಸುತ್ತುವರೆದಿದ್ದು, ನೀರು, ವಿದ್ಯುತ್ ಸರಬರಾಜನ್ನು ಕಡಿದು ಹಾಕಲಾಗಿದೆ. ಮೊದಲ ದಿನ ಪೆರುವಿನ ಅಧ್ಯಕ್ಷರ ಕಠಿಣ ಕ್ರಮವನ್ನು ವಿರೋಧಿಸಿದ ಜಪಾನಿ ಸರಕಾರ ಈಗ ಅವರನ್ನು ಬೆಂಬಲಿಸುತ್ತಿದೆ. ಜಪಾನಿ ವಿದೇಶ ಮಂತ್ರಿಗಳು ಲಿಮಾಕ್ಕೆ ಆಗಮಿಸಿದ್ದು, ಪೆರು ಸರಕಾರದ ಜತೆ ಸತತ ಸಂಪರ್ಕವಿರಿಸಿಕೊಂಡಿದ್ದಾರೆ.

ಈ ಮಧ್ಯೆ ಗೆರಿಲ್ಲಾಗಳು ಮೂರು ಹಂತಗಳಲ್ಲಿ ಹಲವಾರು ಒತ್ತೆಯಾಳುಗಳನ್ನು ಬಿಡುಗಡೆ ಮಾಡಿದ್ದು, ಕೆಲವು ಪ್ರಮುಖ ಪೆರು ರಾಜಕಾರಣಿಗಳು, ಅಧಿಕಾರಿಗಳು, ಕಮಾಂಡರು ಗಳು, ಜಪಾನಿ ರಾಜತಾಂತ್ರಿಕ ಸಿಬ್ಬಂದಿ ಹಾಗೂ ಉದ್ಯಮಿಗಳನ್ನು ಒತ್ತೆಯಾಳುಗಳನ್ನಾಗಿ ಮುಂದುವರೆಸು ತ್ತಿದ್ದಾರೆ ಎನ್ನಲಾಗಿದೆ. ಗೆರಿಲ್ಲಾಗಳು ಔತಣಕೂಟದಲ್ಲಿ ಬಂದಿದ್ದ 500 ಕ್ಕೂ ಹೆಚ್ಚು ಒತ್ತೆಯಾಳುಗಳನ್ನು ಸೆರೆ ಹಿಡಿದ್ದು, ಮೂರು ಹಂತದ ಬಿಡುಗಡೆ ನಂತರ ನಿಖರವಾಗಿ ಇನ್ನೂ ಎಷ್ಟು ಒತ್ತೆಯಾಳುಗಳಿದ್ದಾರೆ ಎಂಬುದು ತಿಳಿದು ಬಂದಿಲ್ಲ. ಮೊದಲ ಹಂತದಲ್ಲಿ 225 ಹೆಂಗಸರು ಹಾಗೂ ವೃದ್ಧರನ್ನು ಬಿಡುಗಡೆ ಮಾಡಲಾಗಿತ್ತು. ಎರಡನೇ ಹಂತದಲ್ಲಿ 38 ಹಾಗೂ ಮೂರನೇ ಹಂತದಲ್ಲಿ 225 ಒತ್ತೆಯಾಳುಗಳನ್ನು ಬಿಡುಗಡೆ ಮಾಡಿದ್ದಾರೆ.

ಗೆರಿಲ್ಲಾಗಳು ಪೆರು ಸರಕಾರದ ಒತ್ತಡಕ್ಕೆ ಇನ್ನೂ ಮಣಿದಿಲ್ಲ. ತಮ್ಮ ಹಕ್ಕುಗಳನ್ನು ಕಸಿದುಕೊಂಡಿದ್ದು ಆಕ್ರಮಣ ಮಾಡುವ ಕೊಲೆ ಪಾತಕಿಗಳನ್ನು ಸರಕಾರ ಸಾಕುತ್ತಿದೆ. ಅವರ ಹಕ್ಕುಗಳಿಗಾಗಿ ಹೋರಾಡುವ ಗೆರಿಲ್ಲಾಗಳನ್ನು ಅಪರಾಧಿಗಳೆಂದು ಬಂಧಿಸುತ್ತದೆ, ಬೇಟೆಯಾಡುತ್ತದೆ. ಇದನ್ನು ನಿಲ್ಲಿಸಲು ಈ ಕ್ರಮ ಕೈಗೊಳ್ಳಬೇಕಾಯಿತು ಎಂದು ಗೆರಿಲ್ಲಾಗಳು ಹೇಳಿದ್ದಾರೆ.

ಏಶ್ಯಾದಲ್ಲಿ ಹೊಸ ಶೀತಲ ಸಮರದ ಅಸ್ತ್ರ 'ರೇಡಿಯೋ ಫ್ರೀ ಏಶ್ಯಾ'

ನವೆಂಬರ್ 18 ರಿಂದ ಚೀನಾದ ಟಿಬೆಟ್ ಸ್ವಾಯತ್ತ ಪ್ರದೇಶಗಳಿಗೆ ಗುರಿಮಾಡಿರುವ 'ರೇಡಿಯೋಫ್ರೀ ಏಶ್ಯಾ'ದ ಪ್ರಸಾರವನ್ನು ಅಮೆರಿಕಾ ಪ್ರಾರಂಭಿಸಿದೆ. ಸದ್ಯಕ್ಕೆ ಟಿಬೇಟಿಗೆ ಸೀಮಿತವಾಗಿರುವ ಈ ಪ್ರಸಾರ, ಕ್ರಮೇಣ ಇಡೀ ಚೀನಾಕ್ಕೆ ಮುಟ್ಟುವ ಉದ್ದೇಶ ಹೊಂದಿದೆ. ಮುಂದಿನ ಹಂತದಲ್ಲಿ ಉತ್ತರ ಕೋರಿಯಾ, ವಿಯೆಟ್ನಾಂ, ಲಾವೋಸ್, ಕಾಂಬೋಡಿಯಾಗಳೆಲ್ಲಾ ಈ ಪ್ರಸಾರದ ಅಬ್ಬರಕ್ಕೆ ಗುರಿಯಾಗಲಿವೆ.

ಉದ್ದೇಶ: ಹಿಂದೆ ಪೂರ್ವ ಯುರೋಪಿನಲ್ಲಿ ಸಫಲವಾಗಿ ಬಳಸಲಾದ ತಂತ್ರ. ಸಮಾಜವಾದಿ ವ್ಯವಸ್ಥೆ, ಆದೇಶದ ಸರಕಾರಗಳ ಬಗ್ಗೆ ಸುದ್ದಿ ಮಾಧ್ಯಮದ ಮೂಲಕ ಅಪಪ್ರಚಾರ, ಗೊಂದಲವೆಬ್ಬಿಸುವುದು, ಆ ದೇಶದ ಆಂತರಿಕ ವ್ಯವಹಾರಗಳಲ್ಲಿ ಮೂಗು ತೂರಿಸುವುದು.

ಸದ್ಯಕ್ಕೆ ತನ್ನ ಅಪಪ್ರಚಾರವನ್ನು ದಲೈಲಾಮನನ್ನು ಪುನಃ 'ದೇವರಾಜ' ನನ್ನಾಗಿಸುವುದರ ಮೇಲೆ ಕೇಂದ್ರೀಕರಿಸಿದೆ. ಟಿಬೇಟಿನ ಪ್ರಶ್ನೆಯನ್ನು ಸ್ವಯಂ ನಿರ್ಧಾರದ ಹಕ್ಕಿನ ಪ್ರಶ್ನೆಯಾಗಿ ಬಿಂಬಿಸಲಾಗುತ್ತಿದೆ. ಈ ಮುಖವಾಡದ ಹಿಂದೆ ದಲೈಲಾಮನ ಧಾರ್ಮಿಕ-ಆರ್ಥಿಕ ಪಾಳೇಗಾರಿ ಆಳ್ವಿಕೆಯನ್ನು ಕಿತ್ತೊಗೆದು ಜನತಾ ಕ್ರಾಂತಿಯ ಫಲವನ್ನು ನಿರ್ನಾಮ ಮಾಡಿ, ಅಲ್ಲಿ ಪ್ರತಿಕ್ರಾಂತಿ ನಡೆಸುವುದು ಅವರ ಪ್ರಯತ್ನ.

ಜನತಾ ವಿಮೋಚನಾ ಸೈನ್ಯ(ಕೆಂಪು ಸೈನ್ಯ) ಟಿಬೆಟಿನತ್ತ ಬರುತ್ತಿದ್ದಂತೆ, 1959 ರಲ್ಲಿ ಹತ್ತು ಕೋಟಿ ಡಾಲರಿನಷ್ಟು ಸಂಪತ್ತನ್ನು ಸಾವಿರ ಹಿಮ ಕರಡಿಗಳ ಮೇಲೆ ಸಾಗಿಸಿದ್ದು ಖಂಡಿತ ಈ ಪ್ರಸಾರದ ಭಾಗವಲ್ಲ. ಸಾವಿರ ಕೋಣೆ, 14ಮಾಳಿಗೆಗಳ ಅರಮನೆಯಲ್ಲಿ ವಾಸಿಸುತ್ತಿದ್ದ ಈ ದಲೈಲಾಮ ಹಾಗೂ ಆತನ ನೂರು ಪಾಳೆಯಗಾರರ ಕ್ರೂರ ಆಡಳಿತವನ್ನು ಖಂಡಿತ ಈ ಪ್ರಸಾರ ನೆನಪಿಸುವುದಿಲ್ಲ. ಒಂದೇ ಒಂದು ಆಸ್ಪತ್ರೆ, ಗಾಲಿಯಿದ್ದ ಒಂದೇ ಒಂದು ಗಾಡಿ ಇರದ ದಲೈಲಾಮನ ಟಿಬೇಟನ್ನು ಇಂದು ಆಧುನಿಕ ಟಿಬೇಟ್‌ಗೆ ಈ ಪ್ರಸಾರ ಹೋಲಿಸುವುದಿಲ್ಲ. ಇಂದಿನ ಟಿಬೇಟನ್ನು ಇತರ ಚೀನಾದ ಸಮೃದ್ಧ ಭಾಗಗಳಿಗೆ ಹೋಲಿಸಿ, ಪ್ರಾದೇಶಿಕ ಅಸಮಾನತೆಗೆ ಅನ್ಯಾಯದ ಬಗ್ಗೆ ಪ್ರಚಾರ ಮಾಡಲಾಗುತ್ತಿದೆ. ಚೀನಾ 'ರೇಡಿಯೋ ಫ್ರೀ ಏಶ್ಯಾ'ದ ಆರಂಭದ ಬಗ್ಗೆ ತೀವ್ರ ಪ್ರತಿಭಟನೆ ಸಲ್ಲಿಸಿದೆ.

ಕೊಲ್ಲಿ ಯುದ್ಧದಿಂದ ನರಳುತ್ತಿರುವ ಅಮೆರಿಕನ್ ಸೈನಿಕರು

ಇದೇನು ಕೊಲ್ಲಿಯುದ್ಧದಲ್ಲಿ ಕೆಲವೇ ದಿನಗಳಲ್ಲಿ ವಿಜಯ ಪಡೆದ ಅಮೆರಿಕನ್ ಸೈನಿಕರು ಯುದ್ಧದಿಂದ ನರಳುವುದು ಹೇಗೆ ಎಂದು ಮೂಗು ಮುರಿಯಬೇಡಿ. ಕೊಲ್ಲಿ ಯುದ್ಧದ ವಿಜಯೋನ್ಮಾದ ಮುಗಿಯುತ್ತಿದ್ದಂತೆ ಕೊಲ್ಲಿಯುದ್ಧದಿಂದ ಮರಳಿದ ಅಮೆರಿಕನ್ ಸೈನಿಕರಲ್ಲಿ ಹೆಚ್ಚಿನವರು ವಿಚಿತ್ರ ರೋಗದಿಂದ ಬಳಲುತ್ತಿದ್ದಾರೆ ಎಂದು ತೀವ್ರ ಸುದ್ದಿ ಹಬ್ಬಲಾರಂಭಿಸಿತ್ತು. ಅಮೆರಿಕಾ ಸರಕಾರ ಹಾಗೂ ವಿಧೇಯ ಸುದ್ದಿ ಮಾಧ್ಯಮಗಳು ಈ ಸುದ್ದಿಯನ್ನು ಬ್ಲಾಕ್‌ಔಟ್ ಮಾಡಲು ಯತ್ನಿಸಿದವು. ಆದರೂ ಕೆಲವು ಸಣ್ಣ ಪತ್ರಿಕೆಗಳಲ್ಲಿ ಮೊದಲ ಬಾರಿಗೆ ವರದಿಯಾದ ಈ ಸುದ್ದಿ ಈಗ ತೀವ್ರವಾಗಿ ಹಬ್ಬಿದೆ.

ಆದರೆ ಅಮೆರಿಕದ ಬಲಪಂಥೀಯ ಪತ್ರಿಕೆಗಳಾದ ವಾಶಿಂಗ್‌ಟನ್ ಪೋಸ್ಟ್ ಮುಂತಾದ ಪತ್ರಿಕೆಗಳು ಈ ಬಗ್ಗೆ ವರದಿ ಮಾಡಿದಾಗ ಎಲ್ಲರಿಗೂ ಅರ್ಥವಾಯಿತು. ಅಲ್ಲದೆ ಅವು ಇಬ್ಬರು ಮಾಜಿ ಸಿಐಎ ಅಧಿಕಾರಿಗಳ ಹೇಳಿಕೆ ಆಧಾರದ ಮೇಲೆ ಈ ಸುದ್ದಿಯನ್ನು ಪ್ರಕಟಿಸಿದ್ದವು. ವರದಿಯಾದ ವಿವರಗಳನ್ನು ನೋಡಿದಾಗ ಈ ಸುದ್ದಿಯ ಹಿಂದಿರುವ ನಾಟಕ ಗೊತ್ತಾಗಿದ್ದು, ಈ ವರದಿಯ ಪ್ರಕಾರ ಇರಾಕ್ ಬಳಸಿದ ವಿಷಾನಿಲ ಕಾರಣವೆಂದು ಹೇಳಲಾಗಿತ್ತು.

ಇದು ನಿಜವಾದ ಕಾರಣಗಳನ್ನು ಮುಚ್ಚಿಡುವ ಪ್ರಯತ್ನ. ಕೊಲ್ಲಿ ಯುದ್ಧದಲ್ಲಿ ಭಾಗವಹಿಸಿ ನಂತರ ಹಿಂದುರಿಗಿದ ಏಳು ಲಕ್ಷ ಸೈನಿಕರಲ್ಲಿ ಒಂದು ಲಕ್ಷದಷ್ಟು ಸೈನಿಕರು ವಿಚಿತ್ರ ರೋಗದಿಂದ ಬಳಲುತ್ತಿದ್ದಾರೆ. ಹೆಚ್ಚಿನ ಸೈನಿಕರ ಲಕ್ಷಣಗಳು ಒಂದೇ ಸಮನಾಗಿದ್ದು, ಯುದ್ಧಕ್ಕೆ ಸಂಬಂಧಿಸಿದ ಯಾವುದೋ ಸಾಮಾನ್ಯ ಕಾರಣದಿಂದ ಅವರು ಬಳಲುತ್ತಿದ್ದಾರೆ ಎಂಬುದು ಈಗ ವಿವಾದ ರಹಿತ ಅಂಶ. ಆರಂಭದಲ್ಲಿ ಅಮೆರಿಕನ್ ಸೈನ್ಯ, ಸರಕಾರ ಈ ಬಗ್ಗೆ ನೇಮಿಸಿದ್ದ ಕಮಿಶನ್ ಗಳೆಲ್ಲಾ, ಸೈನಿಕರ ರೋಗಕ್ಕೂ, ಕೊಲ್ಲಿಯುದ್ಧಕ್ಕೂ ಏನೂ ಸಂಬಂಧವಿಲ್ಲ ಎಂದು ಕೊಟ್ಟ ತೀರ್ಪನ್ನು ಯಾರೂ ಈಗ ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲ. ಅದಕ್ಕಾಗಿ ಆ ಹೊಸ ನಾಟಕ.

ರೋಗಗ್ರಸ್ತರಾದ ಸೈನಿಕರು, ಅವರ ಕುಟುಂಬಗಳವರು, ಹಾಗೂ ಸ್ವತಂತ್ರ ಚಿಂತಕರು ಈ ರೋಗದ ಕಾರಣದ ಬಗ್ಗೆ ಅಧ್ಯಯನ ನಡೆಸುತ್ತಿದ್ದಾರೆ. ಅವರ ಅಧ್ಯಯನದ ಪ್ರಕಾರ ಈ ಕೆಳಗಿನ ಕೆಲವು ಅಥವಾ ಎಲ್ಲಾ ಕಾರಣಗಳು ಈ ರೋಗಕ್ಕೆ ಹಾದಿ ಮಾಡಿಕೊಟ್ಟಿದೆ ಎನ್ನುತ್ತಾರೆ.

- ಯುರೇನಿಯಂ ಎಂಬ ವಿಕಿರಣಕಾರಿ ಲೋಹದ ಲೇಪಿತ ಶೆಲ್ ಗಳ ಬಳಕೆಯಿಂದ ಉಂಟಾದ ಯುರೇನಿಯಂ ಧೂಳುಮಿಶ್ರಿತ ಗಾಳಿ ಉಸಿರಾಟದಿಂದ.
- ರಾಸಾಯನಿಕ ಅಸ್ತ್ರ ಹಾಗೂ ರೋಗಗಳನ್ನು ತಡೆಯಲು ಸೈನಿಕರಿಗೆ ಕೊಡುವ ಪ್ರಬಲ ಚುಚ್ಚುಮದ್ದಿನ ದುಷ್ಪರಿಣಾಮ.
- ಅಮೆರಿಕ ಕೊಲ್ಲಿಯುದ್ಧದಲ್ಲಿ ಬಳಸಲು ತಯಾರಾಗಿ ಇಟ್ಟಿದ್ದ ಜೈವಿಕ ಅಸ್ತ್ರಗಳ ದುಷ್ಪರಿಣಾಮದಿಂದ.
- ಯುದ್ಧದಲ್ಲಿ ಬಳಸಿದ ಕ್ರಿಮಿನಾಶಕ, ರಾಸಾಯನಿಕಗಳ ದುಷ್ಪರಿಣಾಮ.

ರೋಗಗ್ರಸ್ತವಾದ ಈ ಸೈನಿಕ ರೋಗದ ನಿಜವಾದ ಕಾರಣ ಪತ್ತೆಹಚ್ಚದೆ ಅದು ಗುಣಮುಖವಾಗುವುದು ಸಾಧ್ಯವಿಲ್ಲ. ಆದರೆ ಆ ಬಗ್ಗೆ ಪ್ರಯತ್ನಿಸದ ಅಮೆರಿಕದ ಸರಕಾರ, ಸೈನ್ಯಾಧಿಕಾರಿಗಳು ನಿಜವಾದ ಕಾರಣಗಳನ್ನು ಮುಚ್ಚಿಡಲು ಪ್ರಯತ್ನಿಸುತ್ತಿದ್ದಾರೆ. ಆದರೆ ಒಂದು ಲಕ್ಷ ಸೈನಿಕರ ಈ ಪಾಡನ್ನು 'ಬ್ಲಾಕ್ ಔಟ್' ಮಾಡಲು ಅವುಗಳಿಗೆ ಸಾಧ್ಯವಾಗುತ್ತಿಲ್ಲ.



ಇಂಡೋನೇಶ್ಯಾ: ನೇಣುಗಂಬದೆದುರು ಟ್ರೇಡ್ ಯೂನಿಯನ್ ನಾಯಕರು


ಮೂವತ್ತು ವರ್ಷಗಳ ಹಿಂದೆ ಬಂಡವಾಳಶಾಹಿ ಜಗತಿನಲ್ಲೇ ಅತಿದೊಡ್ಡ ಕಮ್ಯುನಿಸ್ಟ್ ಪಕ್ಷ ಹಾಗೂ ಭಾರಿ ದೊಡ್ಡ ದುಡಿಯುವಜನರ ಪ್ರಜಾಸತ್ತಾತ್ಮಕ ಸಂಘಟನೆ ಹೊಂದಿದ್ದ ಇಂಡೋನೇಶ್ಯಾದಲ್ಲಿ ಇಂದು ಒಂದು ಮುಷ್ಕರ ಸಂಘಟಿಸಿದರೆ ನೇಣುಗಂಬ ಎದುರಿಸಬೇಕಾಗುತ್ತದೆ. ಚಿತ್ರಹಿಂಸೆ ಅನುಭವಿಸ ಬೇಕಾಗುತ್ತದೆ. ಎಲ್ಲೆಡೆ ಮಾನವ ಹಕ್ಕುಗಳ ಬಗ್ಗೆ ಮಾತನಾಡುವ ಅಮೆರಿಕ, ಇಂಡೋನೇಶ್ಯಾದ ಈ ಕ್ರೌರ್ಯದ ಹಿಂದಿರುವ ಮುಖ್ಯ ಶಕ್ತಿ.

1995 ರ ಜನವರಿಯಲ್ಲಿ ಮುಷ್ಕರ, ಮೇ ದಿನದ(1995) ಪ್ರದರ್ಶನ, 95 ಡಿಸೆಂಬರ್‌ನಲ್ಲಿ 96 ಜುಲೈನಲ್ಲಿ ಪುನಃ ಸಂಘಟಿಸಿ ದ್ದಕ್ಕಾಗಿ ಬಂಧನಕ್ಕೊಳಗಾಗಿರುವ 24 ವರ್ಷದ ದಿತಾ ಸಾರಿ ಈಗ ನೇಣುಗಂಬ ಎದುರು ನೋಡುತ್ತಿದ್ದಾಳೆ. ಮಿಲಿಟರಿ ಸರಕಾರ ಆಕೆಯ ಮೇಲೆ ರಾಜದ್ರೋಹದ ಆಪಾದನೆ ಹೊರಿಸಿದ್ದು, ಅದಕ್ಕೆ ಶಿಕ್ಷೆ ಮರಣ ದಂಡನೆ. ಆಕೆ ಇಂಡೋನೇಷ್ಯಾ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿನಿಯಾಗಿದ್ದು, ಕಾರ್ಮಿಕರ ಸಂಘಟನೆಯಲ್ಲಿ ತೊಡಗಿದ್ದಳು.

ಹುಸೇನ್ ಪೊಂತೊ ರಾಷ್ಟ್ರೀಯ ರೈತ ಯೂನಿಯನ್‌ನ ನಾಯಕನಾಗಿದ್ದು ಹಲವಾರು ಕಾರ್ಮಿಕರ, ರೈತರ ಹೋರಾಟ ಸಂಘಟಿಸಿ ಆತನೂ ಹಾಗೂ ಇತರ ಹಲವಾರು ತರುಣ ಕಾರ್ಯಕರ್ತರು ಇಂಡೋನೇಶ್ಯಾದ ಫ್ಯಾಸಿಸ್ಟ್ ಸರಕಾರದ ದಮನ ನೀತಿ ವಿರುದ್ಧ ಹೋರಾಡುತ್ತಿದ್ದು, ಕೊನೆಗೆ ಜೈಲಿನಲ್ಲಿ ಚಿತ್ರಹಿಂಸೆ ಅಥವಾ ಮರಣ ದಂಡನೆ ಎದುರಿಸಬೇಕಾಗುತ್ತದೆ.

ಕ್ರೂರ ಮಿಲಿಟರಿ ಸರ್ವಾಧಿಕಾರ, ಭಾರಿ ಭ್ರಷ್ಟಾಚಾರ ಹಾಗೂ ಭಾರಿ ಕಡಿಮೆ ಕೂಲಿ ಇರುವ ಈ ದೇಶಕ್ಕೆ ಅಮೆರಿಕನರ ಪ್ರಬಲ ರಾಜಕೀಯ, ಮಿಲಿಟರಿ ಬೆಂಬಲವಿದೆ. ಇತ್ತೀಚೆಗಷ್ಟೇ ಅಮೆರಿಕ ಎಫ್-16 ಯುದ್ಧ ವಿಮಾನಗಳನ್ನು ನೀಡಿದೆ. ಅತ್ಯಾಧುನಿಕ ತಂತ್ರಜ್ಞಾನ ಎಫ್-16 ಯುದ್ಧ ವಿಮಾನಗಳನ್ನು ಅಮೆರಿಕ ತನ್ನ ಅತ್ಯಂತ ಆಪ್ತ ಮಿತ್ರದೇಶಗಳಿಗೆ ಮಾತ್ರ ಕೊಡುವುದು.

ಸಂಸತ್ತಿನ ಚಳಿಗಾಲದ ಅಧಿವೇಶನ ಸಾಧಿಸಿದ್ದೇನು?



ಒಂದು ತಿಂಗಳ ಕಾಲ ನಡೆದ ಸಂಸತ್ತಿನ ಚಳಿಗಾಲದ ಅಧಿವೇಶನದಿಂದ ಜನ ಬಹಳ ನಿರೀಕ್ಷಿಸಿದ್ದರು. ಕನಿಷ್ಠ ಮೂರು ಪ್ರಮುಖ ಮಸೂದೆಗಳ ಬಗ್ಗೆ ಚರ್ಚೆ ನಡೆದು ಶಾಸನಗಳಾಗಬಹುದು ಎಂಬ ನಿರೀಕ್ಷೆ ಎಳ್ಳಷ್ಟು ಈಡೇರಿಲ್ಲ.

ಇವುಗಳಲ್ಲಿ ಅತಿ ಮುಖ್ಯವಾದದ್ದು ಮಹಿಳೆಯರಿಗೆ ಶಾಸನ ಸಭೆಗಳಲ್ಲಿ ಮೂರನೇ ಒಂದಂಶ ಮೀಸಲಾತಿ ಕುರಿತಾದ ಮಸೂದೆ. ದೇವೇಗೌಡರ ಸರಕಾರ ಈ ವಿಷಯದಲ್ಲಿ ಮಹಿಳೆಯರಿಗೆ ಭಾರಿ ವಿಶ್ವಾಸಘಾತ ಮಾಡಿದೆ. ಹಿಂದಿನ ಅಧಿವೇಶನದಲ್ಲೇ ಮಂಡಿಸಲ್ಪಟ್ಟು ಕೆಲವರ ಕುಂಟು ನೆಪಗಳಿಂದಾಗಿ ಅಂಗೀಕಾರಗೊಳ್ಳದೆ ಸೆಲೆಕ್ಟ್ ಕಮಿಟಿಗೆ ಒಪ್ಪಿಸಲ್ಪಟ್ಟ ಈ ಮಸೂದೆ ಪ್ರಸಕ್ತ ಅಧಿವೇಶದಲ್ಲಾದರೂ ಚರ್ಚೆಗೆ ಬಂದು ಅಂಗೀಕಾರಗೊಳ್ಳುತ್ತದೆ ಎಂಬ ನಿರೀಕ್ಷೆಯಿತ್ತು. ಸೆಲೆಕ್ಟ್ ಕಮಿಟಿ ಕೂಡಾ ಕೆಲವು ಸಣ್ಣ ಪುಟ್ಟ ಬದಲಾವಣೆಯೊಂದಿಗೆ ಇದನ್ನು ಅಂಗೀಕರಿಸಬಹುದೆಂದು ಶಿಫಾರಸ್ಸು ಮಾಡಿತ್ತು. ಆದರೂ ಸರಕಾರ ಮತ್ತೊಮ್ಮೆ ಹಿಂಜರಿದಿದೆ. ಧೈರ್ಯದಿಂದ ಮುಂದುವರಿಯುವ ಬದಲು ಮೊಣಕಾಲೂರಿ ಹಿಂದೆ ಸರಿಯುವ ನಿಲುವನ್ನು ಸರಕಾರ ತಳೆದಿದೆ ಎಂದು ಸಿಪಿಐ(ಎಂ) ನ ಕೇಂದ್ರ ಸಮಿತಿ ವಾರಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ'ಯ ಸಂಪಾದಕೀಯ ತೀವ್ರವಾಗಿ ಖಂಡಿಸಿದೆ.

ಇನ್ನೊಂದು ಮಹತ್ವಪೂರ್ಣ ಮಸೂದೆಯೆಂದರೆ ಕೃಷಿ ಕಾರ್ಮಿಕರ ಸಮಗ್ರ ಶಾಸನ ಕುರಿತಾದ ಮಸೂದೆ. ಕೆಲವು ಕಾನೂನು -ಸಂವಿಧಾನಿಕ ತೊಂದರೆ ಗಳಿಂದಾಗಿ ಎಂದು ಸರಕಾರ ಹೇಳುತ್ತಿದೆ. ಇದೊಂದು ಕುಂಟು ನೆಪ-ಇದರ ನಿಜವಾದ ಅರ್ಥ ಭೂಮಾಲಕ ಪ್ರತಿರೋಧವಿದೆ. ಅದನ್ನು ಎದುರಿಸಿ ನಿಲ್ಲಲು ದೇವೇಗೌಡರ ಸರಕಾರಕ್ಕೆ ಆಗುತ್ತಿಲ್ಲ ಎನ್ನುವುದು.

ಮತ್ತೊಂದು ಮಹತ್ವದ ಮಸೂದೆಯೆಂದರೆ ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರ ತಡೆಯಲೆಂಬ ಉದ್ದೇಶದ ಲೋಕಪಾಲ ಮಸೂದೆ. ಈಗ ಗೃಹ ಇಲಾಖೆಯ ಸೆಲೆಕ್ಟ್ ಸಮಿತಿಗೆ ಒಪ್ಪಿಸಲ್ಪಟ್ಟ ಈ ಮಸೂದೆಯೂ ಭ್ರಷ್ಟಾಚಾರ ತಡೆಯುವ ಬದಲು, ಅಂತಹ ಪ್ರಯತ್ನಗಳಲ್ಲಿ ಅಡ್ಡಿ ಉಂಟುಮಾಡಬಹುದಾದ ಹಲವು ಅಂಶಗಳನ್ನು ಹೊಂದಿದೆ. ಸಾರ್ವಜನಿಕ ವ್ಯಕ್ತಿಗಳ ಭ್ರಷ್ಟಾಚಾರಗಳ ವಿರುದ್ಧ ಹೋರಾಟವನ್ನು ಇದು ಹಾಸ್ಯಾಸ್ಪದ ಮಟ್ಟಕ್ಕಿಳಿಸಿತು ಎಂದು ಸಿಪಿಐ(ಎಂ) ಅಭಿಪ್ರಾಯಪಟ್ಟಿದೆ.

ಸಂಯುಕ್ತ ರಂಗದ ಸಮಾನ ಕನಿಷ್ಠ ಕಾರ್ಯಕ್ರಮ ಜನಸಾಮಾನ್ಯರಿಗೆ ಹಲವು ವಚನಗಳನ್ನು ನೀಡಿತ್ತು. ಇದನ್ನು ಮೂಲೆಗೆ ತಳ್ಳುವ ಪ್ರಕ್ರಿಯೆ ಈ ಅಧಿವೇಶನದ ಮುಖ್ಯ ಲಕ್ಷಣವಾಗಿತ್ತು. ಸರಕಾರ ಸಂಸತ್ತಿಗೆ ಬರುವ ಮೊದಲು ಸಾಕಷ್ಟು ಸಿದ್ಧತೆ ಮಾಡಿಕೊಳ್ಳದಿರುವುದು, ಹಲವಾರು ಮಂತ್ರಿಗಳು ಸಂಸತ್ತನ್ನು ಎದುರಿಸಬೇಕಾದ ಸಂದರ್ಭ ಗಳಲ್ಲಿ ಗೈರು ಹಾಜರಾಗುವುದು ದೇವೇ ಗೌಡರ ಮಂತ್ರಿ ಮಂಡಲಗಳಲ್ಲಿ ರಾಜಕೀಯ ಇಚ್ಛಾಶಕ್ತಿಯ ಅಭಾವ ವಿರುವುದನ್ನೂ ಎತ್ತಿ ತೋರಿದೆ ಎಂದಿರುವ ಈ ಸಂಪಾದಕೀಯ ಲೇಖನ ಸಂಯುಕ್ತ ರಂಗವೇ ರೂಪಿಸಿರುವ ಕಾರ್ಯಕ್ರಮದಲ್ಲಿ ಪ್ರಗತಿ ಸಾಧಿಸುವ ಒಂದು ಉತ್ತಮ ಅವಕಾಶ ವನ್ನು ದೇವೇಗೌಡರ ಸರಕಾರ ಕಳೆ ಕೊಂಡಿದೆ ಎಂದು ಅಭಿಪ್ರಾಯ ಪಟ್ಟಿದೆ. ಇದು ವರೆಗೆ ಆರ್ಥಿಕ ರಂಗದಲ್ಲಿನ ಅದರ ವಿಫಲತೆ ಮುಖ್ಯವಾಗಿ ಗೋಧಿ ಬೆಲೆಗಳನ್ನು ಕುರಿತಂತೆ ಅದು ಎಡವಿರುವುದು ಆತಂಕಕಾರಿ.

ಇದರಿಂದ ಜನಗಳ ನಡುವಿನ ಅತೃಪ್ತಿ ಅಧಿಕಗೊಳ್ಳಲಾರಂಭಿಸುತ್ತದೆ. ಡಿಸೆಂಬರ್ 16 ರಂದು ನಡೆದ ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆ ಈಗಾಗಲೇ ಪರ್ಯಾಯ ನೀತಿಗಳಿಗಾಗಿ ಹೋರಾಟ ಮುಂದುವರೆಸುತ್ತದೆಂಬ ಸೂಚನೆ ನೀಡಿದೆ. ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಸರಕಾರ ತೋರಿದ ಜಡತೆಯನ್ನು ಮುರಿಯಲೇಬೇಕು. ಸರಕಾರ ತನ್ನ ನಿಷ್ಕ್ರಿಯತೆಯನ್ನು ಬಿಡುವಂತೆ ಒತ್ತಡ ತರಲು ಎಡಪಕ್ಷಗಳೆಲ್ಲಾ ಒಗ್ಗಟ್ಟಿನಿಂದ ದುಡಿಯುವ ಜನ [illegible]ನ್ನು ಅಣಿನೆರಸುತ್ತದೆ ಎಂ[illegible] ಸಿಪಿಐ(ಎಂ) ಹೇಳಿದೆ.

ಕಾಂ. ಇಎಂಎಸ್ ನಿವೃತ್ತರಾದರೇ?



ಇತ್ತೀಚೆಗೆ ೯೦ರ ಗಡಿ ಮುಟ್ಟುತ್ತಿರುವ ಭಾರತದ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಕಮ್ಯುನಿಸ್ಟ್ ಆಂದೋಲನದ ಮುಂದಾಳದ ಕಾಂ.ಇ.ಎಂ.ಎಸ್.ನಂಬೂದರಿಪ್ಪಾಡ್ ಅವರು ಅನಾರೋಗ್ಯದ ಕಾರಣ ವೈದ್ಯಕೀಯ ಸಲಹೆಯ ಮೇರೆಗೆ ಸಾರ್ವಜನಿಕ ಚಟುವಟಿಕೆಗಳಿಂದ ಮುಕ್ತರಾಗಿ ಹೆಚ್ಚಿ ವಿಶ್ರಾಂತಿ ಪಡೆಯಬೇಕೆಂದು ಸಿಪಿಐ(ಎಂ) ಪಕ್ಷ ನಿರ್ಧರಿಸಿದೆ. ಈ ಸಂದರ್ಭ ಹಲವು ಪತ್ರಿಕೆಗಳು ಕಾಂ.ಇ.ಎಂ.ಎಸ್. ಅವರು ಏಳೆಂಟು ದಶಕಗಳ ದೀರ್ಘ ಕಾಲದಲ್ಲಿ ವಿವಿಧ ರಂಗಗಳಲ್ಲಿ ನೀಡಿದ ಪೂರ್ವ ಕೊಡುಗೆಗಳನ್ನು ನೆನಪಿಸಿಕೊಂಡು ಅಗ್ರ ಲೇಖನಗಳನ್ನು ಹಾಗೂ ಸಂಪಾದಕೀಯಗಳನ್ನು ಪ್ರಕಟಿಸಿವೆ. ಆದರೆ, ಕೆಲವು ಪತ್ರಿಕೆಗಳು ಮುಖ್ಯವಾಗಿ 'ಇಂಡಿಯನ್ ಎಕ್ಸ್‌ಪ್ರೆಸ್' ಇಂಗ್ಲೀಷ್ ಪತ್ರಿಕೆಯು ತನ್ನ ದಿ. ೧೦.೧೨.೯೬ರ ಸಂಪಾದಕೀಯದಲ್ಲಿ ಇ.ಎಂ.ಎಸ್. ಬಹಳ ಕಾಲದ ಹಿಂದೆಯೇ ಚರಿತ್ರೆಯಿಂದ ದೂರವಾಗಿ ನಿವೃತ್ತರಾಗಿದ್ದಾರೆ, ತನ್ನ ಸತ್ವಹೀನ ಸೈದ್ಧಾಂತಿಕ ಭ್ರಮಾಲೋಕದಲ್ಲಿ ವಿಹರಿಸುತ್ತಿದ್ದಾರೆ, ಕಮ್ಯುನಿಸಂ ಒಂದು ಅವಸಾನಗೊಂಡ ಪುರಾತನ ಸಿದ್ಧಾಂತವಾಗಿದೆ, ಅದು ಜನರ ನೋವು ನಲಿವುಗಳಿಗೆ ಸ್ಪಂದಿಸಲು ವಿಫಲವಾಗಿದೆ ಎಂದು ಇತ್ಯಾದಿ ವಿಡಂಬನಾತ್ಮಕ ಟೀಕೆಗಳನ್ನು ಹರಿಯಬಿಟ್ಟಿದೆ. ಅದಕ್ಕೆ ಉತ್ತರವಾಗಿ 'ಸಂಪಾದಕರಿಗೆ ಪತ್ರ'ದ ಕಲಂನಲ್ಲಿ ಪ್ರಕಟಿಸಲು ದಿ. ೧೨.೧೨.೯೬ರಂದು ಸಿಪಿಐ(ಎಂ) ಧಾರವಾಡ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಕಾಂ.ಸಿ.ಆರ್.ಭಟ್ ಒಂದು ಪತ್ರವನ್ನು ಕಳುಹಿಸಿದ್ದಾರೆ. ಇದುವರೆಗೂ ಅದನ್ನು ಪ್ರಕಟಿಸದೇ ಪತ್ರಿಕಾ ಧರ್ಮವನ್ನು ಈ ಪತ್ರಿಕೆ ಉಲ್ಲಂಘಿಸಿದೆ. ಸದ್ಯ ಕಮ್ಯುನಿಸಂ ಸಿಪಿಐ(ಎಂ) ಮತ್ತು ಅವುಗಳ ಧುರೀಣರ ವಿರುದ್ಧ ಬಂಡವಾಳಶಾಹಿ ಪತ್ರಿಕೆಗಳು ಜನಾಭಿಪ್ರಾಯವನ್ನು ತಿರುಚಲು ಪ್ರಯತ್ನಿಸುತ್ತಿರುವಾಗ ಅವುಗಳ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಈ ಪತ್ರದ ಕನ್ನಡ ರೂಪವನ್ನು ಐಕ್ಯರಂಗದ ಓದುಗರಿಗಾಗಿ ಪ್ರಕಟಿಸುತ್ತಿದ್ದೇವೆ.

"ಮಾನ್ಯರೇ, 90ರ ಗಡಿ ಮುಟ್ಟುತ್ತಿರುವ ಇ.ಎಂ.ಎಸ್. ನಂಬೂದರಿಪ್ಪಾಡ್‌ರವರ ಕುರಿತು ನಿಮ್ಮ ದಿ.10ರ ಸಂಪಾದಕೀಯದಲ್ಲಿ ವ್ಯಾಪಕವಾದ ಕುಹಕವಾದ ಟೀಕೆಗಳಿಗೆ ಉತ್ತರವಾಗಿ ಇಎಂಎಸ್ ನಿಜವಾಗಿಯೂ ಶೋಷಕರಾದ ಮೇಲ್ಜಾತಿಗಳ, ಪಾಳೆಯಗಾರಿ ಭೂಮಾಲಕರ, ರಾಜ ಮಹಾರಾಜರ, ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ದೇಶೀಯ ಗುತ್ತೇದಾರಿ ಬಂಡವಾಳಶಾಹಿಗಳ ಮತ್ತು ಚಂಚಲತೆಯ ಸಮಾಜವಾದಿಗಳ, ಭ್ರಷ್ಟ ಹಾಗೂ ಅವಕಾಶವಾದಿ ಕಾಂಗ್ರೆಸ್ಸಿಗರ, ಎಲ್ಲಾ ವಿಧದ ಕೋಮುವಾದಿಗಳ ಚರಿತ್ರೆಯನ್ನು ಹಿಂದಕ್ಕೆ ತಳ್ಳಿದ್ದಾರೆ ಎಂದು ನಿಮ್ಮ ಓದುಗರಿಗೆ ನೆನಪಿಸಲು ಬಯಸುತ್ತೇನೆ. ಅದರ ಬದಲಿಗೆ ಇಎಂಎಸ್ ಸಮಾಜ ಸುಧಾರಕರಾಗಿ, ರಾಷ್ಟ್ರೀಯವಾದಿಯಾಗಿ, ಸ್ವಾತಂತ್ರ್ಯ ಹೋರಾಟಗಾರರಾಗಿ, ಹಿಂದಿನ ಕಾಲದ ಕಾಂಗ್ರೆಸ್ಸಿಗರಾಗಿ ಮತ್ತು ಸಮಾಜವಾದಿಗಳಾಗಿ, ಆರು ದಶಕಗಳಿಗಿಂತಲೂ ಹೆಚ್ಚು ದೀರ್ಘ ಕಾಲದಲ್ಲಿ ಪ್ರಜಾಪ್ರಭುತ್ವ, ಜಾತ್ಯಾತೀತತೆ ಮತ್ತು ಸಮಾಜವಾದ ಇವುಗಳ ಉದಾತ್ತ ಧ್ಯೇಯಗಳಿಗೆ ಕಮ್ಯುನಿಸ್ಟ್ ಕ್ರಾಂತಿಕಾರಿಯಾಗಿ ಶ್ರಮಿಸುತ್ತಾ, ತುಳಿತಕ್ಕೊಳಗಾದವರ, ಶ್ರಮಿಕ ವರ್ಗದ, ಬಡ ರೈತರ, ರಾಷ್ಟ್ರಪ್ರೇಮಿ ಜನರ ಚರಿತ್ರೆಯನ್ನು ಮುಂದಕ್ಕೆ ತೆಗೆದುಕೊಂಡು ಹೋಗಿದ್ದಾರೆ. ಬ್ರಿಟಿಷ್ ಮತ್ತು ಕಾಂಗ್ರೆಸ್ ಆಳ್ವಿಕೆಗಳಲ್ಲಿ ಇಎಂಎಸ್ ಆಗಾಗ ತೀವ್ರ ಹಿಂಸೆಗಳಿಗೆ ಮತ್ತು ಜೈಲು ಶಿಕ್ಷೆಗಳಿಗೆ ಒಳಗಾಗಿದ್ದರು. ಅವಿಭಾಜ್ಯ ಸಿಪಿಐನಲ್ಲೂ ಮತ್ತು ನಂತರ ಸಿಪಿಐ(ಎಂ)ನಲ್ಲಿ ವಿವಿಧ ಜವಾಬ್ದಾರಿಕೆಗಳಲ್ಲಿ ಸೇವೆ ಸಲ್ಲಿಸಿದ್ದು, ಎರಡು ಬಾರಿ ಕೇರಳದ ಮುಖ್ಯಮಂತ್ರಿಯಾಗಿದ್ದು, ಇಂದಿಗೂ ಕೇರಳದ ಮತ್ತು ಭಾರತದ ಭವಿಷ್ಯದ ಬಗ್ಗೆ ಮಾರ್ಗದರ್ಶನ ಮಾಡುವುದರಲ್ಲೂ ತನ್ನ ಕೊಡುಗೆಯನ್ನು ನೀಡುತ್ತಲೇ ಇದ್ದಾರೆ. ಆ ಮೂಲಕ, ಕಮ್ಯುನಿಸಂ ನೆಲಕಚ್ಚುವುದೆಂದೂ, ಅವಸಾನ ಹೊಂದುವುದೆಂದೂ, ಇಎಂಎಸ್ ನಿವೃತ್ತರಾಗುವರೆಂದೂ ನಿರೀಕ್ಷಿಸುವವರ ಆಸೆಗಳನ್ನೆಲ್ಲಾ ಸುಳ್ಳಾಗಿಸಿದ್ದಾರೆ!

"ಇಎಂಎಸ್, ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳು ಪ್ರತಿಪಾದಿಸುತ್ತಾ ಬಂದಿರುವ ಮತ್ತು ಕಾರ್ಯರೂಪಕ್ಕೆ ತರುತ್ತಿರುವ, ವ್ಯಾಪಕವಾಗಿ ರಾಷ್ಟ್ರೀಯ ಸಹಮತ ಪಡೆದಿರುವ ಭೂ ಸುಧಾರಣೆಗಳು, ಕನಿಷ್ಠ ಕೂಲಿಗಳು, ಕಾರ್ಮಿಕರ ಹಕ್ಕುಗಳು, ಮಹಿಳಾ ಸಮಾನತೆ, ಬಡ ಗುಡಿಸಲು ವಾಸಿಗಳಿಗೆ ಮನೆ ಕಟ್ಟಲು ಸ್ಥಳಾವಕಾಶಗಳು, ಜೀವನಾವಶ್ಯಕ ವಸ್ತುಗಳ ಸಾರ್ವಜನಿಕ ವಿತರಣೆ, ಲಂಗುಲಗಾಮಿಲ್ಲದ ಖಾಸಗೀ ಶಿಕ್ಷಣ, ಸಾಕ್ಷರತೆ, ರಾಜ್ಯಗಳಿಗೆ ಹೆಚ್ಚಿನ ಸ್ವಾಯತ್ತತೆ, ಕೇಂದ್ರ ರಾಜ್ಯ ಮತ್ತು ಅಂತರ್-ರಾಜ್ಯಗಳ ನಡುವೆ ಒಳ್ಳೆಯ ಸಂಬಂಧಗಳು, ಸಂವಿಧಾನದ ಕಲಂ 356ರ ರದ್ಧತಿ (ಅಧ್ಯಕ್ಷರ ಆಳ್ವಿಕೆ ಕುರಿತು) ತುರ್ತು ಪರಿಸ್ಥಿತಿ ಮತ್ತು ಸರ್ವಾಧಿಕಾರ ಕೊನೆಗೊಳಿಸುವುದು, ಪಂಚಾಯತ್‌ಗಳಿಗೆ ಮತ್ತು ನಗರಪಾಲಿಕೆಗಳಿಗೆ ಅಧಿಕಾರಗಳ ವಿಕೇಂದ್ರೀಕರಣ, ಯೋಜನೆಯಲ್ಲಿ ಜನರ ಪಾಲುಗೊಳ್ಳುವಿಕೆ, ಅನಿಯಂತ್ರಿತ ಖಾಸಗೀಕರಣ, ಉದಾರೀಕರಣ ಮತ್ತು ಜಾಗತೀಕರಣದ ವಿರುದ್ಧ ಭಾರತದ ಸ್ವಾವಲಂಬನೆ ಹಾಗೂ ಸಾರ್ವಭೌಮತೆ ರಕ್ಷಿಸಲು ಸಾರ್ವಜನಿಕ ಕ್ಷೇತ್ರಕ್ಕೆ ಆದ್ಯತೆಯ ಮಹತ್ವದ ಪಾತ್ರ. ಸಾಮ್ರಾಜ್ಯಶಾಹಿಗಳ ದಬ್ಬಾಳಿಕೆಗಳ ವಿರುದ್ಧ ಮೂರನೇ ಜಗತ್ತಿನ ಪೌರ್ಯತೆ ಮತ್ತು ಅಲಿಪ್ತ ನೀತಿ, ನಶಿಸುತ್ತಿರುವ ಕಾಂಗ್ರೆಸ್ ಮತ್ತು ಕೋಮುವಾದಿ ಬಿಜೆಪಿ ವಿರುದ್ಧ ಎಲ್ಲಾ ಪ್ರಜಾಸತ್ತಾತ್ಮಕ, ಜಾತ್ಯಾತೀತ ಮತ್ತು ಎಡಶಕ್ತಿಗಳ ಐಕ್ಯತೆ. ಇತ್ಯಾದಿಗಳೆಲ್ಲಾ ನಿಮ್ಮ ಸಂಪಾದಕೀಯದಲ್ಲಿ ತಿಳಿಸಿದಂತೆ ಹಟವಾದಿಗಳೇ, ಭ್ರಮೆಗಳೇ ಕಾಲ್ಪನಿಕ ವಿಚಾರಗಳೇ, ವೈರತ್ವದ ಅಂಧಶ್ರದ್ಧೆಗಳೇ, ವಸ್ತು ಸಂಗ್ರಹಾಲಯಗಳಲ್ಲಿ ಪ್ರದರ್ಶನಕಿಡುವವುಗಳೇ ಜನರ ನೋವು ನಲಿವುಗಳಿಗೆ ಸ್ಪಂದಿಸದ ಹೃದಯಹೀನ ವಿಚಾರಗಳೇ?

"ನಿಜ, ಇಎಂಎಸ್ ಶೋಷಣೆ, ಹಗರಣ ಮತ್ತು ಭ್ರಷ್ಟಾಚಾರಗಳ ಮೂಲಕ ಗಳಿಸಿದ ಆಸ್ತಿಗಳನ್ನಾಗಲೀ ಸಾಮ್ರಾಜ್ಯಗಳನ್ನಾಗಲೀ ನಿರ್ಮಾಣ ಮಾಡಲಿಲ್ಲ. ಬದಲು, ತಾನು ಕಮ್ಯುನಿಸ್ಟ್ ಪಕ್ಷಕ್ಕೆ ಸೇರುವ ಪ್ರಾರಂಭದಲ್ಲೇ ತನ್ನ ಅಪಾರ ಆಸ್ತಿ ಸವಲತ್ತುಗಳನ್ನೆಲ್ಲಾ ಪಕ್ಷದ ನಿಧಿಗಾಗಿ ಧಾರೆ ಎರೆದು ಕೊಟ್ಟಿದ್ದರು. ಈಗ ಯಾವ ರಕ್ಷಣಾ ಪಡೆಗಳ ಪಹರೆಗಳಿಲ್ಲದೆ, ಪ್ರಚಾರಗಳ ಅಬ್ಬರವಿಲ್ಲದೆ, ವೇದ ಪುರಾಣಗಳ ಋಷಿಗಳಂತೆ ತಿರುವನಂತಪುರದ ಒಂದು ಓಣಿಯಲ್ಲಿ ಒಂದು ಸಣ್ಣ ಬಾಡಿಗೆ ಮನೆಯಲ್ಲಿ ಅವರು ವಾಸಿಸುತ್ತಿದ್ದಾರೆ. ಆದರೆ ಅವರು ಭಾರತದ ದುಡಿಯುವ ಜನರ ಸಾಮ್ರಾಜ್ಯ ಕಟ್ಟಲು ಮಹತ್ವದ ಕೊಡುಗೆ ನೀಡಿದ್ದಾರೆ. ಆರು ಲಕ್ಷ ಸದಸ್ಯರಿರುವ ಕ್ರಾಂತಿಕಾರ ಸಿಪಿಐ(ಎಂ) ಪಕ್ಷ ಮತ್ತು ಮೂರು ಕೋಟಿ ಸದಸ್ಯರಿರುವ ಅದರ ಮಾರ್ಗದರ್ಶನದಲ್ಲಿರುವ ಸಾಮೂಹಿಕ ಸಂಘಟನೆಗಳು, ಪ.ಬಂಗಾಳ, ತ್ರಿಪುರಾಗಳಲ್ಲಿ ಎಡರಂಗದ ಸರಕಾರಗಳು ಮತ್ತು ಕೇರಳದಲ್ಲಿ ಎಡ ಪ್ರಜಾಸತ್ತಾತ್ಮಕವಾದಿ ರಂಗದ ಸರಕಾರ, ದೇಶಾದ್ಯಂತ ಜವಾಬ್ದಾರಿಯುತ ಪ್ರಜಾಪ್ರಭುತ್ವವಾದಿ, ಜಾತ್ಯಾತೀತ ಹಾಗೂ ಎಡ ಪರ್ಯಾಯ ವಿರೋಧಿ ಶಕ್ತಿಗಳು.. ಇದೇ ಇಎಂಎಸ್ ನೀಡಿರುವ ದುಡಿಯುವ ಜನರ ಸಾಮ್ರಾಜ್ಯ. ಅಲ್ಲದೆ ಸಾವಿಗೆ ಸವಾಲೊಡ್ಡುವ ಮಾರ್ಕ್ಸ್‌ವಾದ-ಲೆನಿನ್‌ವಾದವನ್ನು ಭಾರತದ ಮಣ್ಣಿನಲ್ಲೂ ಪ್ರಯೋಗಿಸಿ ಇನ್ನಷ್ಟು ಶ್ರೀಮಂತಗೊಳಿಸುವಲ್ಲಿ, ಅದಕ್ಕೆ ಅಂತರ್‌ರಾಷ್ಟ್ರೀಯ ಮಾನ್ಯತೆ ಹಾಗೂ ಸೌಹಾರ್ದತೆ ಗಳಿಸುವಲ್ಲಿ, ಇಎಂಎಸ್ ತಮ್ಮ ಅಪೂರ್ವ ಕೊಡುಗೆ ನೀಡಿದ್ದಾರೆ. ಇಎಂಎಸ್ ಮತ್ತು ಸಿಪಿಐ(ಎಂ) ಕೆಲವು ತಪ್ಪುಗಳನ್ನು ಮಾಡಿರಬಹುದು. ವಸ್ತು ಸ್ಥಿತಿಗಳನ್ನು ಅರ್ಥೈಸುವುದರಲ್ಲಿ ಅವುಗಳು ಸಂಭವಿಸಿರಬಹುದು. ಆದರೆ ಅವರಿಗೆ ತಮ್ಮ ತಪ್ಪುಗಳನ್ನು ಒಪ್ಪಿಕೊಳ್ಳುವ ಪ್ರಾಮಾಣಿಕತೆ ಇದೆ. ಅಗತ್ಯದ ತಿದ್ದುಪಡಿಗಳನ್ನು ಮಾಡಿಕೊಂಡು ಮುನ್ನಡೆಯಲು ಅದಮ್ಯ ಆತ್ಮವಿಶ್ವಾಸವೂ ಇದೆ.

"ಹೌದು, ಇಎಂಎಸ್ ಮತ್ತು ಅವರ ಸಂಗಾತಿಗಳ ಕಪಾಟುಗಳಲ್ಲಿ ಪುಸ್ತಕಗಳು, ವರದಿಗಳು, ಠರಾವುಗಳು ಮಾತ್ರ ತುಂಬಿವೆ. ಅವುಗಳು ಎಲ್ಲರಿಗೂ ತೆರದಿವೆ. ಅವುಗಳಿಗೆ ರಹಸ್ಯ ಬೀಗ ಮುದ್ರೆಗಳಿಲ್ಲ. ಅವುಗಳಲ್ಲಿ ಅಕ್ರಮವಾಗಿ ಸಂಗ್ರಹಿಸಿದ ಶೇರು ಸರ್ಟಿಫಿಕೇಟುಗಳಿಲ್ಲ, ಚಿನ್ನ, ಬೆಳ್ಳಿ ಇಲ್ಲ. ಲಂಚ-ರುಷುವತ್ತು ಪಡೆದುದಕ್ಕೆ ಅಥವಾ ಕೊಟ್ಟಿದ್ದಕ್ಕೆ ಸಂಬಂಧಿಸಿದ ರಹಸ್ಯ ಸಂಜ್ಞೆಗಳ ದಿನಚರಿ ಪುಸ್ತಕಗಳಿಲ್ಲ. ಇಎಂಎಸ್ ಮತ್ತು ಅವರ ಸಂಗಾತಿಗಳಿಗೆ ತಮ್ಮ ಮುಂದಿರುವ ಅತ್ಯಂತ ಉದಾತ್ತ ಗುರಿಯಾದ ಜನತಾ ಪ್ರಜಾಪ್ರಭುತ್ವ ಕ್ರಾಂತಿ ಈಡೇರುವವರೆಗೆ ನಿವೃತ್ತಿ ಎಂಬುದೇ ಇಲ್ಲ!

"ಸತ್ಯವು ನಮ್ಮೆಲ್ಲರಿಗೆ ಸಂಬಂಧಿಸಿದ ಕಾರಣ ಎಂದು ನಿಮ್ಮ ಪತ್ರಿಕೆಯ ಧ್ಯೇಯವಾಗಿರುವುದರಿಂದ, ನೀವು ಮುಕ್ತವಾಗೂ ನಿರ್ಭಯ ಪತ್ರಿಕೆಯ ಪ್ರತಿಪಾದಕರಾಗಿರುವುದರಿಂದ, ಈ ಪತ್ರವನ್ನು ಪ್ರಕಟಿಸುವಿರೆಂದೂ, ಈ ಮೂಲಕ ನಿಮ್ಮ ಅಮೂಲ್ಯ ಸ್ಥಳಾವಕಾಶಗಳಲ್ಲಿ ಚರ್ಚೆಗೆ ಅವಕಾಶ ನೀಡಿರುವಿರಿ ಎಂದು ನಾನು ನಂಬಿರುತ್ತೇನೆ.


– ಸಿ.ಆರ್. ಭಟ್

ದುಡಿಯುವ ಜನಸಾಮಾನ್ಯರ ಜೀವನ-ಹೋರಾಟಗಳ ಪ್ರಾಮಾಣಿಕ ಸುದ್ದಿ-ವಿಶ್ಲೇಷಣೆಗಳಿಗೆ ಕರ್ನಾಟಕದ, ಭಾರತದ ಮುಂದಿರುವ ಪ್ರಶ್ನೆಗಳ ವಸ್ತುನಿಷ್ಠ ವಿಶ್ಲೇಷಣೆಗಳಿಗೆ ದುಡಿಯುವ ಜನರ ದೃಷ್ಟಿಕೋನಕ್ಕೆ ವಾರಪತ್ರಿಕೆಯನ್ನು ನಿಯಮಿತವಾಗಿ ಕೊಳ್ಳಿ

ಬಿಡಿ ಪ್ರತಿ	ರೂ. 2.00
ವಾರ್ಷಿಕ ಚಂದಾ	ರೂ. 100.00
ಅರ್ಧವಾರ್ಷಿಕ	ರೂ. 50.00

ಈ ಸಂಚಿಕೆಯ ಮುಖಪುಟದಲ್ಲಿ 'ಐಕ್ಯರಂಗ' ಶೀರ್ಷಿಕೆಯೊಡನೆ ಇರುವ ರೇಖಾ ಚಿತ್ರ ಖ್ಯಾತ ಕಲಾವಿದ ಚಿತ್ತಪ್ರಸಾದ್ ಅವರದ್ದು. 'Peasant Apprentice'(ಅಂದರೆ ರೈತ ವೃತ್ತಿಯ ಮೂಲಪಾಠಗಳನ್ನು ಕಲಿಯುತ್ತಿರುವ ಬಾಲಕ) ಈ ಕಲಾಕೃತಿಗೆ ಅವರಿಟ್ಟ ಹೆಸರು. ಚಿತ್ತಪ್ರಸಾದ್ ಭಾರತೀಯ ರಾಷ್ಟ್ರೀಯ ಕಲಾ ಆಂದೋಲನದ ಒಂದು ವಿಶಿಷ್ಟ ಶೈಲಿಯ ಪಥಪ್ರದರ್ಶಕರು. ವಿಶಾಲ ಜನಸ್ತೋಮದ, ಶೋಷಿತ-ದಲಿತ ಜನಸಾಮಾನ್ಯರ ಕಲಾವಿದ ಅವರು. ತಮ್ಮ ಕೃತಿಯ ಮೂಲಕ ಜನ-ಹಿತಕ್ಕಾಗಿ ದುಡಿದವರು. ಅವರ ರಿನ್ ನಾವಿಕರ ಬಂಡಾಯ ಹಾಗೂ ಕಯ್ಯೂರು ವೀರರಿಗೆ ಶ್ರದ್ಧಾಂಜಲಿ ಅವರ ಕೆಲವು ಪ್ರಮುಖ ಕೃತಿಗಳು.

ಮುಖ ಪುಟದ ಲೇಖನದಲ್ಲಿ ಹೇಳಿರುವಂತೆ ಬಂಡವಾಳಶಾಹಿ ರಾಜಕಾರಣಿಗಳು ಭ್ರಷ್ಟಾಚಾರ ತಡೆ ಕಾನೂನಿನಲ್ಲಿ ಎಂ.ಪಿ.ಗಳನ್ನು ಎಂ.ಎಲ್.ಎ.ಗಳನ್ನು ಒಳಪಡಿಸಬಾರದು ಎಂದು ಆಗ್ರಹಿಸುತ್ತಿರುವ ಬಗ್ಗೆ ಎಕನಾಮಿಕ್ ಟೈಮ್ಸ್‌ನಲ್ಲಿ ಪೊನ್ನಪ್ಪನವರ ವ್ಯಂಗ್ಯ.



ಫ್ರೆಂಚ್ ಟ್ರಕ್ ಡ್ರೈವರ್‌ಗಳ ಮುಷ್ಕರ ಇಡೀ ಯುರೋಪನ್ನು ನಡುಗಿಸಿದ ಸುದ್ದಿಯನ್ನು ಈ ಹಿಂದೆ 'ಐಕ್ಯರಂಗ'ದಲ್ಲಿ ಓದಿರುವಿರಿ. ಒಂದು ಹೆದ್ದಾರಿಯಲ್ಲಿ ವಾಹನ ಸಂಚಾರವನ್ನು ಸ್ಥಗಿತಗೊಳಿಸಿ ಸಾಲು ಗಟ್ಟಿನಿಂತ ಟ್ರಕ್‌ಗಳ ಒಂದು ದೃಶ್ಯ



KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್ ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು – 27 ಫೋನ್ ನಂ. 2236462, ವ್ಯವಸ್ಥಾಪಕ ಕಛೇರಿ: ನಂ.24. 5ನೇ ಮುಖ್ಯ ರಸ್ತೆ ಗಾಂಧಿನಗರ, ಬೆಂಗಳೂರು-9 ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು